ಶನಿವಾರ, ನವೆಂಬರ್ 4, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇಗುಲ ಭೇಟಿ

ಗುಜರಾತ್‌ನ ಗಿರ್ ಸೋಮನಾಥ ಜಿಲ್ಲೆಯ ಸೋಮನಾಥ ಮಹಾದೇವ ದೇವಾಲಯಕ್ಕೆ ಬಾಲಿವುಡ್ ನಟಿ ಕಂಗನಾ ರನೌತ್ ಅವರು ಶುಕ್ರವಾರ ಭೇಟಿ ನೀಡಿದ್ದರು

1,074 ಶಿಫಾರಸುಗಳು ದೀರ್ಘಕಾಲದಿಂದ ಸರ್ಕಾರದಲ್ಲಿ ಬಾಕಿ ● ಜಾಗೃತ ಅರಿವು ಸಪ್ತಾಹ ಕಾರ್ಯಕ್ರಮದಲ್ಲಿ ಪ್ರಸ್ತಾಪ

ಕ್ರಮ ವಿಳಂಬ: ಲೋಕಾಯುಕ್ತರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತವು ಇಲಾಖಾ ವಿಚಾರಣೆ ನಡೆಸಿ ಕಳುಹಿಸುವ ಶಿಫಾರಸುಗಳನ್ನು ಸರ್ಕಾರವು ವರ್ಷಗಟ್ಟಲೆ ಬಾಕಿ ಇರಿಸಿಕೊಳ್ಳುವುದು ಸರಿಯಲ್ಲ. ಈ ರೀತಿಯ ವಿಳಂಬ ಧೋರಣೆ ಕೂಡ ಕರ್ತವ್ಯಲೋಪ ಮತ್ತು ದುರಾಡಳಿತದ ಪರಮಾವಧಿ ಆಗುತ್ತದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

‘ಜಾಗೃತ ಅರಿವು ಸಪ್ತಾಹ’ದ ಅಂಗವಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾದ ಕುರಿತು ಕಳುಹಿಸಿರುವ 1,074 ಶಿಫಾರಸುಗಳು ದೀರ್ಘಕಾಲದಿಂದ ಸರ್ಕಾರದಲ್ಲಿ ಬಾಕಿ ಇವೆ. ಒಂದು ಪ್ರಕರಣದಲ್ಲಿ ಅಧಿಕಾರಿಯ ನಿವೃತ್ತಿ ಎರಡು ವರ್ಷಗಳಿರುವಾಗಲೇ ಶಿಫಾರಸು ಕಳುಹಿಸಲಾಗಿತ್ತು. ಎರಡು ವರ್ಷ ವರದಿಯನ್ನು ಬಾಕಿ ಇರಿಸಿಕೊಂಡು, ನಿವೃತ್ತಿ ಬಳಿಕ ಪಿಂಚಣಿ ತಡೆಹಿಡಿಯಲಾಗಿದೆ ಎಂದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಜಾಗೃತ ಅರಿವು ಸಪ್ತಾಹ ಕಾರ್ಯಾಗಾರದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಮಾತನಾಡಿದರು. ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಇದ್ದರು

ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಿಂದ ನಡೆಸಿದ ಇಲಾಖಾ ವಿಚಾರಣೆಯ ವರದಿಗಳನ್ನು ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯಾಲಯ ನೀಡುವ ತೀರ್ಮಾನ ಆಧರಿಸಿ ತಿರಸ್ಕರಿಸಲಾಗುತ್ತಿದೆ. ಇದು ಸರಿಯಲ್ಲ. ಕ್ರಿಮಿನಲ್ ಪ್ರಕರಣ ಹಾಗೂ ಇಲಾಖಾ ವಿಚಾರಣೆ ಎರಡೂ ಒಂದೇ ಅಲ್ಲ. ನ್ಯಾಯಾಲಯದ ವಿಚಾರಣೆಯಲ್ಲಿ ಸಾಕ್ಷ್ಯದ ಕೊರತೆಯಿಂದ ಖುಲಾಸೆ ಆಗಬಹುದು. ಆದರೆ, ಇಲಾಖಾ ವಿಚಾರಣೆಯಲ್ಲಿ ಸಾಂದರ್ಭಿಕ ಸಾಕ್ಷ್ಯಗಳ ಅಡಿಯಲ್ಲಿ ಶಿಫಾರಸು ಮಾಡಲು ಅವಕಾಶಗಳಿವೆ. ಎರಡನ್ನೂ ಒಂದೇ ರೀತಿ ಪರಿಗಣಿಸುವುದರಿಂದ ತಪ್ಪಿತಸ್ಥರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಹೇಳಿದರು.

ಸರ್ಕಾರದ ವಿವಿಧ ಇಲಾಖೆಗಳ ಹಲವು ಕಚೇರಿಗಳ ಮೇಲೆ ಲೋಕಾಯುಕ್ತದ ಅಧಿಕಾರಿಗಳು ದಾಳಿಮಾಡಿ, ವಿಚಾರಣೆ ನಡೆಸಿದ್ದಾರೆ. ಈ ಸಂಬಂಧ ಸರ್ಕಾರಕ್ಕೆ ಸೂಕ್ತ ಶಿಫಾರಸುಗಳೊಂದಿಗೆ ವರದಿಗಳನ್ನೂ ಸಲ್ಲಿಸಲಾಗಿದೆ. ಆದರೆ, ಈ ವಿಚಾರದಲ್ಲಿ ಸೀಮಿತ ಫಲಿತಾಂಶ ಮಾತ್ರ ಬಂದಿದೆ ಎಂದರು.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಲೋಕಾಯುಕ್ತದ ರಿಜಿಸ್ಟ್ರಾರ್ ಉಷಾ ರಾಣಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಸಿ. ಜಾಫರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ, ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಇದ್ದರು.

‘ಪರ್ಯಾಯ ವಿಚಾರಣೆ ಬೇಡ’

ಭ್ರಷ್ಟಾಚಾರ ಪ್ರಕರಣಗಳಲ್ಲಿ ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿದ ಸಂದರ್ಭಗಳಲ್ಲಿ ಸಕ್ಷಮ ಪ್ರಾಧಿಕಾರಗಳು ಪರ್ಯಾಯ ವಿಚಾರಣೆ ನಡೆಸಬಾರದು. ವಿಳಂಬಕ್ಕೆ ಅವಕಾಶ ಇಲ್ಲದಂತೆ ತೀರ್ಮಾನ ಕೈಗೊಳ್ಳಬೇಕು ಎಂದು ಬಿ.ಎಸ್. ಪಾಟೀಲ ಹೇಳಿದರು.

ಲಂಚ ಪ್ರಕರಣಗಳಲ್ಲಿ ಸಿಕ್ಕಿಬಿದ್ದು, ಅಮಾನತು ಹೊಂದಿದವರನ್ನು ಪುನಃ ಅದೇ ಹುದ್ದೆಗಳಿಗೆ ನೇಮಿಸುವ ಪ್ರವೃತ್ತಿಯನ್ನು ಸರ್ಕಾರ ಕೈಬಿಡಬೇಕು. ಸರ್ಕಾರಿ ನೌಕರರು ತಮ್ಮ ಆದಾಯ, ಆಸ್ತಿ ಮತ್ತು ಸಾಲದ ಮಾಹಿತಿಯನ್ನು ಆನ್‌ಲೈನ್ ಮೂಲಕ ಘೋಷಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಅಂತಹ ಮಾಹಿತಿಗಳನ್ನು ಸಾರ್ವಜನಿಕರ ವೀಕ್ಷಣೆಗೂ ಮುಕ್ತಗೊಳಿಸಬೇಕು ಎಂದು ಲೋಕಾಯುಕ್ತರು ಸಲಹೆ ನೀಡಿದರು.

ಸುದ್ದಿ 2 ನಿಮಿಷ

ಶಾಲೆಗಳಲ್ಲಿ ಶೌಚಾಲಯಕ್ಕೂ ಆದ್ಯತೆ ನೀಡಿ: ದೊರೆಸ್ವಾಮಿ

ಬೆಂಗಳೂರು: ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು ಮತ್ತು ವಿದ್ಯುತ್ ಅನ್ನು ಉಚಿತವಾಗಿ ನೀಡುವುದು ಉತ್ತಮ ನಿರ್ಧಾರ. ಅದರ ಜತೆಗೆ ಶೌಚಾಲಯ, ಸೋರುತ್ತಿರುವ ಛಾವಣಿ, ತಡೆಗೋಡೆ ಮತ್ತು ಪೀಠೋಪಕರಣಗಳ ಬಗ್ಗೆಯೂ ಗಮನ ಹರಿಸುವಂತೆ ಶಿಕ್ಷಣ ತಜ್ಞ ಪ್ರೊ. ಎಂ.ಆರ್.ದೊರೆಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದಾರೆ.

48 ಸಾವಿರ ಶಾಲೆಗಳ ಪೈಕಿ 30 ಸಾವಿರ ಶಾಲೆಗಳಿಗೆ ನೀರು, ವಿದ್ಯುತ್ ಉಚಿತವಾಗಿ ನೀಡುವುದರ ಜತೆ ಇತರ ಮೂಲ ಸೌಲಭ್ಯಗಳನ್ನೂ ಆದ್ಯತೆಯ ಮೇರೆಗೆ ಕಲ್ಪಿಸಬೇಕು. ಇವೆಲ್ಲವನ್ನೂ ಸಮಯ ಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಇಲ್ಲಿ ರಾಜಾಹುಲಿ, ಮೋದಿ ಎದುರು ಇಲಿ: ಸಿದ್ದರಾಮಯ್ಯ

ಬೆಂಗಳೂರು: ‘ಕರ್ನಾಟಕದಲ್ಲಿ ರಾಜಾ ಹುಲಿ ಎಂದು ಕರೆಸಿಕೊಳ್ಳುವ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿಯವರ ಎದುರು ಇಲಿಯಂತೆ ವರ್ತಿಸುವುದು ಅವರ ವ್ಯಕ್ತಿತ್ವಕ್ಕೆ ಭೂಷಣವಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

‘ಪ್ರತಿನಿತ್ಯ ಬೈದರೆ ನರೇಂದ್ರ ಮೋದಿಯವರು ಏಕೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತಾರೆ’ ಎಂಬ ಯಡಿಯೂರಪ್ಪ ಹೇಳಿಕೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ‘ಯಡಿಯೂರಪ್ಪನವರು ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿಯವರನ್ನು ಮೂರೂ ಹೊತ್ತು ಹಾಡಿ ಹೊಗಳುತ್ತಿದ್ದಾರೆ. ಹೀಗಿದ್ದರೂ ಮೋದಿಯವರ ಭೇಟಿಗೆ ಸಮಯಾವಕಾಶ ಸಿಗುತ್ತಿಲ್ಲ. ದೆಹಲಿಗೆ ಹೋಗಿ ದಿನಗಟ್ಟಲೆ ಅವರು ಕಾಯಬೇಕಾಗುತ್ತದೆ. ನರೇಂದ್ರ ಮೋದಿಯವರ ಕುರಿತು ಪ್ರೀತಿಯೂ ಇಲ್ಲ, ದ್ವೇಷವೂ ಇಲ್ಲ. ಕೇಂದ್ರ ಸರ್ಕಾರ ಜನರಿಗೆ ಮಾಡುತ್ತಿರುವ ಅನ್ಯಾಯವನ್ನು ಕಂಡು ಕಣ್ಣು ಮುಚ್ಚಿಕೊಂಡು ಇರಲಾಗುವುದಿಲ್ಲ. ಪ್ರಶ್ನಿಸುವ ಕೆಲಸವನ್ನು ಮಾಡದೆ ಇದ್ದರೆ ಅದು ಜನದ್ರೋಹವಾಗುತ್ತದೆ’ ಎಂದು ಹೇಳಿದ್ದಾರೆ.

‘ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವುದನ್ನು ಯಡಿಯೂರಪ್ಪ ಮರೆತುಬಿಟ್ಟಂತಿದೆ. ಕೇಂದ್ರ ಸರ್ಕಾರ ಎಂದರೆ ಅರಸೊತ್ತಿಗೆ ಅಲ್ಲ, ಮೋದಿ ಅರಸರೂ ಅಲ್ಲ. ಅವರೂ ಜನರಿಂದ ಆಯ್ಕೆಯಾಗಿರುವ ಜನಪ್ರತಿನಿಧಿ ಅಷ್ಟೆ. ಒಕ್ಕೂಟ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿ ಪ್ರಧಾನಿಯ ಗುಲಾಮರಲ್ಲ. ಇಷ್ಟೊಂದು ದೀರ್ಘಕಾಲ ರಾಜಕೀಯದಲ್ಲಿರುವ ಯಡಿಯೂರಪ್ಪನವರಿಗೆ ಪ್ರಜಾಪ್ರಭುತ್ವದ ಈ ಮೂಲ ಪಾಠ ತಿಳಿಯದೆ ಇರುವುದು ದುರಂತವೇ ಸರಿ’ ಎಂದಿದ್ದಾರೆ.

ಡಿಡಿಪಿಐ ಸೇರಿ ಇಬ್ಬರು ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ರಂಗನಾಥಸ್ವಾಮಿ

ಅಸ್ರಾರ್ ಅಹಮ್ಮದ್

ಚಿಕ್ಕಮಗಳೂರು: ಸರ್ಕಾರಿ ಶಾಲೆಯಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿಗೆ ಅನುಮೋದನೆ ನೀಡಲು ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು ₹4 ಸಾವಿರ ಪಡೆಯುವಾಗ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ರಂಗನಾಥಸ್ವಾಮಿ ಮತ್ತು ದ್ವಿತೀಯ ದರ್ಜೆ ಸಹಾಯಕ ಅಸ್ರಾರ್ ಅಹಮ್ಮದ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆಯಡಿ ಶಾಲಾ ಶೌಚಾಲಯ ನಿರ್ಮಾಣ ಯೋಜನೆಗೆ ಮೂಡಿಗೆರೆ ತಾಲ್ಲೂಕಿನ ಹೆಸ್ಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಲ್ಲಿಬೈಲು ಮತ್ತು ಕಡೆಮಡ್ಕಲ್ ಗ್ರಾಮದ ಸರ್ಕಾರಿ ಶಾಲೆಗಳು ಆಯ್ಕೆಯಾಗಿದ್ದವು. ಅವುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು ಬಾಕಿ ಇತ್ತು.

ಅನುಮೋದನೆ ಪಡೆಯಲು ಕಚೇರಿಗೆ ಅಲೆದಾಡಿದ್ದ ಗುತ್ತಿಗೆದಾರ ಅಬುಬಕರ್ ಅವರ ಮಗ ಸಲಾವುದ್ದೀನ್ ನೀಡಿದ ದೂರು ಆಧರಿಸಿ ಲೋಕಾಯುಕ್ತ ಅಧಿಕಾರಿಗಳು ಶುಕ್ರವಾರ ದಾಳಿ ನಡೆಸಿ ಲಂಚದ ಹಣ ಸಮೇತ ಇಬ್ಬರನ್ನು ಬಂಧಿಸಿದ್ದಾರೆ.

‘ಕಚೇರಿಯ ಗುಮಾಸ್ತ ಅಸ್ರಾರ್ ಅಹಮ್ಮದ್ ಅವರಿಗೆ ಪತ್ರ ನೀಡಲು ಉಪನಿರ್ದೇಶಕರು ತಿಳಿಸಿದ್ದರು. ಅದರಂತೆ ಅವರನ್ನು ಸಂಪರ್ಕಿಸಿದಾಗ ಅವರು ಸ್ವೀಕರಿಸಿರಲ್ಲ. ₹1 ಸಾವಿರ ಲಂಚ ನೀಡಿದ ಬಳಿಕ ಸ್ವೀಕೃತಿ ಪತ್ರ ನೀಡಿದರು. ಅನುಮೋದನೆ ನೀಡಲು ₹10 ಸಾವಿರ ಲಂಚ ನೀಡಬೇಕಾಗುತ್ತದೆ ಎಂದು ತಿಳಿಸಿದ್ದರು. ಅದೆಲ್ಲವನ್ನೂ ರೆಕಾರ್ಡ್ ಮಾಡಿಕೊಂಡು ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದೇನೆ’ ಎಂದು ದೂರುದಾರ ತಿಳಿಸಿದ್ದಾರೆ.

ಜಿಗಣಿ ಕಾನ್‌ಸ್ಟೆಬಲ್ ವಶಕ್ಕೆ!

ಆನೇಕಲ್: ಗಾಂಜಾ ಆರೋಪಿ ಬಂಧಿಸಲು ಒಡಿಶಾಗೆ ತೆರಳಿದ್ದ ಆನೇಕಲ್ ತಾಲ್ಲೂಕಿನ ಜಿಗಣಿ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಒಬ್ಬರನ್ನು ಅಲ್ಲಿಯ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಗಾಂಜಾ ಮಾರಾಟ ಮಾಡುತ್ತಿದ್ದ ಸಂಜಯ್ ರಾವುತ್ ಸೇರಿದಂತೆ ಮೂವರನ್ನು ಅಕ್ಟೋಬರ್ 13ರಂದು ಜಿಗಣಿ ಪೊಲೀಸರು ಬಂಧಿಸಿದ್ದರು. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಒಡಿಶಾದಿಂದ ಗಾಂಜಾ ತಂದಿರುವುದಾಗಿ ಹೇಳಿದ್ದರು. ಅವರು ನೀಡಿದ ಮಾಹಿತಿ ಮೇರೆಗೆ ಜಿಗಣಿ ಪೊಲೀಸ್ ಠಾಣೆಯ ಆರು ಪೊಲೀಸರು ಮತ್ತು ಒರಿಯಾ ಭಾಷೆ ಬಲ್ಲ ಯುವಕನೊಂದಿಗೆ ಒಡಿಶಾಕ್ಕೆ ತೆರಳಿದ್ದರು.

ಪೊಲೀಸ್ ದಾಖಲೆ ತೋರಿಸಿದರೂ ಒಡಿಶಾ ಪೊಲೀಸರು ನಂಬದೇ ವಶದಲ್ಲಿಟ್ಟುಕೊಂಡಿದ್ದಾರೆ. ಹೆಚ್ಚುವರಿ ಎಸ್.ಪಿ ಎಂ.ಎಲ್.ಪುರುಷೋತ್ತಮ್ ಮತ್ತು ಇನ್‌ಸ್ಪೆಕ್ಟರ್ ಮಂಜುನಾಥ್ ಅವರು ಸಿಬ್ಬಂದಿಯನ್ನು ಕರೆ ತರಲು ಒಡಿಶಾಗೆ ತೆರಳಿದ್ದಾರೆ.

‘ಕನ್ನಡ ಸಾರ್ವಭೌಮತ್ವ ಸಾಧಿಸಲಿ’

ಗದುಗಿನ ವೀರನಾರಾಯಣ ಸನ್ನಿಧಿಯಲ್ಲಿ ‘ಕನ್ನಡ ಜ್ಯೋತಿ’ ಸ್ವೀಕರಿಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಗದಗ: ಕುಮಾರವ್ಯಾಸನ ‘ಕರ್ನಾಟ ಭಾರತ ಕಥಾಮಂಜರಿ’ ಸೃಷ್ಟಿಗೆ ಜಾಗ ನೀಡಿದ ಇಲ್ಲಿನ ವೀರನಾರಾಯಣ ದೇವಸ್ಥಾನದಲ್ಲಿ ಶುಕ್ರವಾರ ಕನ್ನಡ ಜ್ಯೋತಿ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಕನ್ನಡದಲ್ಲೇ ಮಾತನಾಡುವೆ, ಕನ್ನಡದಲ್ಲೇ ಬರೆಯುವೆ, ವ್ಯವಹರಿಸುವೆ ಎಂಬ ಪ್ರತಿಜ್ಞೆಯನ್ನು ಏಳು ಕೋಟಿ ಕನ್ನಡಿಗರೂ ಮಾಡಬೇಕು’ ಎಂದು ಸಾರಿದರು.

‘ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ’ ಎಂಬ ಆಶಯದೊಂದಿಗೆ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾದ ನೆನಪಿನ ‘ಕರ್ನಾಟಕ ಸಂಭ್ರಮ–50’ ಕಾರ್ಯಕ್ರಮಕ್ಕೆ ಈ ಮೂಲಕ ವಿಜೃಂಭಣೆಯ ಚಾಲನೆ ನೀಡಿದರು.

ಕನ್ನಡ ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ವೀರನಾರಾಯಣ ದೇವಸ್ಥಾನದಿಂದ ಮೆರವಣಿಗೆ ಆರಂಭಗೊಂಡಿತು. ಜಾಮಿಯಾ ಮಸೀದಿ, ಕೆ.ಎಚ್.ಪಾಟೀಲ ವೃತ್ತ ಮಾರ್ಗವಾಗಿ ಭೂಮರಡ್ಡಿ ವೃತ್ತಕ್ಕೆ ಬಂದಾಗ ‘ಕರ್ನಾಟಕ ಸಂಭ್ರಮ–50’ ಕಾರ್ಯಕ್ರಮದ ಗುರುತಿಗಾಗಿ ಜಿಲ್ಲಾಡಳಿತದಿಂದ ನಿರ್ಮಾಣಗೊಂಡಿರುವ ಸ್ತೂಪವನ್ನು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಬಳಿಕ ಮೆರವಣಿಗೆಯು ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕೊನೆಗೊಂಡಿತು. ಮೆರವಣಿಗೆಯಲ್ಲಿ ಸ್ತಬ್ಧ ಚಿತ್ರಗಳು, ಕಲಾ ತಂಡಗಳು ಭಾಗವಹಿಸಿದ್ದವು.

ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಿದ್ದರಾಮಯ್ಯ, ‘ಕನ್ನಡ ಕಲಿಯದೆಯೂ ಕರ್ನಾಟಕದಲ್ಲಿ ವ್ಯವಹರಿಸಬಹುದು ಎನ್ನುವ ವಾತಾವರಣ ಬದಲು ಮಾಡಬೇಕು. ಕನ್ನಡದ ಸಂಸ್ಕೃತಿ ಜತೆಗೆ ನಮ್ಮೆಲ್ಲರಲ್ಲೂ ಕನ್ನಡತನ ಬೇರೂರಬೇಕು. ಆಗ ಮಾತ್ರ ಕನ್ನಡದ ವಾತಾವರಣ ಇಡೀ ನಾಡಿನಲ್ಲಿ ಪಸರಿಸುತ್ತದೆ’ ಎಂದು ಹೇಳಿದರು.

‘ಈ ನಾಡಿನಲ್ಲಿ ಕನ್ನಡತ್ವ ಮತ್ತಷ್ಟು ಆಳವಾಗಿ ಬೇರೂರಬೇಕು. ತಮಿಳುನಾಡು, ಆಂಧ್ರ, ಕೇರಳದಲ್ಲಿ ಅಲ್ಲಿನ ಮಾತೃಭಾಷೆ ಸಾರ್ವಭೌಮತ್ವ ಸಾಧಿಸಿದೆ. ಅಂತೆಯೇ, ನಮ್ಮ ನೆಲ, ಭಾಷೆಯ ಬಗ್ಗೆ ಹೆಮ್ಮೆಪಟ್ಟುಕೊಳ್ಳಬೇಕಾದರೆ ಕನ್ನಡ ನಾಡಿನಲ್ಲೂ ಕನ್ನಡ ವಾತಾವರಣ ನಿರ್ಮಾಣವಾಗಬೇಕು’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಮೆರವಣಿಗೆಯಲ್ಲಿ ಪಾಲ್ಗೊಂಡರು

ಕನ್ನಡ ಪರಂಪರೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಕಾರ್ಯಕ್ರಮ ಇದು. ಆ ಜವಾಬ್ದಾರಿಯನ್ನು ಯುವಜನತೆ ಶ್ರದ್ಧೆಯಿಂದ ಮಾಡಬೇಕು

ಯು.ಟಿ.ಖಾದರ್, ವಿಧಾನಸಭಾಧ್ಯಕ್ಷ

ಬೆಂಗಳೂರಿನಲ್ಲಿ 25 ಅಡಿ ಎತ್ತರದ ಭುವನೇಶ್ವರಿ ಕಂಚಿನ ಪ್ರತಿಮೆ ಸ್ಥಾಪಿಸಲಾಗುವುದು. ಕುಮಾರವ್ಯಾಸ ಭಾರತ’ ಮರು ಮುದ್ರಿಸಿ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದು

ಶಿವರಾಜ ತಂಗಡಗಿ, ಸಚಿವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

‘ಡಿಕೆಶಿಯನ್ನೇ ಮರೆತು ಬಿಟ್ನಲ್ರೀ’

ಸಿದ್ದರಾಮಯ್ಯ ಅವರು ಭಾಷಣ ಪ್ರಾರಂಭಿಸುವ ಮುನ್ನ ವೇದಿಕೆ ಮೇಲಿದ್ದ ಎಲ್ಲ ಸಚಿವರು, ಶಾಸಕರ ಹೆಸರು ಪ್ರಸ್ತಾಪ ಮಾಡಿದರು. ಆದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರನ್ನು ಮರೆತರು. ಆಗ, ಸಚಿವ ಬಿ.ಎಸ್.ಸುರೇಶ್ ಅವರು ಸನ್ನೆ ಮೂಲಕ ನೆನಪಿಸಿದರು. ಬಳಿಕ ಮುಖ್ಯಮಂತ್ರಿ, ‘ಹ್ಞಾಂ, ಡಿ.ಕೆ. ಶಿವಕುಮಾರ್ ಹೆಸರನ್ನೇ ಬಿಟ್ಟು ಬಿಟ್ನಲ್ರೀ’ ಎಂದು ಹೇಳಿದಾಗ, ಸಭೆ ನಗೆಗಡಲಲ್ಲಿ ತೇಲಿತು.

‘ಕೆರೆ ಅತಿಕ್ರಮಣ ತೆರವಿಗೆ ಅಭಿಯಾನ ಆರಂಭವಾಗಲಿ’

ಪ್ರಜಾವಾಣಿ ವಾರ್ತೆ

ಸೊರಬ (ಶಿವಮೊಗ್ಗ): ‘ಕೆರೆಗಳ ಅತಿಕ್ರಮಣ ತೆರವು ಪ್ರಕ್ರಿಯೆ ಪೂರ್ಣಗೊಳಿಸಲು ಆಯಾ ಜಿಲ್ಲಾಡಳಿತ ಕಾಲಮಿತಿಯಲ್ಲಿ ಅಭಿಯಾನ ಆರಂಭಿಸಬೇಕು. ಇದಕ್ಕೆ ಪೂರಕವಾಗಿ ರಾಜ್ಯದಲ್ಲಿರುವ 3,000 ಕೆರೆ ಅಭಿವೃದ್ಧಿ ಸಂಘಗಳಿಗೆ ಜೀವ ತುಂಬಬೇಕು’ ಎಂದು ಸೊರಬ ತಾಲ್ಲೂಕಿನ ಉದ್ರಿ ಗ್ರಾಮದಲ್ಲಿ ಶುಕ್ರವಾರ ನಡೆದ ಮಲೆನಾಡಿನ ಕೆರೆ, ಕಾನು ಸಂರಕ್ಷಣಾ ಸಮಾವೇಶದಲ್ಲಿ ಸರ್ಕಾರವನ್ನು ಒತ್ತಾಯಿಸಲಾಯಿತು.

ಮಲೆನಾಡಿನ ಕೆರೆಗಳ ಜಲಾನಯನ ಪ್ರದೇಶದಲ್ಲಿರುವ ಅರಣ್ಯಗಳಿಗೆ ರಕ್ಷಣಾ ಕವಚ ತೊಡಿಸಲು ಅರಣ್ಯ ಇಲಾಖೆ ವಿಶೇಷ ಯೋಜನೆ ಪ್ರಕಟಿಸಬೇಕು ಎಂಬ ನಿರ್ಣಯವನ್ನೂ ಇದೇ ವೇಳೆ ಕೈಗೊಳ್ಳಲಾಯಿತು.

ಸರ್ಕಾರ ಕೆರೆ ಪುನಶ್ಚೇತನ ಯೋಜನೆಯನ್ನು ಸುಸ್ಥಿರವಾಗಿ ರೂಪಿಸಲು ಸಾರ್ವಜನಿಕ ಸಹಭಾಗಿತ್ವದಲ್ಲಿ ಕ್ರಿಯಾ ಯೋಜನೆ ರೂಪಿಸಬೇಕು. ದೇವರಕಾಡು, ಮಿರಿಸ್ಟಿಕಾ ಸ್ವಾಂಪ್ (ರಾಮಪತ್ರೆ ಜಡ್ಡಿ) ಗಳಂಥ ಸೂಕ್ಷ್ಮ ಅರಣ್ಯಗಳನ್ನು ಜೈವಿಕ ಪಾರಂಪರಿಕ ಪ್ರದೇಶ ಎಂದು ಜೀವವೈವಿಧ್ಯ ಸಮಿತಿಗಳನ್ನು ಗುರುತಿಸಿ ಮಾನ್ಯತೆ ನೀಡಬೇಕು.

ಕೆರೆ ಅಭಿವೃದ್ಧಿ ಪ್ರಾಧಿಕಾರ, ಜೌಗು ಪ್ರದೇಶ ರಕ್ಷಣಾ ಪ್ರಾಧಿಕಾರಗಳಿಗೆ ಬಲ ನೀಡಬೇಕು. ಸಣ್ಣ ನೀರಾವರಿ ಇಲಾಖೆ, ಜಿಲ್ಲಾ ಪಂಚಾಯಿತಿ ನಡುವೆ ಸಮನ್ವಯ ಹೆಚ್ಚಿಸಬೇಕು. ಜೌಗು ಭೂಮಿ ಸಂರಕ್ಷಣೆ ಬಗ್ಗೆ ಗ್ರಾಮ ಪಂಚಾಯಿತಿಗಳಿಗೆ ಮಾಹಿತಿ ಮತ್ತು ಅನುದಾನ ನೀಡಬೇಕು.

ನಗದು, ಮೊಬೈಲ್ ಕಿತ್ತೊಯ್ಯುವ ದುಷ್ಕರ್ಮಿಗಳು

ಗಸ್ತು ತಿರುಗದ ಪೊಲೀಸರು ಹೆಚ್ಚಿದ ಸುಲಿಗೆ, ಹಲ್ಲೆ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರ ಠಾಣೆ ವ್ಯಾಪ್ತಿಯ ಕಂಟೋನ್ಮೆಂಟ್ ರೈಲು ನಿಲ್ದಾಣ ಬಳಿ ಪತ್ರಿಕಾ ವಿತರಕ ಆಂಥೋನಿ ಸಿ. (75) ಅವರನ್ನು ಅಡ್ಡಗಟ್ಟಿ ತೊಡೆಗೆ ಚಾಕುವಿನಿಂದ ಇರಿಯಲಾಗಿದ್ದು, ತೀವ್ರ ಗಾಯಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಲಸೂರು ಠಾಣೆ ವ್ಯಾಪ್ತಿಯ ಸರಸ್ವತಿಪುರದಲ್ಲಿ ಪತ್ರಿಕಾ ವಿತರಕರೊಬ್ಬರನ್ನು ಅಡ್ಡಗಟ್ಟಿ ಸುಲಿಗೆ ಮಾಡಿದ್ದ ಪ್ರಕರಣದ ಬೆನ್ನಲ್ಲೇ ಈ ಘಟನೆ ನಡೆದಿದ್ದು, ಪೊಲೀಸರು ಸಮರ್ಪಕವಾಗಿ ಗಸ್ತು ತಿರುಗುತ್ತಿಲ್ಲವೆಂಬ ಆರೋಪ ವ್ಯಕ್ತವಾಗಿದೆ.

‘ಲಿಂಗರಾಜಪುರ ಬಳಿಯ ಥಾಮಸ್ ಟೌನ್‌ನ ನಿವಾಸಿ ಆಂಥೋನಿ, ಹಲವು ವರ್ಷಗಳಿಂದ ಪತ್ರಿಕೆಗಳ ವಿತರಣೆ ಮಾಡುತ್ತಿದ್ದಾರೆ. ಶುಕ್ರವಾರ (ನ.3) ಬೆಳಿಗ್ಗೆ 4.30 ಗಂಟೆ ಸುಮಾರಿಗೆ ಪತ್ರಿಕೆ ಹಂಚಲೆಂದು ಮನೆಯಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದತ್ತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಪತ್ರಿಕೆ ವಿತರಣೆ ಹುಡುಗರಿಗೆ ಕರೆ ಮಾಡಲು ರಸ್ತೆ ಪಕ್ಕದಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿದ್ದರು. ಸ್ಥಳಕ್ಕೆ ಬಂದಿದ್ದ ಇಬ್ಬರು ದುಷ್ಕರ್ಮಿಗಳು, ಹಣಕ್ಕಾಗಿ ಒತ್ತಾಯಿಸಿದ್ದರು. ಹಣ ನೀಡದಿದ್ದಕ್ಕೆ ತೊಡೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ’ ಎಂದು ಸಹೋದ್ಯೋಗಿಗಳು ಹೇಳಿದರು.

ಸಿಬಿಡಿಯಲ್ಲಿ ಸುಲಿಗೆ, ಹಲ್ಲೆ ಹೆಚ್ಚಳ: ವಿಧಾನಸೌಧದ ಸುತ್ತಮುತ್ತಲಿನ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಸುಲಿಗೆ ಹಾಗೂ ಹಲ್ಲೆ ಪ್ರಕರಣಗಳು ವರದಿಯಾಗುತ್ತಿವೆ. ಆದರೆ, ಅಪರಾಧಗಳ ನಿಯಂತ್ರಣಕ್ಕೆ ಪೊಲೀಸರು ಕ್ರಮ ಕೈಗೊಳ್ಳದಿದ್ದಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪತ್ರಿಕಾ ವಿತರಕ ಆಂಥೋನಿ

ಅಪರಾಧ ಸುದ್ದಿ

ನಿತ್ಯವೂ ಆಗುತ್ತಿರುವ ಸುಲಿಗೆ, ಹಲ್ಲೆ ಪ್ರಕರಣಗಳು ಗಮನಕ್ಕೆ ಬಂದಿವೆ. ಆರೋಪಿಗಳ ಪತ್ತೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು. ಗಸ್ತು ಹೆಚ್ಚಿಸಲಾಗುವುದು

ಡಿ. ದೇವರಾಜ್, ಪಶ್ಚಿಮ ವಿಭಾಗದ ಡಿಸಿಪಿ

‘ನಿತ್ಯವೂ ತಡರಾತ್ರಿ ಹಾಗೂ ನಸುಕಿನಲ್ಲಿ ರಸ್ತೆಯಲ್ಲಿ ಹೋಗುವವರನ್ನು ಅಡ್ಡಗಟ್ಟುತ್ತಿರುವ ದುಷ್ಕರ್ಮಿಗಳು, ಮಾರಕಾಸ್ತ್ರ ತೋರಿಸಿ ಬೆದರಿಸುತ್ತಿದ್ದಾರೆ. ಮೊಬೈಲ್, ನಗದು ಹಾಗೂ ಇತರೆ ವಸ್ತುಗಳನ್ನು ಸುಲಿಗೆ ಮಾಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಚಾಕುವಿನಿಂದ ಇರಿದು ಕೊಲೆಗೂ ಯತ್ನಿಸುತ್ತಿರುವ ಪ್ರಕರಣಗಳು ವರದಿಯಾಗಿವೆ’ ಎಂದು ಸ್ಥಳೀಯರು ದೂರಿದರು.

‘ಅಶೋಕನಗರ, ಭಾರತಿನಗರ, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ, ಹಲಸೂರು, ಕೆ.ಜಿ.ಹಳ್ಳಿ, ಬಾಣಸವಾಡಿ ಹಾಗೂ ಸುತ್ತಮುತ್ತಲಿನ ಠಾಣೆಗಳ ವ್ಯಾಪ್ತಿಯಲ್ಲಿ ಸುಲಿಗೆ ಪ್ರಕರಣಗಳು ಹೆಚ್ಚಾಗುತ್ತಿವೆ. ಸಂತ್ರಸ್ತರು ದೂರು ನೀಡುತ್ತಿದ್ದು, ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ಮೌನವಾಗುತ್ತಿದ್ದಾರೆ’ ಎಂದು ಆರೋಪಿಸಿದರು.

‘ಆರೋಪಿಗಳನ್ನು ಪತ್ತೆ ಮಾಡಲು ಪೊಲೀಸರು ಆಸಕ್ತಿ ತೋರಿಸುತ್ತಿಲ್ಲ. ಜೊತೆಗೆ, ಅಪರಾಧ ನಡೆಯುವ ಸ್ಥಳಗಳನ್ನು ಗುರುತಿಸಿ ಗಸ್ತು ಹೆಚ್ಚಿಸುವ ಬಗ್ಗೆಯೂ ಗಮನ ಹರಿಸಿಲ್ಲ’ ಎಂದು ಸ್ಥಳೀಯರು ದೂರಿದರು.

ಪತ್ರಿಕೆ ಹಂಚುವವರ ಮೇಲೆ ಹಲ್ಲೆ

‘ಪತ್ರಿಕಾ ವಿತರಕರು, ನಿತ್ಯವೂ ನಸುಕಿನ 3 ಗಂಟೆಯಿಂದಲೇ ಮನೆ ಮನೆಗೆ ಪತ್ರಿಕೆ ಹಂಚಲು ತೆರಳುತ್ತಿದ್ದಾರೆ. ಪತ್ರಿಕಾ ವಿತರಕರನ್ನು ರಸ್ತೆಯಲ್ಲಿ ಅಡ್ಡಗಟ್ಟುತ್ತಿರುವ ದುಷ್ಕರ್ಮಿಗಳು, ಚಾಕು ತೋರಿಸಿ ಸುಲಿಗೆ ಮಾಡುತ್ತಿದ್ದಾರೆ’ ಎಂದು ಸಾರ್ವಜನಿಕರು ಹೇಳಿದರು.

‘ಪತ್ರಿಕಾ ವಿತರಕರ ಮೇಲೆ ನಡೆದ ಹಲ್ಲೆ ಬಗ್ಗೆ ಹಲಸೂರು ಹಾಗೂ ಶಿವಾಜಿನಗರ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಆದರೆ, ಇದುವರೆಗೂ ಪೊಲೀಸರು ಆರೋಪಿಗಳನ್ನು ಬಂಧಿಸಿಲ್ಲ’ ಎಂದು ದೂರಿದರು.

ಲಾಂಗ್ ತೋರಿಸಿ ಸುಲಿಗೆ: ಹಲಸೂರು ಬಳಿಯ ಸರಸ್ವತಿಪುರದಲ್ಲಿ ದ್ವಿಚಕ್ರ ವಾಹನದಲ್ಲಿ ಅ.17ರಂದು ಹೊರಟಿದ್ದ ಪತ್ರಿಕಾ ವಿತರಕ ವೆಂಕಟೇಶ್ ಪ್ರಸಾದ್ ಅವರನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ನಗದು ಹಾಗೂ ಮೊಬೈಲ್ ಸುಲಿಗೆ ಮಾಡಿದ್ದರು. ಈ ಬಗ್ಗೆಯೂ ದೂರು ದಾಖಲಾಗಿದ್ದು, ಇದುವರೆಗೂ ಆರೋಪಿಗಳ ಬಂಧನವಾಗಿಲ್ಲವೆಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು.

ಎಸ್‌ಇಪಿ: ಎಲ್ಲ ವರ್ಗದ ಮಕ್ಕಳ ಭವಿಷ್ಯಕ್ಕೆ ಬುನಾದಿ

ಮೊದಲ ಸಭೆಯ ನಂತರ ಆಯೋಗದ ಅಧ್ಯಕ್ಷ ಸುಖದೇವ್ ಥೋರಟ್ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ರೂಪಿಸುವ ಕಾರ್ಯವನ್ನು ಆಯೋಗ ಆರಂಭಿಸಿದ್ದು, ಶಾಲಾ ಹಾಗೂ ಉನ್ನತ ಶಿಕ್ಷಣ ಅನುಸರಿಸಿದ್ದ ಹಿಂದಿನ ಶಿಕ್ಷಣ ನೀತಿಗಳನ್ನು ಮೊದಲ ಹಂತದಲ್ಲಿ ಪರಿಶೀಲಿಸಲಿದೆ.

ಬೆಂಗಳೂರಿನಲ್ಲಿ ನಡೆಸಿದ ಎರಡು ದಿನಗಳ ಮೊದಲ ಸಭೆಯಲ್ಲಿ ಶಿಕ್ಷಣ ನೀತಿಯ ರೂಪುರೇಷೆಗಳ ಕುರಿತು ಚರ್ಚೆ ನಡೆದಿದೆ. ಕರ್ನಾಟಕದ ಶಿಕ್ಷಣ ಸ್ವರೂಪ ಕುರಿತು ವಿವಿಧ ವಿಷಯಗಳನ್ನು ಅಧ್ಯಯನ ಮಾಡಲು, ವರದಿಯನ್ನು ಸಿದ್ಧಪಡಿಸಲು ಹಾಗೂ ಎಲ್ಲ ಕೆಲಸಗಳು ಸುಸೂತ್ರವಾಗಿ ನೆರವೇರಿಸಲು 9 ಉಪ ಸಮಿತಿಗಳನ್ನು ರಚಿಸಲಾಗಿದೆ. ರಾಜ್ಯದ ಹೊಸ ಶಿಕ್ಷಣ ನೀತಿಯು ಎಲ್ಲ ವರ್ಗದ ಮಕ್ಕಳ ಭವಿಷ್ಯದ ಶಿಕ್ಷಣಕ್ಕೆ ಬುನಾದಿಯಾಗಲಿದೆ ಎಂದು ಎಸ್‌ಇಪಿ ಆಯೋಗದ ಅಧ್ಯಕ್ಷ ಸುಖದೇವ್ ಥೋರಟ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ರಾಜ್ಯ ಶಿಕ್ಷಣ ನೀತಿಯ ಕರಡು ರಚಿಸಲು ಸರ್ಕಾರ ನಮಗೆ ಆದೇಶ ನೀಡಿದೆ. ಮೊದಲ ಹಂತದಲ್ಲಿ ಶಾಲೆ ಮತ್ತು ಉನ್ನತ ಶಿಕ್ಷಣದ ಪ್ರಸ್ತುತ ಸ್ಥಿತಿಗತಿಗಳನ್ನು ಪರಿಶೀಲಿಸಲಾಗುವುದು. ರಾಜ್ಯದಲ್ಲಿನ ಒಟ್ಟಾರೆ ಶಿಕ್ಷಣದ ಸಾಧನೆಯನ್ನು ಪರಿಶೀಲಿಸಲಾಗುವುದು. ದಾಖಲಾತಿ, ಪ್ರವೇಶ, ಆಡಳಿತ ರಚನೆ, ಹಣಕಾಸು ಮತ್ತು ಧನಸಹಾಯ, ವೆಚ್ಚ, ಗುಣಮಟ್ಟದ ಶಿಕ್ಷಣ, ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ, ಅಧ್ಯಾಪಕರು ಮತ್ತು ಮೌಲ್ಯ ಶಿಕ್ಷಣದಂತಹ ಅಂಶಗಳತ್ತ ಗಮನಹರಿಸಲಿದೆ’ ಎಂದು ವಿವರಿಸಿದರು.

ಸಾರ್ವಜನಿಕರು, ಪೋಷಕರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿ ನಾಲ್ಕು ವಿಭಾಗಗಳಲ್ಲಿ ಸಮಾಲೋಚನೆ ನಡೆಸಲಾಗುವುದು. ನೀತಿಯ ಕುರಿತು ಅವರ ಜತೆ ಸಂವಹನ ನಡೆಸಿ, ಪ್ರತಿಕ್ರಿಯೆಗಳನ್ನು ದಾಖಲಿಸಲಾಗುವುದು. ಆಳವಾದ ಅಧ್ಯಯನ ಮತ್ತು ಸಂಶೋಧನೆಗೆ ಒತ್ತು ನೀಡಲಾಗುವುದು. ಸರ್ಕಾರದ ಸೂಚನೆಯಂತೆ ಬರುವ ಮಾರ್ಚ್ (2024) ಒಳಗೆ ವರದಿ ಸಲ್ಲಿಸುವ ಗುರಿ ಇಟ್ಟುಕೊಂಡು ಕೆಲಸ ಆರಂಭಿಸಿದ್ದೇವೆ. ಸಮಯದ ಅಗತ್ಯವಿದ್ದರೆ ವಿಸ್ತರಣೆ ಕೋರುತ್ತದೆ. ಆಯೋಗದ ಶಿಫಾರಸುಗಳು ಸಂಗ್ರಹಿಸುವ ದತ್ತಾಂಶ, ಸಮೀಕ್ಷೆ ಮತ್ತು ಸಂಶೋಧನೆಗಳನ್ನು ಆಧರಿಸಿರುತ್ತವೆ. ಸತ್ಯಾಂಶಗಳಿಗೆ ಮನ್ನಣೆ ನೀಡಲಾಗುವುದು, ಊಹೆಗಳಿಗೆ ಅವಕಾಶ ಇರುವುದಿಲ್ಲ ಎಂದು ಹೇಳಿದರು.

ಎನ್‌ಇಪಿ ಶ್ಲಾಘಿಸಿದ್ದ ಥೋರಟ್

ಬೆಂಗಳೂರಿನಲ್ಲಿ ಕೆಲ ತಿಂಗಳ ಹಿಂದೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಥೋರಟ್ ಅವರು ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಕೆಲ ಅಂಶಗಳನ್ನು ಶ್ಲಾಘಿಸಿದ್ದರು.

ಎನ್‌ಇಪಿಯಲ್ಲಿ ಪದವಿ ಹಂತದ ವಿದ್ಯಾರ್ಥಿಗಳಿಗೆ ನೀಡಿರುವ ಬಹು ಪ್ರವೇಶ ಮತ್ತು ನಿರ್ಗಮನ ಆಯ್ಕೆಯ ಅವಕಾಶದ ಬಗ್ಗೆ ಥೋರಟ್ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಎಸ್‌ಇಪಿಯಲ್ಲೂ ಈ ಅಂಶವನ್ನು ಪರಿಗಣಿಸಬಹುದು ಎಂದು ಸರ್ಕಾರಕ್ಕೆ ಸಲಹೆ ನೀಡಿದ್ದರು.

ಈ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈಗ ನಾನು ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಈ ಹಂತದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯ ಮುಖ್ಯವಲ್ಲ’ ಎಂದರು.

ದುಬೈನಲ್ಲಿ ಕುಳಿತು ತಂತ್ರ ರೂಪಿಸಿದ ಕುಮಾರಸ್ವಾಮಿ- ಯೋಗೇಶ್ವರ್

ಡಿ.ಕೆ. ಸುರೇಶ್ ವಿರುದ್ಧ ಸಿಪಿವೈ ಮೈತ್ರಿ ಅಭ್ಯರ್ಥಿ?

● ಓದೇಶ ಸಕಲೇಶಪುರ

ರಾಮನಗರ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರನ್ನು ಸೋಲಿಸಲು ಎಚ್.ಡಿ. ಕುಮಾರಸ್ವಾಮಿ ಮತ್ತು ಸಿ.ಪಿ. ಯೋಗೇಶ್ವರ್ ಅವರು ದುಬೈನಲ್ಲಿ ಕುಳಿತು ಹೊಸ ತಂತ್ರ ಹೆಣೆದಿದ್ದಾರೆ.

ಡಿ.ಕೆ. ಸುರೇಶ್ ಅವರಿಗೆ ಪ್ರಬಲ ಪೈಪೋಟಿ ನೀಡಲು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಸಿ.ಪಿ. ಯೋಗೇಶ್ವರ್ ಅವರನ್ನು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದು ಬಹುತೇಕ ಅಂತಿಮಗೊಂಡಿದೆ ಎಂದು ತಿಳಿದು ಬಂದಿದೆ.

ಕೆಂಪೇಗೌಡ ಜಯಂತಿ ನೆಪದಲ್ಲಿ ಇತ್ತೀಚೆಗೆ ದುಬೈಗೆ ತೆರಳಿದ್ದ ಜೆಡಿಎಸ್ ನಾಯಕ ಕುಮಾರಸ್ವಾಮಿ ಮತ್ತು ಬಿಜೆಪಿಯ ಸಿ.ಪಿ. ಯೋಗೇಶ್ವರ್ ಈ ವಿಷಯದಲ್ಲಿ ಒಮ್ಮತಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಮೈತ್ರಿ ಬಳಿಕ ರಾಜಕೀಯ ವೈಷಮ್ಯ ಮರೆತು ಒಂದಾಗಿರುವ ಇಬ್ಬರೂ ಲೋಕಸಭಾ ಚುನಾವಣೆಯಲ್ಲಿ ಸುರೇಶ್ ಅವರನ್ನು ಸೋಲಿಸುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ರಾಜಕೀಯವಾಗಿ ಕಟ್ಟಿ ಹಾಕಲು ಮುಂದಾಗಿದ್ದಾರೆ.

ಯೋಗೇಶ್ವರ್

ಡಿ.ಕೆ. ಸುರೇಶ್

‘ಅಧಿಕೃತ ಘೋಷಣೆ ಬಾಕಿ’

‘ಕುಮಾರಸ್ವಾಮಿ ಮತ್ತು ಯೋಗೇಶ್ವರ್ ಎಲ್ಲವನ್ನೂ ಮರೆತು ಒಂದಾಗಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಡಿ.ಕೆ. ಶಿವಕುಮಾರ್ ಅವರ ಬಲಗೈ ಆಗಿರುವ ಸುರೇಶ್ ಅವರನ್ನು ಸೋಲಿಸಿ ಯೋಗೇಶ್ವರ್ ಅವರನ್ನು ಸಂಸತ್ತಿಗೆ ಕಳಿಸುವುದರಿಂದ ಮುಂದೆ ಚನ್ನಪಟ್ಟಣದಲ್ಲಿ ಜೆಡಿಎಸ್ ಹಾದಿ ಮತ್ತಷ್ಟು ಸುಗಮವಾಗಲಿದೆ. ಹಾಗಾಗಿ, ಅವರೇ ಅಭ್ಯರ್ಥಿಯಾಗಲಿದ್ದಾರೆ. ಅಧಿಕೃತ ಘೋಷಣೆಯೊಂದೇ ಬಾಕಿ ಇದೆ’ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಮೂರರಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿದ್ದಾರೆ. ಅದರಲ್ಲೂ ಕುಮಾರಸ್ವಾಮಿ ಅವರ ಭದ್ರಕೋಟೆ ರಾಮನಗರದಲ್ಲಿ ತಮ್ಮ ಕಟ್ಟಾ ಬೆಂಬಲಿಗ ಎಚ್.ಎ. ಇಕ್ಬಾಲ್ ಹುಸೇನ್ ಅವರನ್ನು ಡಿ.ಕೆ. ಸಹೋದರರು ಗೆಲ್ಲಿಸಿಕೊಂಡು ಬಂದಿದ್ದಾರೆ. ಇಡೀ ಜಿಲ್ಲೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ.

ಮೈತ್ರಿ ಏರ್ಪಟ್ಟ ಬೆನ್ನಲ್ಲೇ ಕುಮಾರಸ್ವಾಮಿ ಅವರು, ‘ಗ್ರಾಮಾಂತರ ಕ್ಷೇತ್ರದಿಂದ ನಮ್ಮ ಕುಟುಂಬದವರು ಕಣಕ್ಕಿಳಿಯುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದರು. ಮತ್ತೊಂದೆಡೆ ಯೋಗೇಶ್ವರ್, ‘ನಮ್ಮಿಬ್ಬರ ಕಿತ್ತಾಟದಲ್ಲಿ ಡಿ.ಕೆ. ಸಹೋದರರು ಲಾಭ ಪಡೆಯುತ್ತಿದ್ದಾರೆ. ನಾವಿಬ್ಬರೂ ಒಂದಾದರೆ, ಸಹೋದರರನ್ನು ಎದುರಿಸಿ ನಿಲ್ಲಬಹುದು. ಲೋಕಸಭಾ ಚುನಾವಣೆಯಲ್ಲಿ ಪಕ್ಷ ಅವಕಾಶ ನೀಡಿದರೆ ಸ್ಪರ್ಧಿಸಲು ಸಿದ್ಧ’ ಎಂದು ಹೇಳುತ್ತಲೇ ಬಂದಿದ್ದಾರೆ.

ಕಾಂಗ್ರೆಸ್ ಬಲವೇ ಹೆಚ್ಚು: ಕ್ಷೇತ್ರದಾದ್ಯಂತ ಜೆಡಿಎಸ್ ತನ್ನ ನೆಲೆ ಹೊಂದಿದೆ. ಕನಕಪುರ ಹೊರತುಪಡಿಸಿ ಉಳಿದೆಡೆ ಬಿಜೆಪಿ ಸಹ ತನ್ನದೇ ಆದ ಮತ ಬ್ಯಾಂಕ್ ಹೊಂದಿದೆ. ಕ್ಷೇತ್ರದ ವ್ಯಾಪ್ತಿಗೆ ಬರುವ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ (ರಾಮನಗರ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ, ಬೆಂಗಳೂರಿನ ದಕ್ಷಿಣ, ರಾಜರಾಜೇಶ್ವರಿ ನಗರ, ಆನೇಕಲ್ ಹಾಗೂ ತುಮಕೂರು ಜಿಲ್ಲೆಯ ಕುಣಿಗಲ್) ಎರಡು ಕಡೆ ಬಿಜೆಪಿ, ಒಂದು ಕಡೆ ಜೆಡಿಎಸ್ ಗೆದ್ದಿದ್ದರೆ, ಐದು ಕಡೆ ಕಾಂಗ್ರೆಸ್ ಗೆದ್ದಿದೆ.

ಶನಿವಾರ, ನವೆಂಬರ್ 4, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಮಣಿಪುರ ಗಲಭೆ ಖಂಡಿಸಿ ಅಲ್ಲಿನ ಜನರು ನವದೆಹಲಿಯ ಜಂತರ್ ಮಂತರ್‌ನಲ್ಲಿ ಶುಕ್ರವಾರ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಯುವತಿ

ಸಮಾಜ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಎಲ್ಲಾ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ

ಪದವಿ ಪೂರ್ವ, ಪದವಿ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ

ಉಚಿತ ಪ್ರವೇಶ

ಎಲ್ಲಾ ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು ಸಮಾಜ ಕಲ್ಯಾಣ ಇಲಾಖೆ ವತಿಯಿಂದ

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆ



ಮಾನ್ಯ ಸಮಾಜ ಕಲ್ಯಾಣ ಸಚಿವರಾದ **ಡಾ. ಹೆಚ್.ಸಿ. ಮಹದೇವಪ್ಪನವರು** ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಿರುವುದು.

ಫ್ರೀಷಿಪ್ ಕಾರ್ಡ್ ಮಾದರಿ

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮ 2023-24

Recent Photo of the Student

FREESHIP CARD

SSP ID: 19200278908

ವಿದ್ಯಾರ್ಥಿಯ ಹೆಸರು Student Name	Manjunath	ವಿದ್ಯಾರ್ಥಿಯ ಆಧಾರ್ ಸಂಖ್ಯೆ Aadhaar number of the Student	xxxx-xxxx-6761
ವಿದ್ಯಾರ್ಥಿಯ ತಂದೆಯ ಹೆಸರು Father Name	MARIYAPPA MULIMANI	SSLC ನೋಂದಣಿ ಸಂಖ್ಯೆ SSLC Registration Number	20180437465
ವಿದ್ಯಾರ್ಥಿಯ ಜನ್ಮ ದಿನಾಂಕ / Date of Birth	05/02/2002	ವಾಸ ಸ್ಥಳ / Domicile State	Karnataka
ಜಾತಿ Caste	ಪರಿಶಿಷ್ಟ ಜಾತಿ	ಜಾತಿ ಪ್ರಮಾಣ ಪತ್ರ ಸಂಖ್ಯೆ Caste Certificate Number	RD0039054020669
ಕುಟುಂಬದ ವಾರ್ಷಿಕ ಆದಾಯ Annual Family Income	25000	ಆದಾಯ ಪ್ರಮಾಣ ಪತ್ರ ಸಂಖ್ಯೆ Income Certificate Number	RD0039323038694
ವಿಳಾಸ Address	BALAGANUR	ಹಿಂದಿನ ವರ್ಷದ ಕೋರ್ಸ್ ವಿವರಗಳು Previous Course Details	Applied College Name: SES POLYTECHNIC SIRUGUPPA(Id: S-10975), Course Name: Diploma in Polytechnic, Course Year: THIRD
ಪ್ರಸ್ತಕ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಕೋರ್ಸ್ Present Course	Diploma in Polytechnic	ಪ್ರಸಕ್ತ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಕೋರ್ಸ್ ಅವಧಿ Present Course duration	3
ತರಗತಿ/ಕೋರ್ಸ್ ವರ್ಷ / Present Class / Course Year	THIRD	ಕಾಲೇಜಿನ ಹೆಸರು / College Name	SES POLYTECHNIC SIRUGUPPA (Id: S-10975)
ವಿಶ್ವವಿದ್ಯಾಲಯ / ಬೋರ್ಡ್ / University/Board	Directorate of Technical Education	ಕೋರ್ಸ್ ಗ್ರೂಪ್ / Course Group	4
ಡೇ ಸ್ಕಾಲರ್ / ವಸತಿನಿಲಯಾರ್ಥಿ Day Scholar/Hosteller	Hosteller	ಹಾಸ್ಟೆಲ್ ನ ಹೆಸರು [ವಸತಿ ನಿಲಯಾರ್ಥಿಯಾಗಿದ್ದಲ್ಲಿ ಮಾತ್ರ ಅನ್ವಯ] Name Of The Hostel :(If the student is a hosteller)	SC POST MATRIC BOYS HOSTEL,SC POST METRIC BOYS HOSTEL NO.2 SIRUGUPPA NEAR HIGH SCHOOL GROUND SIRUGUPPA, BALLARI, SIRUGUPPA, SIRUGUPPA

ನಿರ್ವಹಣಾ ವೆಚ್ಚ / Maintenance Amount Details		ಷರಾ / Remarks
ಮಂಜೂರಾಗಬಹುದಾದ ನಿರ್ವಹಣಾ ವೆಚ್ಚದ ಮೊತ್ತ Sanctionable Maintenance Amount	0	ಡೇ-ಸ್ಕಾಲರ್ ನಿರ್ವಹಣಾ ಮೊತ್ತವನ್ನು ಕಾಲೇಜಿಗೆ ಪಾವತಿಸುವಂತಿಲ್ಲ. Day Scholar Maintenance Amount should not be paid to the college.

ಶುಲ್ಕ ಮರುಪಾವತಿ / Fees Reimbursement Details

ಶುಲ್ಕದ ವಿವರಗಳು FeeComponents	ಮಂಜೂರಾಗಬಹುದಾದ ಶುಲ್ಕದ ಮೊತ್ತ* Sanctionable Fee Amount*
1. ಪರೀಕ್ಷಾ ಶುಲ್ಕ / Exam Fee	600
2. ಪ್ರವೇಶ ಶುಲ್ಕ / Admission Fee	520
3. ಅರ್ಜಿ ಶುಲ್ಕ / Application Fee	200
4. ನೋಂದಣಿ ಶುಲ್ಕ / Registration Fee	100
5. ಬೋಧನಾ ಶುಲ್ಕ / Tuition Fee	5618
6. ಪ್ರಯೋಗಾಲಯ ಪರೀಕ್ಷಾ ಶುಲ್ಕ / Lab Exam Fee	1000
7. ಪ್ರಯೋಗಾಲಯ ಶುಲ್ಕ / Lab Fee	300
8. ಕ್ರೀಡಾ ಶುಲ್ಕ / Sports Fee	70
9. ಬೆಂಗಾವಲು ಶುಲ್ಕ / Escort Allowance	0
10. ಗ್ರಂಥಾಲಯ ಶುಲ್ಕ / Library Fee	150
11. ವೈದ್ಯಕೀಯ ತಪಾಸಣಾ ಶುಲ್ಕ / Medical Examination Fee	0
12. ಓ.ಎಂ.ಆರ್. ಶುಲ್ಕ / OMR Fee	0
13. ಓದುಗರ ಭತ್ಯೆ / Reader Allowance	0
14. ಪ್ರಯಾಣ ಭತ್ಯೆ / Transport Allowance	0
15. ಒಕ್ಕೂಟ ಶುಲ್ಕ / Union Fee	60
16. ಕ್ರೀಡಾ ಅಭಿವೃದ್ಧಿ ಶುಲ್ಕ / Sports Development Fee	0
ಇತರೆ ಕಡ್ಡಾಯ ಶುಲ್ಕಗಳ ಗರಿಷ್ಠ ರೂ.500/- Other Compulsory Fee Amount (Not Exceeding Rs.500/-)	320
ಒಟ್ಟು / Total	8938

ಸದರಿ ಮೊತ್ತವನ್ನು ಕಾಲೇಜಿಗೆ ಪಾವತಿಸಬೇಕಾಗಿದ್ದು, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರಾಗುವ ಹಾಗೂ ಶೇಕಡ 40 ಮತ್ತು ಶೇಕಡ 60ರ ಅನುಪಾತದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ಬಿಡುಗಡೆ ಮಾಡುವ 2 ಕಂತುಗಳ ಸಂಪೂರ್ಣ ವಿದ್ಯಾರ್ಥಿವೇತನ ಮೊತ್ತವನ್ನು ಪ್ರತಿ ಕಂತು ಖಾತೆಗೆ ಜಮೆಯಾದ 7 ದಿನಗಳ ಒಳಗಾಗಿ ಕಾಲೇಜಿಗೆ ಪಾವತಿಸಲು ಬದ್ಧನಾಗಿರುತ್ತೇನೆ. ತಪ್ಪಿದಲ್ಲಿ, ಇಲಾಖೆ/ಕಾಲೇಜಿನ ಆಡಳಿತ ಮಂಡಳಿಯು ತೆಗೆದುಕೊಳ್ಳಬಹುದಾದ ಎಲ್ಲಾ ಕಾನೂನು ಕ್ರಮಗಳಿಗೆ ಬದ್ಧನಾಗಿರುತ್ತೇನೆ.

The said amount is to be paid to the college and I am bound to pay the full scholarship amount of 2 installments sanctioned under the post-matric scholarship program and released by the state and central government in the ratio of 40 percent and 60 percent to the college within 7 days of each installment being credited to my bank account. Failure to do so, I shall be liable to any legal action that may be taken by the Department/College authority/management.

ವಿದ್ಯಾರ್ಥಿಯ ಸಹಿ/-
Signature of Student/-
(ವಿದ್ಯಾರ್ಥಿಯ ಇ-ಸಹಿ/-)
(Student's e-sign)

ಮೇಲ್ಕಂಡಂತೆ ಬಿತ್ತರವಾದ ಶುಲ್ಕದ ವಿವರಗಳು ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರು ಮಾಡಬಹುದಾದ ಶುಲ್ಕದ ಅಂದಾಜು ಮೊತ್ತವಾಗಿರುತ್ತದೆ. ಮಂಜೂರಾತಿ ಸಮಯದಲ್ಲಿ ತಮ್ಮ Seat Type ಗೆ ಅನುಗುಣವಾಗಿ ಶುಲ್ಕದ ವಿವರಗಳು ಬದಲಾಗುವ ಸಾಧ್ಯತೆ ಇರುತ್ತದೆ. The fee details given above are the approximate amount of fees sanctionable under the Post Matric scholarship programme. Reimbursable fee details are likely to change depending on the Seat Type of the student at the time of sanction of the scholarship application.

Issued by ಮಂಜೂರು ಮಾಡಿದವರು
Assistant Director ಸಹಾಯಕ ನಿರ್ದೇಶಕರು
Department of Social Welfare ಸಮಾಜ ಕಲ್ಯಾಣ ಇಲಾಖೆ
Siruguppa Taluk ಸಿರುಗುಪ್ಪ ತಾಲ್ಲೂಕು (e-Sign)(ಇ-ಸಹಿ)

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ವಾರ್ಷಿಕ ಆದಾಯ ಮಿತಿ ರೂ. 2.5 ಲಕ್ಷದ ಒಳಗಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ.

ಮುಖ್ಯವಾಗಿ ಎಲ್ಲಾ ಅರ್ಹ ಅರ್ಜಿದಾರರಿಗೆ Freeship Card ಮಂಜೂರು ಮಾಡಲಾಗುವುದು.

Freeship Card

1. ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷದ ಒಳಗಿರುವ ಪರಿಶಿಷ್ಟ ಜಾತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಎಲ್ಲಾ ಮೆಟ್ರಿಕ್ ನಂತರದ ಕೋರ್ಸುಗಳಿಗೆ ಉಚಿತ ಪ್ರವೇಶ.
2. ಸರ್ಕಾರವು ಆಯಾಯ ಕೋರ್ಸಿಗೆ ನಿಗದಿಪಡಿಸಿದ ದರಗಳಲ್ಲಿ ಶುಲ್ಕವನ್ನು ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡಲಾಗುವುದು.
3. ಯಾವುದೇ ಶಿಕ್ಷಣ ಸಂಸ್ಥೆ ಸದರಿ ಪರಿಶಿಷ್ಟ ಜಾತಿ ವಿದ್ಯಾರ್ಥಿಯಿಂದ ಮರುಪಾವತಿ ಮಾಡಲಾಗುವ ಶುಲ್ಕಗಳನ್ನು ಹೊರತುಪಡಿಸಿ ಇತರೆ ಕಡ್ಡಾಯ ಶುಲ್ಕಗಳನ್ನು ಆರಂಭದಲ್ಲಿಯೇ ಪಾವತಿ ಮಾಡುವಂತೆ ಒತ್ತಾಯ ಮಾಡತಕ್ಕದ್ದಲ್ಲ.

ಅರ್ಜಿ ಸಲ್ಲಿಸಲು https://ssp.postmatric.karnataka gov.in/2324_SA/signin.aspx ಲಿಂಕ್ ಮೂಲಕ ಭೇಟಿ ನೀಡಿ ಅರ್ಜಿ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಬೇಕಾಗಿರುವ ದಾಖಲಾತಿಗಳು: (1) ವಿದ್ಯಾರ್ಥಿಯ ಆಧಾರ್ ಸಂಖ್ಯೆ (2) ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ (3) ವಿದ್ಯಾರ್ಥಿಯ ಆದಾಯ ಮತ್ತು ಜಾತಿ ಪ್ರಮಾಣ ಪತ್ರದ RD ಸಂಖ್ಯೆ (4) ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ. ನೋಂದಣಿ ಸಂಖ್ಯೆ (5) ವಿದ್ಯಾರ್ಥಿಯ ಯೂನಿವರ್ಸಿಟಿ / ಮಂಡಳಿ ನೋಂದಣಿ ಸಂಖ್ಯೆ

ಸ್ಕಾಲರ್‌ಶಿಪ್ ಸಹಾಯವಾಣಿ

9482 300 400

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು; ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

@SWDGok

BANGALORE CITY DISTRIBUTOR: Mercury Impex: 080-41499222 **HELPLINE:** Rajesh: 7259035100, Balu: 8073243012, Raju Nayak: 9902040499, Roshan: 8123212509, Arjun: 9513985746, Paramesh: 9448536604
FOR TRADE & INSTITUTIONAL ENQUIRY CONTACT: Shyamlal: 9742277106, Abhishek: 8197683550
BANGALORE RURAL DISTRICT DISTRIBUTOR: Subhash Distributors Limited: 9980723577, 9742277101 **HELPLINE:** Lambodhar: 9513442613, Narasappa: 9019023570
FOR TRADE & INSTITUTIONAL ENQUIRY CONTACT: Venkatesh: 7259035093

ಶನಿವಾರ, ನವೆಂಬರ್ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 305 | ಪುಟ 32
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

56 ಅಧಿಕಾರಿಗಳ ವಿರುದ್ಧ ಎಫ್‌ಐಆರ್ 9

'ಕಾಂತರಾಜು ವರದಿ ಬೆಂಕಿಗೆ ಹಾಕಿ' 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,363 ▲	19,230 ▲	₹62,900 (ಬೆಂಗಳೂರು) ▲	₹73,000 (ಬೆಂಗಳೂರು) ▼	83.20 ▲

ಕಾಂಗ್ರೆಸ್ ಒಡಲಿಗೆ 'ಸಿ.ಎಂ' ಕಿಚ್ಚು

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವ ತನಕ ಅವರ ಪರ ನಾನು, ಪರಮೇಶ್ವರ ಇರುತ್ತೇವೆ. ಅವರ ನಂತರ ಪರಮೇಶ್ವರಗೆ ಸಿಗಬೇಕೇ ವಿನಃ ಬೇರೆಯವರಿಗೆ ಆ ಸ್ಥಾನ ನೀಡಬಾರದು

ಕೆ.ಎನ್. ರಾಜಣ್ಣ
ಸಹಕಾರ ಸಚಿವ

ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ ಎಂಬ ಸಿದ್ದರಾಮಯ್ಯ ಹೇಳಿಕೆ ವೈಯಕ್ತಿಕವಾದುದು. ಹೈಕಮಾಂಡ್ ಹೇಳಿದರೆ ಮುಖ್ಯಮಂತ್ರಿಯಾಗಲು ನಾನೂ ಸಿದ್ಧ

ಪ್ರಿಯಾಂಕ್ ಖರ್ಗೆ
ಗ್ರಾಮೀಣಾಭಿವೃದ್ಧಿ ಸಚಿವ

ಸಿದ್ದರಾಮಯ್ಯ ಅವರು ಎರಡೂವರೆ ವರ್ಷ ಮಾತ್ರವೇ ಮುಖ್ಯಮಂತ್ರಿ ಎಂಬ ವದಂತಿಗೆ ತೆರೆಬಿದ್ದಿದೆ. ಹೈಕಮಾಂಡ್ ಇಂತಹ ತೀರ್ಮಾನ ಮಾಡಿದರೆ ಮುಂದೆ ನೋಡೋಣ

ಸಂತೋಷ ಲಾಡ್
ಕಾರ್ಮಿಕ ಸಚಿವ

ಎಲ್ಲ ಶಾಸಕರ ಬೆಂಬಲದಿಂದ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಗೊಂದಲಕ್ಕೆ ತೆರೆ ಎಳೆಯುವುದಕ್ಕಾಗಿಯೇ ಪೂರ್ಣಾವಧಿಗೆ ತಾವೇ ಮುಖ್ಯಮಂತ್ರಿ ಎಂದು ಅವರು ಹೇಳಿರಬಹುದು

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ವರ್ಷ ನಮ್ಮದೇ ಸರ್ಕಾರ ಇರುತ್ತದೆ, ನಾನೇ ಮುಖ್ಯ ಮಂತ್ರಿಯಾಗಿರುತ್ತೇನೆ' ಎಂಬ ಸಿದ್ದರಾಮಯ್ಯ ಹೇಳಿಕೆ ಕಾಂಗ್ರೆಸ್‌ನಲ್ಲಿ ಕಿಚ್ಚು ಹೊತ್ತಿಸಿದೆ.

ಈ ಹೇಳಿಕೆ ಹೊರಬಿದ್ದ ಬೆನ್ನಲ್ಲೇ, ಮುಖ್ಯಮಂತ್ರಿ ಸ್ಥಾನ ಆಕಾಂಕ್ಷಿಗಳ ಸಂಖ್ಯೆ ಹೆಚ್ಚತೊಡಗಿದೆ. ಕೆಲವರು ಸಿದ್ದರಾಮಯ್ಯ ಪರ ಮಾತನಾಡಿದ್ದರೆ, ಕೆಲವು ಶಾಸಕರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರ ವಕಾಲತ್ತು ವಹಿಸಿದ್ದಾರೆ. ಭಾರಿ ಬಹುಮತ ಪಡೆದ ಕಾಂಗ್ರೆಸ್ ಅಧಿಕಾರಕ್ಕೇರಿ ಆರು ತಿಂಗಳು ಪೂರ್ಣಗೊಳ್ಳುವು-ದರೊಳಗೆ, ಭಿನ್ನಮತ-ಅಪಸ್ವರದ ಬೇಗುದಿ ಪಕ್ಷದ ಒಡಲನ್ನು ಸುಡ ಲಾರಂಭಿಸಿದಂತಹ ವಾತಾವರಣ ಕಾಣಿಸಿದೆ.

'ಅಧಿಕಾರ ಹಂಚಿಕೆ, ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ವಿಷಯ ಕುರಿತು ಸಚಿವರೂ ಸೇರಿ ಯಾರಾದರೂ ಬಾಯ್ತೆರೆದರೆ ಸಚಿವ ಸ್ಥಾನದಿಂದ ಕೆಳಗಿಳಿಸುವುದೂ ಸೇರಿದಂತೆ ಶಿಸ್ತು ಕ್ರಮ ಖಚಿತ' ಎಂಬ ಕಾಂಗ್ರೆಸ್ ಹೈಕಮಾಂಡ್‌ನ ಎಚ್ಚರಿಕೆಯನ್ನು ಯಾರೂ ಲೆಕ್ಕಕ್ಕೇ ಇಟ್ಟಿಲ್ಲ. ಶಿಸ್ತುಕ್ರಮದ ಎಚ್ಚರಿಕೆ ಸಚಿವರು, ಶಾಸಕರನ್ನು ಬಡಿದೆಬ್ಬಿಸಿದ್ದು, ತಮ್ಮ ನಾಯಕರ ಪರ ಧ್ವನಿಯೆತ್ತಲು ಪ್ರೇರಣೆ ನೀಡಿದಂತಾಗಿದೆ ಎಂಬ ಮಾತುಗಳು ಪಕ್ಷದ ವಲಯದಲ್ಲೇ ಹರಿದಾಡುತ್ತಿವೆ.

ತಮ್ಮ ಹೇಳಿಕೆ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ, ಪಕ್ಷದೊಳಗೆ ದೊಡ್ಡ ಸದ್ದು ಮಾಡಿದ ಬಳಿಕ ಎಚ್ಚೆತ್ತ ಸಿದ್ದರಾಮಯ್ಯ ಅವರು, 'ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೋ ಅದಕ್ಕೆ ಬದ್ಧ' ಎಂಬ ಮಾತನ್ನು ಪುನರುಚ್ಚರಿಸುವ ಮೂಲಕ ವಿವಾದವನ್ನು ತಣ್ಣಗಾಗಿಸುವ ಯತ್ನ ಮಾಡಿದ್ದಾರೆ.

9ನೇ ಪುಟ ನೋಡಿ

ನಾನು ಹೇಳೋದೊಂದು; ನೀವು ಬರೆಯೋದೊಂದು: ಸಿ.ಎಂ ಕಿಡಿ

ಗದಗ: 'ನಾನೊಂದು ಹೇಳಿದರೆ ನೀವೊಂದು ಬರೆಯುತ್ತೀರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮ ಪ್ರತಿನಿಧಿಗಳ ಮೇಲೆ ರೇಗಿದರು. ಇಲ್ಲಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, 'ನಮ್ಮದು ಹೈಕಮಾಂಡ್ ಪಕ್ಷ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಅದಕ್ಕೆ ಬದ್ಧರಾಗಿರುತ್ತೇವೆ ಎಂದು ಹೇಳಿದ್ದೇನೆ' ಎಂದು ಹೇಳುವ ಮೂಲಕ 'ಮುಂದಿನ ಐದು ವರ್ಷ ನಾನೇ ಸಿ.ಎಂ' ಎಂಬ ಹೇಳಿಕೆ ಸೃಷ್ಟಿಸಿದ ವಿವಾದಕ್ಕೆ ತೆರೆ ಎಳೆಯಲು ಮುಂದಾದರು.

'ಸಿದ್ದರಾಮಯ್ಯ ಬೇಡ ಅಂದರೆ, ಜಿ.ಪರಮೇಶ್ವರ ಮುಖ್ಯಮಂತ್ರಿ ಆಗಲಿ' ಎಂಬ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ಅವರು ನಿರಾಕರಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ತನಿಖಾ ಹಂತದ ಕಾಮಗಾರಿಗಳ ಬಿಲ್ ಪಾವತಿ • ಅಕ್ರಮದಲ್ಲಿ ಶಾಮೀಲು ಆರೋಪ

ಕೆಬಿಜೆಎನ್‌ಎಲ್ ಎಂ.ಡಿ ಅಮಾನತು

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ನಾರಾಯಣಪುರ ಬಲದಂಡೆ ಕಾಲುವೆ ಕಾಮಗಾರಿಗಳ ಅಕ್ರಮದಲ್ಲಿ ಶಾಮೀಲಾಗಿರುವುದು ಮತ್ತು ತನಿಖೆ ಪ್ರಗತಿಯಲ್ಲಿರು-ವಾಗಲೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಿರುವ ಆರೋಪದ ಮೇಲೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ (ಕೆಬಿಜೆಎನ್‌ಎಲ್) ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್. ಶಿವಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಅಕ್ಟೋಬರ್ 30ರಂದು ನಡೆದ ಕೆಬಿಜೆಎನ್‌ಎಲ್ ಆಡಳಿತ ಮಂಡಳಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಕುಮಾರ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಅಕ್ರಮದ ಮಾಹಿತಿ ಮುಚ್ಚಿಟ್ಟು ಬಿಲ್ ಪಾವತಿ ಹಾಗೂ ಹೆಚ್ಚುವರಿ ಕಾಮಗಾರಿಗಳ ಮಂಜೂರಾತಿಗೆ ಪ್ರಸ್ತಾವ ಸಲ್ಲಿಸಿದ್ದ ವ್ಯವಸ್ಥಾಪಕ ನಿರ್ದೇಶಕರನ್ನು ಅಮಾನತು ಮಾಡುವಂತೆ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದರು. ಗುರುವಾರ ಅಮಾನತು ಆದೇಶ ಹೊರಬಿದ್ದಿದೆ.

9ನೇ ಪುಟ ನೋಡಿ

ರಾಜೇಶ್ ಅಮ್ಮಿನಭಾವಿಗೆ ಪ್ರಭಾರ

ಶಿವಕುಮಾರ್ ಅವರ ಅಮಾನತಿನಿಂದ ತೆರವಾಗಿರುವ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮ್ಮಿನಭಾವಿ ಅವರಿಗೆ ವಹಿಸಲಾಗಿದೆ.

ರಾಜೇಶ್ ಅವರನ್ನು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಅಕ್ಟೋಬರ್ 27ರಂದು ವರ್ಗಾವಣೆ ಮಾಡಲಾಗಿತ್ತು. ವಾರದೊಳಗೆ ಕೆಬಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಪ್ರಭಾರವನ್ನೂ ನೀಡಲಾಗಿದೆ.

ಮೆಟ್ರೊ ನೇರಳೆ ಮಾರ್ಗದಲ್ಲಿ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ನಿರ್ವಹಣಾ ಕಾಮಗಾರಿ ನಡೆಸಲು ಉದ್ದೇಶಿಸಿರುವುದರಿಂದ ನ.5ರಂದು ಬೆಳಿಗ್ಗೆ 7ರಿಂದ 9ರವರೆಗೆ ಎಂ.ಜಿ. ರಸ್ತೆ–ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣಗಳ ನಡುವೆ ಮೆಟ್ರೊ ರೈಲು ಸಂಚಾರ ಸ್ಥಗಿತಗೊಳ್ಳಲಿದೆ.

ವಿವೇಕಾನಂದ ರಸ್ತೆ ಮೆಟ್ರೊ ನಿಲ್ದಾಣ ಮತ್ತು ಇಂದಿರಾನಗರ ನಿಲ್ದಾಣಗಳ ನಿರ್ವಹಣಾ ಕಾಮಗಾರಿ ನಡೆಯಲಿದೆ. ಬೆಳಿಗ್ಗೆ 9ರ ಬಳಿಕ ಮೆಟ್ರೊ ಸಂಚಾರ ಇರಲಿದೆ. ಚಲ್ಲಘಟ್ಟದಿಂದ ಎಂ.ಜಿ. ರಸ್ತೆವರೆಗೆ, ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ (ಕಾಡುಗೋಡಿ) ವರೆಗೆ ಎಂದಿನಂತೆ ಸಂಚಾರ ಇರಲಿದೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮಲ್ಲೇಶ್ವರ, ಮಹದೇವಪುರದಲ್ಲಿ ಬಿಬಿಎಂಪಿ ಸಿಬ್ಬಂದಿ ಕಾರ್ಯಾಚರಣೆ

ಅನಧಿಕೃತ ಒಎಫ್‌ಸಿ ಕೇಬಲ್‌ಗಳ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಮತ್ತು ಮಹದೇವಪುರ ವಲಯದಲ್ಲಿ ಅನಧಿಕೃತವಾಗಿ ಅಳವಡಿಸಿದ್ದ ಒಎಫ್‌ಸಿ ಕೇಬಲ್‌ಗಳ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಶುಕ್ರವಾರ ನಡೆಸಿತು.

ಪಶ್ಚಿಮ ವಲಯದ ವ್ಯಾಪ್ತಿಯ ಮಲ್ಲೇಶ್ವರ ವಿಭಾಗದ 8ನೇ ಅಡ್ಡರಸ್ತೆ, 7ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, 10ನೇ ಅಡ್ಡರಸ್ತೆ ಮಾರುಕಟ್ಟೆ ರಸ್ತೆಯ ಪಾದಚಾರಿ ಮಾರ್ಗದ ಒತ್ತುವರಿ ತೆರವು ಕಾರ್ಯಚರಣೆ ನಡೆಸಲಾಯಿತು.

ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್, ಮಲ್ಲೇಶ್ವರ ಟ್ರೇಡರ್ಸ್ ಅಸೋಸಿ ಯೇಷನ್‌ನವರ ಮನವಿ ಹಾಗೂ ಹೈಕೋರ್ಟ್ ಆದೇಶದಂತೆ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗಿದೆ.

ಪಾದಚಾರಿ ಮಾರ್ಗಗಳಲ್ಲಿದ್ದ ಅಂಗಡಿ, ಅನುಪಯುಕ್ತ ತಳ್ಳುವ ಗಾಡಿಗಳು, ಹಣ್ಣಿನ ಬಾಕ್ಸ್‌ಗಳನ್ನು ತೆರವುಗೊಳಿಸಲಾಗಿದೆ.

ಪಾದಚಾರಿ ಮಾರ್ಗ ಒತ್ತುವರಿ ಮಾಡದಂತೆ ಧ್ವನಿವರ್ಧಕ ಮೂಲಕ ವ್ಯಾಪಾರಿಗಳಿಗೆ ಕೋರಲಾಗಿತ್ತು. ಆದರೂ 1.5 ಕಿ.ಮೀ ಉದ್ದದ ಪಾದಚಾರಿ ಮಾರ್ಗದಲ್ಲಿ ಮಾಡಲಾಗಿದ್ದ ಒತ್ತುವರಿಯನ್ನು ತೆರವು ಮಾಡಲಾಯಿತು.

‘ಮತ್ತೆ ಒತ್ತುವರಿ ಮಾಡಿಕೊಂಡರೆ ದಂಡದ ಜೊತೆಗೆ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಕಾರ್ಯಪಾಲಕ ಎಂಜಿನಿಯರ್ ಜಯಶಂಕರ್ ಎಚ್ಚರಿಸಿದರು.

ಒಎಫ್‌ಸಿ ಕೇಬಲ್: ಮಹದೇವಪುರ ವಲಯ ವ್ಯಾಪ್ತಿಯ ಹೊರ ವರ್ತುಲ ರಸ್ತೆಗಳಲ್ಲಿ ಅನಧಿಕೃತವಾಗಿ ಅಳವಡಿಸಿದ್ದ ಒಎಫ್‌ಸಿ ಕೇಬಲ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಶುಕ್ರವಾರ ತೆರವುಗೊಳಿಸಿದರು.

ವಲಯದ ಜಂಟಿ ಆಯುಕ್ತೆ ದಾಕ್ಷಾಯಿಣಿ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ. ಇಬ್ಬಲೂರು ಜಂಕ್ಷನ್‌ನಿಂದ ಲೌರಿ ಜಂಕ್ಷನ್ ಹಾಗೂ ಲೌರಿ ಜಂಕ್ಷನ್‌ನಿಂದ ಕಾಡುಗೋಡಿಯವರೆಗೆ ವಿದ್ಯುತ್ ಕಂಬಗಳು, ಪಾದಚಾರಿ ಮಾರ್ಗ, ಮೇಲ್ಸೇತುವೆ, ಮರಗಳಿಗೆ ಸುತ್ತಿದ್ದ ಒಎಫ್‌ಸಿ ಕೇಬಲ್‌ಗಳ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ.

ತೆರವು ಕಾರ್ಯಾಚರಣೆಗೆ ವಿದ್ಯುತ್ ವಿಭಾಗದ 10ಕ್ಕೂ ಹೆಚ್ಚು ತಂಡಗಳನ್ನು ನಿಯೋಜಿಸಲಾಗಿದೆ. 10 ಕಿ.ಮೀ ಉದ್ದದ ರಸ್ತೆಯಲ್ಲಿ 14 ಟ್ರ್ಯಾಕ್ಟರ್ ಲೋಡ್ ಅನಧಿಕೃತ ಕೇಬಲ್‌ಗಳನ್ನು ಕತ್ತರಿಸಿ ತೆರವುಗೊಳಿಸಲಾಗಿದೆ. ಕತ್ತರಿಸಿರುವ ಕೇಬಲ್‌ಗಳನ್ನು ಟ್ರ್ಯಾಕ್ಟರ್‌ಗಳ ಮೂಲಕ ತುಂಬಿಕೊಂಡು ಪಾಲಿಕೆಯ ಖಾಲಿ ಜಾಗದಲ್ಲಿ ಶೇಖರಿಸಲಾಗುತ್ತಿದೆ.

‘ಸಾರ್ವಜನಿಕರ ಸುರಕ್ಷತೆ ಮತ್ತು ವಾಹನ ಸವಾರರ ಸಂಚಾರಕ್ಕೆ ತೊಂದರೆ ತಪ್ಪಿಸಲು ಕೇಬಲ ತೆರವುಗೊಳಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತೆ ಅಳವಡಿಸಿದಲ್ಲಿ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ದಾಕ್ಷಾಯಿಣಿ ತಿಳಿಸಿದರು.

ಮಲ್ಲೇಶ್ವರದಲ್ಲಿ ಪಾದಚಾರಿ ಮಾರ್ಗದಲ್ಲಿದ್ದ ಅಂಗಡಿಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು (ಎಡ ಚಿತ್ರ). ಮಹದೇವಪುರ ವಲಯದ ಹೊರವರ್ತುಲ ರಸ್ತೆಯಲ್ಲಿ ಅನಧಿಕೃತ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಲಾಯಿತು

ಮುಖ್ಯಾಂಶಗಳು

- 1.5 ಕಿ.ಮೀ ಪಾದಚಾರಿ ರಸ್ತೆಯಲ್ಲಿ ಅಂಗಡಿ ತೆರವು
- 14 ಟ್ರ್ಯಾಕ್ಟರ್ ಲೋಡ್ ಕೇಬಲಗಳ ತೆರವು
- ಮತ್ತೆ ಒತ್ತುವರಿಯಾದರೆ ನಿರ್ದಾಕ್ಷಿಣ್ಯ ಕ್ರಮ ಎಚ್ಚರಿಕೆ

ಪಟಾಕಿ ಸ್ಥಳ ಪರಿಶೀಲನೆ: ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟಾಕಿ ದಾಸ್ತಾನು ಜಪ್ತಿ ಮಾಡಿರುವ ಕಂದಾಯ ಇಲಾಖೆಯ ಕ್ರಮವನ್ನು ಪ್ರಶ್ನಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ; ‘ಅರ್ಜಿದಾರರ ಪಟಾಕಿ ದಾಸ್ತಾನು ಮಳಿಗೆಗಳ ಸುರಕ್ಷತೆ ಬಗ್ಗೆ ಸ್ಫೋಟಕಗಳ ಮುಖ್ಯ ನಿಯಂತ್ರಣಾ ಅಧಿಕಾರಿಯು ಸ್ಥಳ ಪರಿಶೀಲನೆ ನಡೆಸಿ ಇದೇ 6ರೊಳಗೆ ವರದಿ ಸಲ್ಲಿಸಬೇಕು’ ಎಂದು ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಕೆ.ಪಿ.ಅಗ್ರಹಾರದ, ‘ಶ್ರೀ ತಿರುಮಲ ಟ್ರೇಡರ್ಸ್’ ಪಾಲುದಾರರಾದ ವೆಂಕಟೇಶ್ ಹಾಗೂ ವಿ. ಸತ್ಯನಾರಾಯಣ ಸೇರಿದಂತೆ ಇತರೆ ನಾಲ್ವರು ಪಟಾಕಿ ಮಾರಾಟಗಾರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ವಕೀಲ ಶರತ್ ಎಸ್. ಗೌಡ ವಾದ ಮಂಡಿಸಿದರು.

ಅರ್ಜಿಯಲ್ಲಿ ಏನಿದೆ?: ‘ನಾವು ಬೆಂಗಳೂರು ದಕ್ಷಿಣ ತಾಲ್ಲೂಕು ತಾವರಕೆರೆ ಹೋಬಳಿಯ ಎಲಚಿಗುಪ್ಪೆ ಗ್ರಾಮದ ಸರ್ವೆ ನಂಬರ್ 17/2ರಲ್ಲಿ ಪಟಾಕಿ ಮಾರಾಟ ಮಳಿಗೆ ಹೊಂದಿದ್ದು, ಕಳೆದ 25 ವರ್ಷಗಳಿಂದ ಪಟಾಕಿ ಮಾರಾಟದಲ್ಲಿ ತೊಡಗಿಸಿಕೊಂಡಿದ್ದೇವೆ. ಸ್ಫೋಟಕಗಳ ಕಾಯ್ದೆ ಅನ್ವಯ ಅಗತ್ಯ ಪರವಾನಗಿ ಹೊಂದಿದ್ದು, ಈಗಿನ ಪರವಾನಗಿ ಅವಧಿ 2024ರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿದೆ. ಹೀಗಿದ್ದರೂ, ತಾವರಕೆರೆ ಹೋಬಳಿಯ ಕಂದಾಯ ನಿರೀಕ್ಷಕರು ನಮಗೆ ಯಾವುದೇ ಪೂರ್ವ ನೋಟಿಸ್ ನೀಡದೆ, ಏಕಾಏಕಿ ಪಟಾಕಿ ದಾಸ್ತಾನು ಜಪ್ತಿ ಮಾಡಿ ಮಾರಾಟ ಮಳಿಗೆಗೆ ಬೀಗ ಹಾಕಿ ಎಫ್‌ಐಆರ್ ದಾಖಲಿಸಿದ್ದಾರೆ’ ಎಂದು ಅರ್ಜಿಯಲ್ಲಿ ದೂರಲಾಗಿದೆ.

‘ಪೊಲೀಸರು ಹಾಗೂ ಜಿಲ್ಲಾಧಿಕಾರಿ ನಿರ್ದೇಶನದಂತೆ ಕಂದಾಯ ನಿರೀಕ್ಷಕರು ದಾಸ್ತಾನು ಜಪ್ತಿ ಮಾಡಿ ಮಾರಾಟ ಮಳಿಗೆಗೆ ಬೀಗ ಹಾಕಿರುವುದನ್ನು ಕಾನೂನು ಬಾಹಿರ ಎಂದು ಘೋಷಿಸಬೇಕು. ವ್ಯಾಪಾರದಲ್ಲಿ ಪೊಲೀಸರು, ಜಿಲ್ಲಾಧಿಕಾರಿ ಹಾಗೂ ಇತರ ಅಧಿಕಾರಿಗಳು ಅನಗತ್ಯ ಹಸ್ತಕ್ಷೇಪ ಮಾಡದಂತೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ. ‘ಅರ್ಜಿ ವಿಲೇವಾರಿಯಾಗುವ ತನಕ ಪಟಾಕಿ ಮಾರಾಟಕ್ಕೆ ಅವಕಾಶ ನೀಡಿ ಬೀಗ ತೆರವುಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಮಧ್ಯಂತರ ಮನವಿ ಮಾಡಿದ್ದಾರೆ.

₹ 40 ಲಕ್ಷ ಮೌಲ್ಯದ ಪಟಾಕಿ ಜಪ್ತಿ

ಬೆಂಗಳೂರು: ಅಕ್ರಮವಾಗಿ ಪಟಾಕಿ ದಾಸ್ತಾನು ಮಾಡಿದ್ದ ಎರಡು ಗೋದಾಮುಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿ, ₹ 40 ಲಕ್ಷ ಮೌಲ್ಯದ ಪಟಾಕಿ ಜಪ್ತಿ ಮಾಡಿದ್ದಾರೆ.

‘ಜೀವನ್‌ಭಿಮಾನಗರ ಠಾಣೆ ವ್ಯಾಪ್ತಿಯ ನ್ಯೂ ತಿಪ್ಪಸಂದ್ರ ಮುಖ್ಯರಸ್ತೆ ಹಾಗೂ ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಗೋದಾಮುಗಳ ಮೇಲೆ ಪ್ರತ್ಯೇಕವಾಗಿ ದಾಳಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಪಟಾಕಿ ಮಾರಾಟ ಹಾಗೂ ದಾಸ್ತಾನಿಗೆ ಅನುಮತಿ ಕಡ್ಡಾಯ. ಆದರೆ, ಅಕ್ರಮವಾಗಿ ದಾಸ್ತಾನು ಮಾಡಿದ್ದರು. ಮಾಹಿತಿ ಆಧರಿಸಿ ದಾಳಿ ನಡೆಸಲಾಯಿತು’ ಎಂದರು. .

‘ನ್ಯೂ ತಿಪ್ಪಸಂದ್ರ ಮುಖ್ಯ ರಸ್ತೆಯ ಗೋದಾಮಿನಲ್ಲಿ ₹25 ಲಕ್ಷ ಮೌಲ್ಯದ, ಜ್ಞಾನಭಾರತಿ ಠಾಣೆ ವ್ಯಾಪ್ತಿ ಗೋದಾಮಿನಲ್ಲಿ ₹15 ಲಕ್ಷ ಮೌಲ್ಯದ ಪಟಾಕಿ ಸಿಕ್ಕಿದೆ’ ಎಂದರು.

‘ಎರಡೂ ಗೋದಾಮು ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

ರೈಲಿನಲ್ಲಿ ಗಾಂಜಾ ತರಿಸಿಕೊಂಡು ಮಾರಾಟ

ಬೆಂಗಳೂರು: ಒಡಿಶಾದಿಂದ ರೈಲಿನಲ್ಲಿ ಗಾಂಜಾ ತರಿಸಿಕೊಂಡು ನಗರದಲ್ಲಿ ಮಾರುತ್ತಿದ್ದ ಆರೋಪಿ ಹರ್ಷವರ್ಧನ್‌ನನ್ನು (25) ಆರ್‌ಎಂಸಿಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಹರ್ಷವರ್ಧನ್, ಸರಕು ಸಾಗಣೆ ವಾಹನದಲ್ಲಿ ಗಾಂಜಾ ಸಾಗಿಸುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಈತನಿಂದ 12 ಕೆ.ಜಿ 50 ಗ್ರಾಂ ಗಾಂಜಾ, ₹ 1700 ಹಾಗೂ ಸರಕು ಸಾಗಣೆ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಲಾರಿ ಚಾಲಕನಾಗಿ ಕೆಲ ವರ್ಷ ಕೆಲಸ ಮಾಡಿದ್ದ ಹರ್ಷವರ್ಧನ್, ಒಡಿಶಾಗೆ ಆಗಾಗ ಹೋಗಿ ಬರುತ್ತಿದ್ದ. ಅಲ್ಲಿಯೇ ಈತನಿಗೆ ಪೆಡ್ಲರ್ ಪರಿಚಯವಾಗಿತ್ತು. ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ನಗರಕ್ಕೆ ತರುತ್ತಿದ್ದ ಈತ, ಅದನ್ನು ಮಾರಿ ಹಣ ಸಂಪಾದಿಸುತ್ತಿದ್ದ. ಇತ್ತೀಚೆಗೆ ಲಾರಿ ಚಲಾಯಿಸುವುದನ್ನು ಆರೋಪಿ ಬಿಟ್ಟಿದ್ದ.’ ಎಂದು ಹೇಳಿದ್ದಾರೆ.

ಸುಧಾ ಓದಿರಿ

ಸುದ್ದಿ 2 ನಿಮಿಷ

ಮಾತನಾಡುವಾಗ ಸಂಯಮ ಇರಲಿ: ಹೈಕೋರ್ಟ್

ಬೆಂಗಳೂರು: ಪ್ರಾದೇಶಿಕ ಮತ್ತು ರಾಜ್ಯ ಭಾಷೆಗಳಲ್ಲಿ ಶಿಕ್ಷಣ ನೀಡುವ ವಿಚಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಹೈಕೋರ್ಟ್,‘ಉನ್ನತ ಹುದ್ದೆಯಲ್ಲಿ ಇರುವವರು ಮಾತನಾಡುವಾಗ ಸಂಯಮ ತೋರಬೇಕು’ ಎಂದು ಹೇಳಿದೆ.

‘ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಒಂದು ವಿಷಯವಾಗಿ ಬೋಧಿಸಬೇಕು’ ಎಂಬ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಮೌಖಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದೆ.

ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿಗಳು, ‘ಪ್ರಾದೇಶಿಕ ಮತ್ತು ರಾಜ್ಯ ಭಾಷೆಗಳಲ್ಲಿ ಶಿಕ್ಷಣ ಪಡೆಯುವವರನ್ನು ಅಸಮರ್ಥರು ಎಂದು ಪರಿಗಣಿಸಬಾರದು. ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಪಡೆದವರೂ ಯಶಸ್ವಿಯಾಗಬಹುದು. ನಾನೂ ಪ್ರಾದೇಶಿಕ ಭಾಷೆಯಲ್ಲೇ ಕಲಿತಿದ್ದೇನೆ. ನನಗೆ ಅದು ಎಂದಿಗೂ ಅಡ್ಡಿಯಾಗಲಿಲ್ಲ. ಭಾಷೆಗೆ ಸಂಬಂಧಿಸಿದ ವಿಚಾರಗಳನ್ನು ನ್ಯಾಯಾಲಯ ಅದರ ಕಾನೂನು ಅಂಶಗಳ ಆಧಾರದಲ್ಲಿ ಪರಿಗಣಿಸಬೇಕಾಗುತ್ತದೆ’ ಎಂದು ಮೌಖಿಕವಾಗಿ ನುಡಿದರು.

ನ್ಯಾಯಪೀಠ ಹಿಂದೆ ನೀಡಿದ್ದ ನಿರ್ದೇಶನದಂತೆ ಅರ್ಜಿದಾರರ ಪರ ವಕೀಲರು; ಅರ್ಜಿದಾರ ಪೋಷಕರ ಮಕ್ಕಳು, ಅವರು ವ್ಯಾಸಂಗ ಮಾಡುತ್ತಿರುವ ಶಾಲೆಗಳ ವಿವರಗಳನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಇತರ ಅರ್ಜಿದಾರರು ತಮ್ಮ ಮಕ್ಕಳ ವಿವರಗಳನ್ನು ಸಲ್ಲಿಸಲಿ’ ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿತು.

ಬಯೊಮೆಟ್ರಿಕ್ ಹಾಜರಾತಿ: ವೇತನ ತಡೆಹಿಡಿಯಲು ಸೂಚನೆ

ಬೆಂಗಳೂರು: ಬಯೊಮೆಟ್ರಿಕ್ ಹಾಜರಾತಿ (ಎಇಬಿಎಎಸ್) ವ್ಯವಸ್ಥೆಯ ಮೂಲಕ ಹಾಜರಾತಿ ದಾಖಲಿಸದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವೇತನವನ್ನು ತಡೆಹಿಡಿಯಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಆರೋಗ್ಯ ಇಲಾಖೆಯಡಿಯ ಸಂಸ್ಥೆಗಳು, ಆಸ್ಪತ್ರೆಗಳು, ಕಚೇರಿಗಳು ಹಾಗೂ ತರಬೇತಿ ಕೇಂದ್ರಗಳಲ್ಲಿ ಎಇಬಿಎಎಸ್ ವ್ಯವಸ್ಥೆಯ ಮೂಲಕ ಹಾಜರಾತಿ ದಾಖಲಿಸಲು, ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸೂಚಿಸಲಾಗಿತ್ತು. ಈ ಹಾಜರಾತಿಯನ್ನು ಪರಿಶೀಲಿಸಿ, ವೇತನ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ಬಯೊಮೆಟ್ರಿಕ್ ಹಾಜರಾತಿ ಪ್ರಮಾಣ ತೃಪ್ತಿಕರವಾಗಿಲ್ಲ. ಆದ್ದರಿಂದ ಈ ವ್ಯವಸ್ಥೆಯಡಿ ಹಾಜರಾತಿ ದಾಖಲಿಸದವರಿಗೆ ವೇತನ ತಡೆಹಿಡಿಯಬೇಕು ಎಂದು ಸೂಚಿಸಿದ್ದಾರೆ.

ಜಿ.ಪಂಗೆ ಡಿಡಿಪಿಯು ಮೇಲುಸ್ತುವಾರಿ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆ ಮೈಸೂರು ಹಾಗೂ ಬೆಂಗಳೂರು ವಿಭಾಗದ ಜಿಲ್ಲೆಗಳ ಜಿಲ್ಲಾ ಉಪ ನಿರ್ದೇಶಕರ (ಡಿಡಿಪಿಯು) ಮೇಲುಸ್ತುವಾರಿಯನ್ನು ಜಿಲ್ಲಾ ಪಂಚಾಯಿತಿಗೆ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಜಿಲ್ಲಾಮಟ್ಟದ ಕಚೇರಿಗಳ ನಿತ್ಯದ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜಿಲ್ಲಾ ಪಂಚಾಯಿತಿ ಸಿಇಒಗಳು ಮೇಲುಸ್ತುವಾರಿ ನೋಡಿಕೊಳ್ಳುವರು. ಕಲಬುರಗಿ ಹಾಗೂ ಧಾರವಾಡ ವಲಯಗಳ ಉಪ ನಿರ್ದೇಶಕರ ಮೇಲುಸ್ತುವಾರಿಯನ್ನು ಶಾಲಾ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರು ನೋಡಿಕೊಳ್ಳಲಿದ್ದಾರೆ ಎಂದು ವಿವರಿಸಲಾಗಿದೆ.

ಉಪನ್ಯಾಸಕರ ಸಂಘ ಖಂಡನೆ: ಸರ್ಕಾರದ ಆದೇಶವನ್ನು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಖಂಡಿಸಿದೆ.

ಈಗ ಇರುವ ವ್ಯವಸ್ಥೆಯಂತೆ ಜಿಲ್ಲಾಧಿಕಾರಿಗಳು ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದು, ಸಮರ್ಪಕವಾಗಿ ಕಾರ್ಯಗಳು ನಡೆಯುತ್ತಿವೆ. ಇಂತಹ ಆದೇಶಗಳಿಂದ ಭವಿಷ್ಯದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಪ್ರತ್ಯೇಕ ಅಸ್ತಿತ್ವಕ್ಕೆ ಧಕ್ಕೆ ಬರಬಹುದು. ತಕ್ಷಣ ಆದೇಶ ಹಿಂಪಡೆಯಬೇಕು ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಕಾರ್ಯಾಧ್ಯಕ್ಷ ಎಸ್.ಆರ್. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಶಿವರಾಮ್ ಬಿ. ಮಾಲೀಪಾಟೀಲ, ಖಂಜಾಂಚಿ ಜಯಣ್ಣ ವಿನಂತಿಸಿದ್ದಾರೆ.

ಗೃಹಿಣಿ ಆತ್ಮಹತ್ಯೆ: ಗೋವಾದಲ್ಲಿ ಪತಿ, ಅತ್ತೆ– ಮಾವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ಐಶ್ವರ್ಯಾ (26) ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಪ್ರಚೋದನೆ ನೀಡಿದ್ದ ಆರೋಪದಡಿ ಪತಿ ಹಾಗೂ ಅತ್ತೆ-ಮಾವ ಸೇರಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

‘ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ ಐಶ್ವರ್ಯ, ವಿಜಯನಗರದ ಸುಬ್ಬಣ್ಣ ಗಾರ್ಡನ್‌ನಲ್ಲಿರುವ ಮನೆಯಲ್ಲಿ ಅ. 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಪೋಷಕರ ದೂರು ಆಧರಿಸಿ, ಪತಿ ರಾಜೇಶ್, ಅತ್ತೆ ಸೀತಾ, ಮಾವ ಗಿರಿಯಪ್ಪ, ಮೈದುನ ವಿಜಯ್, ಈತನ ಪತ್ನಿ ತಸ್ಮಯಾರನ್ನು ಗೋವಾ ಬಳಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಐವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ಕಸ್ಟಡಿಗೆ ಪಡೆಯಲಾಗಿದೆ’ ಎಂದು ತಿಳಿಸಿದರು.

ಅಮೆರಿಕದಲ್ಲಿ ವ್ಯಾಸಂಗ: ‘ಐಶ್ವರ್ಯಾ ಅವರು ಅಮೆರಿಕದಲ್ಲಿ ಎಂಬಿಎ ವ್ಯಾಸಂಗ ಮಾಡಿದ್ದರು. ನಂತರ, ಬೆಂಗಳೂರಿಗೆ ಬಂದು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ಐಸ್‌ಕ್ರೀಮ್ ಕಂಪನಿ ಮಾಲೀಕರಾಗಿದ್ದ ರಾಜೇಶ್ ಅವರನ್ನು ಐದು ವರ್ಷಗಳ ಹಿಂದೆ ಮದುವೆಯಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ಐಶ್ವರ್ಯಾ ಹಾಗೂ ರಾಜೇಶ್ ಕೆಲ ವರ್ಷ ಚೆನ್ನಾಗಿದ್ದರು. ಆದರೆ, ಇತ್ತೀಚೆಗೆ ಅವರ ನಡುವೆ ಜಗಳ ಶುರುವಾಗಿತ್ತು. ಶೀಲ ಶಂಕಿಸಿ ಪತ್ನಿಗೆ ರಾಜೇಶ್ ಕಿರುಕುಳ ನೀಡಲಾರಂಭಿಸಿದ್ದರು. ಅತ್ತೆ-ಮಾವ, ಮೈದುನ ಹಾಗೂ ಆತನ ಪತ್ನಿ ಸಹ ಕಿರುಕುಳ ನೀಡುತ್ತಿದ್ದರು. ಹಲ್ಲೆ ಸಹ ಮಾಡುತ್ತಿದ್ದರೆಂದು ಗೊತ್ತಾಗಿದೆ.’

‘ಆತ್ಮಹತ್ಯೆ ಸ್ಥಳದಲ್ಲಿ ಮರಣಪತ್ರ ಸಿಕ್ಕಿತ್ತು. ಅದರನ್ವಯ ಪ್ರಕರಣ ದಾಖಲಾಗಿತ್ತು’ ಎಂದು ತಿಳಿಸಿದರು.

ಗೋವಾದಲ್ಲಿ ಪಾರ್ಟಿ: ‘ಪ್ರಕರಣ ದಾಖಲಾಗುತ್ತಿದ್ದಂತೆ ಪತಿ, ಅತ್ತೆ-ಮಾವ, ಮೈದುನ-ಆತನ ಪತ್ನಿ ಗೋವಾಕ್ಕೆ ಹೋಗಿದ್ದರು. ಗೋವಾದಿಂದ ಮುಂಬೈನತ್ತ ಹೊರಟಿದ್ದರು. ಮಾರ್ಗಮಧ್ಯೆ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ತಿಳಿಸಿದರು.



ರೂ.5000ಕ್ಕೆ ಶಾಪಿಂಗ್ ಮಾಡಿ ಹಾಗೂ ಪಡೆಯಿರಿ ರೂ.1000* ಮೌಲ್ಯದ ಗಿಫ್ಟ್ ವೋಚರ್ *T&C APPLY.

ಸಲ್ವಾರ್ ಸೂಟ್‌ಗಳು • ಸೀರೆಗಳು • ಕುರ್ತಾಗಳು • ಕುರ್ತಾ ಸೆಟ್‌ಗಳು • ಡ್ರೆಸ್ ಮೆಟೀರಿಯಲ್‌ಗಳು • ಟ್ಯೂನಿಕ್‌ಗಳು • ಕಫ್ತಾನ್‌ಗಳು

ಬೆಳಗಾವಿ | ಬಳ್ಳಾರಿ | ಬೆಂಗಳೂರು | ದಾವಣಗೆರೆ | ಗುಲಬರ್ಗಾ | ಹೊಸಪೇಟೆ | ಹುಬ್ಬಳ್ಳಿ | ಮಂಗಳೂರು | ಮೈಸೂರು
ಮಣಿಪಾಲ | ಶಿವಮೊಗ್ಗ | ತುಮಕೂರು | ಉಡುಪಿ | ವಿಜಯಪುರ

sochstories ನಲ್ಲಿ ನಮ್ಮನ್ನು ಫಾಲೋ ಮಾಡಿ | ಸೋಚ್ ನೊಂದಿಗೆ ಫ್ರ್ಯಾಂಚೈಸಿಂಗ್ ಅವಕಾಶಗಳಿಗಾಗಿ franchise@soch.com ಗೆ ಇಮೇಲ್ ಮಾಡಿ

ರಾಣಿ ಸಂಯುಕ್ತ ರವರ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ Advt.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ರಾಣಿ ಸಂಯುಕ್ತಾ ರವರ ವಿಜಯನಗರದ ಹೊಸಪೇಟೆಯಲ್ಲಿರುವ ನಿವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ವಸತಿ ಸಚಿವ ಜಮೀರ್ ಅಹಮದ್ ಖಾನ್, ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್, ವಿಜಯನಗರ ಶಾಸಕ ಎಚ್.ಆರ್.ಗವಿಯಪ್ಪ, ಕಂಪ್ಲಿ ಶಾಸಕ ಜೆ.ಎನ್. ಗಣೇಶ್, ಸಿರಗುಪ್ಪ ಶಾಸಕ ಬಿ.ಎಂ.ನಾಗರಾಜ್, ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್, ಕೂಡ್ಲಿಗಿ ಶಾಸಕ ಎನ್.ಟಿ.ಶ್ರೀನಿವಾಸ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಹಾಗೂ ರಾಣಿ ಸಂಯುಕ್ತಾ ರವರ ಪತಿ, ಕೈಗಾರಿಕೋದ್ಯಮಿ & ಗಣಿ ಮಾಲೀಕ ಕೆ.ಬಿ. ಶ್ರೀನಿವಾಸ ರೆಡ್ಡಿ, ಕುಟುಂಬಸ್ಥರು ಉಪಸ್ಥಿತರಿದ್ದರು.

ಈಶಾನ್ಯ ರೈಲ್ವೆ — **ಇ-ಹರಾಜು ಲಾಟ್ ಪ್ರಕಟಣೆ**

ಭಾರತದ ರಾಷ್ಟ್ರಪತಿಗಳ ಪರವಾಗಿ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಲಕ್ನೋ ಇವರು, ಎಂ/ಎಕ್ಸ್‌ಪ್ರೆಸ್ ರೈಲುಗಳ ಪ್ರತಿ ಕೋಚ್‌ನ ಒಳಭಾಗದಲ್ಲಿ 03 ವರ್ಷಗಳ ಅವಧಿಗೆ 30 ಸ್ಟಿಕ್ಕರ್‌ಗಳನ್ನು (ತಲಾ ಗಾತ್ರ 2*1.5 ಚ.ಅ.) ಅಂಟಿಸಿ (ಕನ್ನಡಿಯ ಕೆಳಭಾಗದಲ್ಲಿ, ಕ್ಯಾಬಿನ್‌ನಲ್ಲಿ, ಕಿಟಕಿಗಳ ಮಧ್ಯದಲ್ಲಿ) ವಾಣಿಜ್ಯ ಪ್ರಚಾರ ನೀಡುವ ವಿನೈಲ್ ರ್‍ಯಾಪಿಂಗ್ ಕಾಮಗಾರಿಗಾಗಿ ಇ-ಹರಾಜು ವ್ಯವಸ್ಥೆಯ ಮುಖಾಂತರ ಜಾಹೀರಾತು ಸಂಸ್ಥೆಗಳನ್ನು ಆಹ್ವಾನಿಸಿದ್ದಾರೆ.

ವಿವರ ಕೆಳಗಿನಂತಿದೆ

ಕ್ರ. ಸಂ.	ಇ-ಹರಾಜು ನೋಟಿಸ್ ನಂ.	ರೈಲು ಸಂಖ್ಯೆ	ಒಟ್ಟು ರೇಕ್ಸ್	ಇಂದ	ವರೆಗೆ	ಒಟ್ಟು ಕೋಚ್‌ಗಳ ಸಂಖ್ಯೆ	ಪ್ರತಿ ರೇಕ್‌ನಲ್ಲಿ ವಿನೈಲ್ ರ್‍ಯಾಪಿಂಗ್ ಮಾಡಬೇಕಾದ ಒಟ್ಟು ಅಳತೆ (ಚ.ಅ.ಗಳಲ್ಲಿ)	ಹರಾಜು ಕ್ಲೋಸಿಂಗ್ ದಿನಾಂಕ ಮತ್ತು ಸಮಯ
01	ADVT-INT-131210-87-22-1	12531/12532	01	ಲಕ್ನೋ	ಗೋರಖ್‌ಪುರ	20	1800.00	Dt. 17-11-2023 at 13:30 hrs.
02	ADVT-EFF-132368-22-1	12511/12512 12589/12590 12591/12592	04	ಗೋರಖ್‌ಪುರ	ತ್ರಿವೇಂದ್ರಮ್/ ಸಿಕಂದರಾಬಾದ್/ ಯಶವಂತಪುರ	88	5722.78	Dt. 17-11-2023 at 13:40 hrs.
03	ADVT-INT-131245-93-22-1	15011/15012	02	ಲಕ್ನೋ	ಚಂದೀಗಢ್	32	2880.00	Dt. 17-11-2023 at 13:50 hrs.
04	ADVT-INT-154401-85-22-1	02529D/05069D 12530/12529 15070/15069	02	ಲಕ್ನೋ/ ಆಯಿಷಾಬಾಗ್	ಆಯಿಷಾಬಾಗ್/ ಪಾಟಲಿಪುತ್ರ/ ಗೋರಖ್‌ಪುರ	32	2880.00	Dt. 17-11-2023 at 14:00 hrs.
05	ADVT-INT-131320-97-22-1	22537/22538 15017/15018	07	ಗೋರಖ್‌ಪುರ	ಲೋಕಮಾನ್ಯ ತಿಲಕ್ ಟರ್ಮಿನಲ್	154	13860.00	Dt. 17-11-2023 at 14:10 hrs.
06	ADVT-INT-129409-84-22-1	12533/12534	03	ಲಕ್ನೋ	ಮುಂಬೈ ಸಿಎಸ್‌ಟಿಎಂ	66	5940.00	Dt. 17-11-2023 at 14:20 hrs.
07	ADVT-INT-131321-96-22-1	15003/15004 12555/12556	04	ಗೋರಖ್‌ಪುರ	ಕಾನ್ಪುರ್ ಅನ್ವರ್‌ಗಂಜ್/ ಭಟಿಂಡಾ	88	7920.00	Dt. 17-11-2023 at 14:30 hrs.
08	ADVT-INT-131314-119-23-1	12597/12598	01	ಗೋರಖ್‌ಪುರ	ಮುಂಬೈ ಸಿಎಸ್‌ಟಿಎಂ	22	1980.00	Dt. 17-11-2023 at 14:40 hrs.
09	ADVT-INT-131316-94-22-1	15048/15047 15050/15049 15052/15051 15009/15010	04	ಗೋರಖ್‌ಪುರ	ಕೋಲ್ಕತಾ/ ಮೈಲಾನಿ	84	7560.00	Dt. 17-11-2023 at 14:50 hrs.

• ಹರಾಜು ಆರಂಭ ದಿನಾಂಕ ಮತ್ತು ಸಮಯ (ಎಲ್ಲಾ ಲಾಟ್‌ಗಳು): 17–11–2023 ರಂದು 13:00 ಗಂಟೆ • ಗುತ್ತಿಗೆ ಅವಧಿ: 03 ವರ್ಷ

• ವೆಬ್‌ಸೈಟ್ ವಿಳಾಸ: www.ireps.gov.in (ಇ-ಹರಾಜು ಮಾಡ್ಯೂಲ್)

ಸಿಪಿಆರ್‌ಒ/ವಾಣಿಜ್ಯ–163 ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ವಾಣಿಜ್ಯ), ಲಕ್ನೋ

ಛಾವಣಿ ಮತ್ತು ಫುಟ್‌ಬೋರ್ಡ್‌ಗಳ ಮೇಲೆ ಪ್ರಯಾಣ ಮಾಡಬೇಡಿ

ವಿಚಾರ ಸಂಕಿರಣದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಮತ

‘ಸಮತೆಯ ಸಾಂಸ್ಕೃತಿಕ ಚಿಂತನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಸಂದರ್ಭದಲ್ಲಿ ಸಮತೆ ಮತ್ತು ಮಮತೆಯಿಂದ ಕೂಡಿದ ಸಾಂಸ್ಕೃತಿಕ ಚಿಂತನೆಯು ಅಗತ್ಯ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಪದ ಸಂಸ್ಥೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಡಾ.ರಾಜಪ್ಪ ದಳವಾಯಿ ಅವರ ಸಾಂಸ್ಕೃತಿಕ ಚಿಂತನೆ’ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಇವತ್ತು ದೇಶದಲ್ಲಿ ಆರ್ಥಿಕ ಕೇಂದ್ರೀಕರಣ ನಡೆಯುತ್ತಿದೆ. ಇನ್ನೊಂದೆಡೆ ಧರ್ಮದ ಧ್ರುವೀಕರಣ ಆಗುತ್ತಿದೆ. ಧರ್ಮದ ಧ್ರುವೀಕರಣ ದ್ವೇಷದ ಧ್ರುವೀಕರಣಕ್ಕೆ ಅವಕಾಶವಾಗಲಿದೆ. ಇದು, ಅಪಾಯಕಾರಿ. ಈ ಸಂದರ್ಭದಲ್ಲಿ ನಿಜ ಅರ್ಥದ ಸಾಂಸ್ಕೃತಿಕ ಚಿಂತನೆ ಅಗತ್ಯ. ಹೀಗಾಗಿ, ನಮ್ಮ ಸಾಂಸ್ಕೃತಿಕ ಚಿಂತನೆ ಮಾನವೀಯ ಹಾಗೂ ಮನುಷ್ಯ ಪರವಾಗಿ ಇರಬೇಕಾಗುತ್ತದೆ’ ಎಂದು ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್ ಪುಷ್ಪ, ‘ರಾಜಪ್ಪ ದಳವಾಯಿ ಅವರದ್ದು ಚೌಕಟ್ಟು ಮೀರಿ ಬೆಳೆದ ವ್ಯಕ್ತಿತ್ವವಾಗಿದೆ. ವಿಮರ್ಶೆ, ರಂಗಭೂಮಿ ಸೇರಿದಂತೆ ಸಾಹಿತ್ಯದ ಎಲ್ಲ ವಲಯಗಳಲ್ಲಿ ತಮ್ಮದೆ ಛಾಪು ಮಾಡಿಸಿದ್ದಾರೆ. ಅಂತಹವರ ಕುರಿತು ಸಾಂಸ್ಕೃತಿಕ ಚಿಂತನೆ ನಡೆಯುತ್ತಿರುವುದು ಖುಷಿ ನೀಡುತ್ತದೆ’ ಎಂದರು.

ರಾಜಪ್ಪ ದಳವಾಯಿ ಅವರ ಸಾಂಸ್ಕೃತಿಕ ಚಿಂತನೆಗಳ ಬಗ್ಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ವಿವಿಧ ಗೋಷ್ಠಿಗಳು ನಡೆದವು.

ವಿಚಾರ ಸಂಕಿರಣದಲ್ಲಿ ಎಚ್‌.ಎಲ್‌.ಪುಷ್ಪ ಹಾಗೂ ಬರಗೂರು ರಾಮಚಂದ್ರಪ್ಪ ಚರ್ಚಿಸಿದರು. ಪದ ಸಂಸ್ಥೆಯ ಕಾರ್ಯದರ್ಶಿ ಪದ ದೇವರಾಜ್ ಇದ್ದಾರೆ —ಪ್ರಜಾವಾಣಿ ಚಿತ್ರ

ವೈದ್ಯಕೀಯ: ನ.9 ರಂದು 133 ಸೀಟು ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಇರುವ 133 ವೈದ್ಯಕೀಯ ಸೀಟುಗಳು ಮತ್ತು ದಂತ ವೈದ್ಯಕೀಯ ಸೀಟುಗಳನ್ನು ‘ಸ್ಟ್ರೇ ವೇಕೆನ್ಸಿ ರೌಂಡ್’ ಮೂಲಕ ನ.9 ರಂದು ಆನ್‌ಲೈನ್‌ನಲ್ಲೇ ಹಂಚಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಸೀಟು ಹಂಚಿಕೆಯಲ್ಲಿ ದಂತ ವೈದ್ಯಕೀಯ, ಆಯುಷ್ ಮತ್ತು ಎಂಜಿನಿಯರಿಂಗ್ ಸೀಟು ಪಡೆದುಕೊಂಡರೂ ಭಾಗವಹಿಸಬಹುದು. ಈ ವಿಶೇಷ ಸುತ್ತಿನಲ್ಲಿ ಸೀಟು ದೊರೆತರೆ ಅಂಥವರಿಗೆ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾದ ಸೀಟುಗಳು ರದ್ದಾಗುತ್ತವೆ. ಅವುಗಳಿಗೆ ಪಾವತಿಸಿರುವ ಶುಲ್ಕವನ್ನೂ ಹಿಂದಿರುಗಿಸಲಾಗುವುದಿಲ್ಲ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಮಾಹಿತಿ ನೀಡಿದ್ದಾರೆ.

ಆಸಕ್ತ ಅಭ್ಯರ್ಥಿಗಳು ನ.7 ರ ಬೆಳಿಗ್ಗೆ 10 ರಿಂದ ನ.8 ರ ಮಧ್ಯಾಹ್ನ 2 ರ ಒಳಗೆ ನಿಗದಿತ ಮೊತ್ತದ ಡಿಡಿ, ವೆರಿಫಿಕೇಶನ್ ಸ್ಲಿಪ್ ಮತ್ತು ಮೂಲ ದಾಖಲಾತಿಗಳೊಂದಿಗೆ ಪ್ರಾಧಿಕಾರದ ಕೇಂದ್ರ ಕಚೇರಿಗೆ ಹಾಜರಾಗಬೇಕು. ಬಳಿಕ, ‘ಆಪ್ಷನ್ಸ್’ ದಾಖಲಿಸಲು ಪೋರ್ಟಲ್ ತೆರೆಯಲಾಗುವುದು. ನ.9 ರ ಬೆಳಿಗ್ಗೆ 9 ರವರೆಗೂ ಅವಕಾಶ ಕಲ್ಪಿಸಲಾಗುವುದು. ದಂತ ವೈದ್ಯಕೀಯ ಸೀಟುಗಳ ಹಂಚಿಕೆ ಪ್ರಕ್ರಿಯೆ ನ.10 ರಂದು ನಡೆಯಲಿದೆ ಎಂದಿದ್ದಾರೆ. ಮಾಹಿತಿಗೆ ಪ್ರಾಧಿಕಾರದ ಜಾಲತಾಣ http://kea.kar.nic.in ನೋಡಬಹುದು.

ಪತ್ನಿ ಬಗ್ಗೆ ಅಪಪ್ರಚಾರ: ಕೊಲೆ ಶಂಕೆ, ಇಬ್ಬರು ಬಂಧನ

ಬೆಂಗಳೂರು: ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಮುದಾಸೀರ್ ಖಾನ್ ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

‘ಗುರುವಾರ ನಡೆದ ಗಲಾಟೆ ವೇಳೆ ತೀವ್ರ ಗಾಯಗೊಂಡು ಮುದಾಸೀರ್ ಮೃತಪಟ್ಟಿದ್ದಾರೆಂದು ಆರೋಪಿಸಿ ಪತ್ನಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ಆರೋಪಿಗಳಾದ ವಾಹಿದ್ ಅಹ್ಮದ್ ಹಾಗೂ ಮತೀನ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮುದಾಸೀರ್ ಅವರು ಪತ್ನಿ ಹಾಗೂ ಮಕ್ಕಳ ಜೊತೆ ವಾಸವಿದ್ದರು. ಸಂಬಂಧಿಕರೇ ಆಗಿದ್ದ ಆರೋಪಿಗಳು, ಕ್ಷುಲ್ಲಕ ಕಾರಣಕ್ಕಾಗಿ ಆಗಾಗ ಜಗಳ ಮಾಡುತ್ತಿದ್ದರು. ಮುದಾಸೀರ್ ಪತ್ನಿಯ ನಡತೆ ಸರಿ ಇಲ್ಲವೆಂದು ಆರೋಪಿಗಳು ಅಪಪ್ರಚಾರ ಮಾಡುತ್ತಿದ್ದರು. ಅದನ್ನು ಪ್ರಶ್ನಿಸಲೆಂದು ಮುದಾಸೀರ್ ಅವರು ಪತ್ನಿ ಜೊತೆ ಆರೋಪಿಗಳ ಬಳಿ ಹೋಗಿದ್ದರು.’

‘ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಇದೇ ವೇಳೆ ಆರೋಪಿಗಳು, ಮುದಾಸೀರ್ ಮೇಲೆ ಹಲ್ಲೆ ಮಾಡಿದ್ದರು. ತೀವ್ರ ಗಾಯಗೊಂಡು ಮುದಾಸೀರ್ ಮೃತಪಟ್ಟಿರುವ ಶಂಕೆ ಇದೆ. ಮೃತದೇಹದ ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

7ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತ ಕನ್ನಡ ಸಮ್ಮೇಳನ: ಮುಖ್ಯ ಅತಿಥಿಗಳು: ಸಂತೋಷ್ ಲಾಡ್, ಹನುಮಂತರಾಯಪ್ಪ, ಹಿರೇಮಗಳೂರು ಕಣ್ಣನ್, ಮಂಜುನಾಥ್ ಗಂಗಾಧರ್, ಕೆ.ಶ್ರೀನಿವಾಸ್, ಮಧುಸೂದನ್ ಮೂರ್ತಿ, ಐವಾನ್ ಡಿಸೋಜಾ, ಮನಮೋಹನ್ ಆರ್., ಸಿ.ಎನ್.ಬಿ. ರಾಜೇಶ್, ವಿ. ಅಶ್ವತ್ಥ ರಾಮಯ್ಯ, ಮಿಮಿಕ್ರಿ ದಯಾನಂದ್, ನಾಗಶ್ರೀ ತ್ಯಾಗರಾಜ್, ಆಯೋಜನೆ: ನಿರಾತಂಕ, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 9.30

ಸುಸ್ಥಿರ ನಾಯಕತ್ವ ಶೃಂಗಸಭೆ: ಉದ್ಘಾಟನೆ: ಈಶ್ವರ ಖಂಡ್ರೆ, ಪ್ರಧಾನ ಭಾಷಣ: ಜಾವೇದ್ ಅಖ್ತರ್, ಪ್ರಾಸ್ತಾವಿಕ ಮಾತು: ಎ. ರವೀಂದ್ರ, ಆಯೋಜನೆ: ಸೆಂಟರ್ ಫಾರ್ ಸಸ್ಟೆನೆಬಲ್ ಡೆವಲಪ್‌ಮೆಂಟ್, ಸ್ಥಳ: ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

ಫ್ರೆಂಡ್ ಫೆಸ್ಟಿವಲ್: ಮುಖ್ಯ ಅತಿಥಿಗಳು: ರಾಜೀವ್ ಚಂದ್ರಶೇಖರ್, ಎ.ಎಸ್. ಕಿರಣ್ ಕುಮಾರ್, ಕೆ.ಪಿ. ಗೋಪಾಲಕೃಷ್ಣ, ಗೌರವ ಅತಿಥಿಗಳು: ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ: ದಿ ಏಕ್ಯಾ ಬೋರ್ಡ್ ಆಫ್ ಗವರ್ನರ್ಸ್, ಸ್ಥಳ: ಸಿಎಂಆರ್ ತಾಂತ್ರಿಕ ವಿದ್ಯಾಲಯ, ಎಇಸಿಎಸ್ ಲೇಔಟ್, ಐಟಿ ಪಾರ್ಕ್ ರಸ್ತೆ, ಬೆಳಿಗ್ಗೆ 10.30

ನವೆಂಬರ್ ಉತ್ಸವ: ಕರಕುಶಲ ವಸ್ತುಗಳ ಪ್ರದರ್ಶನ, ಆಯೋಜನೆ: ವೈಡಬ್ಲ್ಯುಸಿಎ ಆಫ್ ಬೆಂಗಳೂರು ಸಿಟಿ, ಸ್ಥಳ: ನಂ.7, 6ನೇ ಬ್ಲಾಕ್, ಕೋರಮಂಗಲ ಪೊಲೀಸ್ ಠಾಣೆ ಪಕ್ಕ, ಬೆಳಿಗ್ಗೆ 10.30

ಎಚ್.ಎಂ.ಕೆ.ಪಿ. ರಾಜ್ಯ ಸಮಾವೇಶ ಹಾಗೂ ಮೈಕೆಲ್ ಬಿ. ಫರ್ನಾಂಡಿಸ್ ಅವರ 90ನೇ ಜನ್ಮದಿನದ ಅಭಿನಂದನಾ ಗ್ರಂಥ ‘ಮೈಕೆಲ್–90’ ಬಿಡುಗಡೆ: ಕಾರ್ಯಕ್ರಮ ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಮೈಕೆಲ್ ಬಿ. ಫರ್ನಾಂಡಿಸ್, ಮುಖ್ಯ ಅತಿಥಿ: ನ್ಯಾ.ಎಂ.ಎನ್. ವೆಂಕಟಾಚಲಯ್ಯ, ಪುಸ್ತಕ ಬಿಡುಗಡೆ: ಬಿ.ಆರ್. ಪಾಟೀಲ, ಆಯೋಜನೆ: ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್ ಕರ್ನಾಟಕ ಘಟಕ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಸೌಮ್ಯದೀಪ ಸಿನ್ಹಾ ಅವರಿಂದ ವ್ಯಂಗ್ಯಚಿತ್ರ ಪ್ರದರ್ಶನ: ಉದ್ಘಾಟನೆ: ಬಿ.ಜಿ. ಗುಜ್ಜಾರಪ್ಪ, ಆಯೋಜನೆ ಹಾಗೂ ಸ್ಥಳ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಮಿಡ್‌ಫೋರ್ಡ್ ಹೌಸ್, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 11

ಅಖಿಲ ಭಾರತ ವೈದ್ಯಕೀಯ ಸಮ್ಮೇಳನ: ಉದ್ಘಾಟನೆ: ಎಂ.ವಿ. ನಾಡಕರ್ಣಿ, ಅಧ್ಯಕ್ಷತೆ: ಡಾ. ವಿನಾಯಕ್ ನರ್ಲೀಕರ್, ಮುಖ್ಯ ಅತಿಥಿ: ಡಾ. ರಮೇಶ್ ಕೃಷ್ಣ ಕೆ., ಅತಿಥಿ ಭಾಷಣಕಾರರು: ಡಾ. ಪ್ರಭುದೇವ್, ಡಾ.ಕೆ. ರವಿ, ಆಯೋಜನೆ: ಮೆಡಿಕಲ್ ಸರ್ವಿಸ್ ಸೆಂಟರ್, ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕೆ.ಆರ್. ರಸ್ತೆ, ಬೆಳಿಗ್ಗೆ 11.30

ಸಂತೋಷ ಹಾನಗಲ್ಲ ಅವರ ‘ವೀರ ಸೌದಾಮಿನಿ ಕಿತ್ತೂರು ರಾಣಿ ಚನ್ನಮ್ಮ’ ಚಿತ್ರಸಂಪುಟ ಬಿಡುಗಡೆ: ಸಿದ್ದರಾಮಯ್ಯ, ಶುಭನುಡಿ: ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಅಧ್ಯಕ್ಷತೆ: ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳು: ಸತೀಶ ಜಾರಕಿಹೊಳಿ, ಮಲ್ಲಿಕಾ ಎಸ್. ಘಂಟಿ, ಚಿತ್ರಸಂಪುಟದ ಬಗ್ಗೆ ಮಾತು: ಅಮರೇಶ ಯತಗಲ್, ಆಯೋಜನೆ: ಕರ್ನಾಟಕ ವಿಕಾಸರಂಗ, ವೀರಲೋಕ ಪ್ರಕಾಶನ, ಸ್ಥಳ: ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 4

ಕೆ.ಜಿ. ನಾಗರಾಜಪ್ಪ ಅವರ ‘ಬಹುಮುಖಿ’ ಕೃತಿ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಉಮಾಶ್ರೀ, ಪುಸ್ತಕ ಪರಿಚಯ: ಡಿ.ಆರ್. ದೇವರಾಜ್, ಆಯೋಜನೆ: ಸಿರಿವರ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮಿಡೀಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5.30

ಊಂಜಲ್ ಸಂಗೀತೋತ್ಸವ: ಗಾಯನ: ಎಸ್. ಅಪರ್ಣ, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಸಾಯಿಕೃಷ್ಣ ಮುರಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

‘ಲೋಕದ ಒಳಹೊರಗೆ’ ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ್, ಆಯೋಜನೆ: ರಂಗಸಂಪದ, ಸ್ಥಳ: ರಂಗ ಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

‘ನಾಟ್ಯಶ್ರೀ’, ‘ಯೋಗಶ್ರೀ’ ಮತ್ತು ‘ಅಜಿತಶ್ರೀ’ ಪ್ರಶಸ್ತಿ ಪ್ರದಾನ: ಚಂದ್ರಶೇಖರ ಕಂಬಾರ, ಮುಖ್ಯ ಅತಿಥಿ: ಶ್ರೀಧರ ಸಾಗರ, ‘ಅಜಿತಶ್ರೀ’ ಪ್ರಶಸ್ತಿ ಪುರಸ್ಕೃತ: ಎಂ.ಎಸ್. ಸತ್ಯು, ‘ನಾಟ್ಯಶ್ರೀ’ ಪ್ರಶಸ್ತಿ ಪುರಸ್ಕೃತರು: ಜ್ಯೋತಿ ಪಟ್ಟಾಭಿರಾಮ, ಪರಮೇಶ್ವರ ಹೆಗಡೆ, ಬಿ.ಆರ್. ಮಂಜುನಾಥ್, ಮಂಜುನಾಥಯ್ಯ, ‘ಯೋಗಶ್ರೀ’ ಪ್ರಶಸ್ತಿ ಪುರಸ್ಕೃತರು: ರಜಿತ ಗುಪ್ತ, ಆಯೋಜನೆ: ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.45


ಎಂ.ಎಸ್‌.ಸತ್ಯು

ಕನ್ನಡ ಪುಸ್ತಕ ಹಬ್ಬದ ಪ್ರಯುಕ್ತ ವಿಶೇಷ ಉಪನ್ಯಾಸ: ‘ಕನ್ನಡ ರಂಗಭೂಮಿ ಮತ್ತು ರಾಷ್ಟ್ರೀಯತೆ’, ಉಪನ್ಯಾಸಕ: ಅಡ್ಡಂಡ ಕಾರ್ಯಪ್ಪ, ಬೆಳಿಗ್ಗೆ 11ಕ್ಕೆ, ‘ಭಾರತೀಯತೆಯ ಸತ್ತ್ವ’, ಉಪನ್ಯಾಸಕ: ಅಜಕ್ಕಳ ಗಿರೀಶ್ ಭಟ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಸಂಜೆ 5

ವಿ.ರಾಣಿ ಗೋವಿಂದರಾಜು ದತ್ತಿ ಉಪನ್ಯಾಸ: ವಿಷಯ: ‘ಕನ್ನಡದ ಹೆಮ್ಮೆಯ ಹೋರಾಟಗಾರ–ಜಗದೀಶರೆಡ್ಡಿ’, ಉಪನ್ಯಾಸಕ: ಮಧು ಬಿಲ್ಲನಕೋಟೆ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಮಯೂರ ಓದಿರಿ

ಡೆನ್-ಟಾನಿಕ್®
ಹಲ್ಲುಗಳು ಸುಲಭವಾಗಿ ಬರಲು ಸೂಕ್ತ
ಹೋಮಿಯೋಪತಿ ಮಾತ್ರೆಗಳು
ನಕಲಿಯನ್ನು ತೆಗೆದುಕೊಳ್ಳಬೇಡಿ, ನಿಜವನ್ನು ಮಾತ್ರ ಆರಿಸಿ
ಎ-ಪಿಲ್ಸ್®
ಅರಿವಿಲ್ಲದೆ ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವ ಮಕ್ಕಳಿಗೆ ಉಪಯುಕ್ತ
ಹೋಮಿಯೋಪತಿ ಮಾತ್ರೆಗಳು
Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Deepak Pharma Agency, Mysore : 988672264
For Product information contact : Bhargavi Bhatt : 6363477044

ಸಪ್ನ® 1967ರಿಂದ ಭಾರತದ ಅತಿದೊಡ್ಡ ಪುಸ್ತಕ ಭಂಡಾರ
‘ಓದಿನ ಅರಮನೆ ತೆರೆದಿದೆ ಓದುಗ ಒಳಗೆ ಬಂದೊಮ್ಮೆ ನೋಡು, ಕನ್ನಡವಿಲ್ಲಿ ಕನ್ನಡಿಸುತ್ತಿರುವುದ ನೋಡಿ ನೀನು ಹಾಡು’
55 YEARS OF EXCELLENCE
ಕನ್ನಡ ರಾಜ್ಯೋತ್ಸವದ ಪ್ರಯುಕ್ತ
ಕನ್ನಡ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ
01.11.2023 ರಿಂದ 30.11.2023 ರವರೆಗೆ
ಕನ್ನಡ ಪುಸ್ತಕಗಳಿಗೆ ಶೇ.10% ರಿಂದ ಶೇ. 25% ರಿಯಾಯಿತಿ
ರೂ.300/- ರ ಮೇಲ್ಪಟ್ಟ ಕನ್ನಡ ಪುಸ್ತಕಗಳ ನಿವ್ವಳ ಖರೀದಿಗೆ ಸದಸ್ಯತ್ವ ಕಾರ್ಡು ವರ್ಷಪೂರ್ತಿ ಶೇ. 10% ರಿಯಾಯಿತಿ
ಸಪ್ನ ಬುಕ್ ಹೌಸ್® ಭಾರತದ ಅತಿದೊಡ್ಡ ಪುಸ್ತಕ ಭಂಡಾರ
R.O: 3ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು. -560 009. ದೂ : (080)40114455
* T & C apply
ನಮ್ಮ ಶಾಖೆಗಳು
ಗಾಂಧಿನಗರ ದೂ: 4011 4455 | ಸದಾಶಿವನಗರ ದೂ: 4657 8999 | ಜಯನಗರ ದೂ: 4906 6700 | ಇಂದಿರಾನಗರ ದೂ: 4045 5999 | ಕೋರಮಂಗಲ ದೂ: 4083 9999
ಆರ್ ಆರ್. ನಗರ ದೂ: 2449 9999 | ರಾಯಲ್ ಮೀನಾಕ್ಷಿ ಮಾಲ್ (ಬನ್ನೇರುಘಟ್ಟ ರಸ್ತೆ) ದೂ: 4256 6299 | ಎಲಿಮೆಂಟ್ಸ್ ಮಾಲ್ (ನಾಗವಾರ ಜಂಕ್ಷನ್) ದೂ: 91488 72111 | ದಿ ಗ್ಯಾಲೇರಿಯಾ ಮಾಲ್ (ಯಲಹಂಕ) ದೂ: 96060 14561 / 62 | ಎಚ್.ಎಸ್.ಆರ್.ಲೇಔಟ್ 7 ನೇ ಸೆಕ್ಟರ್ ದೂ: 2228 9999
ಹಾಗೂ: ಮೈಸೂರು | ಮಂಗಳೂರು | ಹುಬ್ಬಳ್ಳಿ | ಧಾರವಾಡ | ಕಲಬುರಗಿ | ಬೆಳಗಾವಿ | ಕೊಯಮತ್ತೂರು (2 ಶಾಖೆಗಳು) | ಈರೋಡು
email: customercare@sapnaretail.com • Shop online: www.sapnaonline.com

FASHION FACTORY
BRANDS FOR LESS
Reliance Growth is Life
NOW OPEN
BEST BRANDS
UPTO 70% OFF
DEALS 365 DAYS

BUY 2 GET 3 FREE TILL 19TH NOV
5% INSTANT DISCOUNT SBI card
*Min. Trxn.: ₹4,000; Max. Discount: ₹500 per card. Validity: 13 Oct - 12 Nov 2023. T&C Apply.
NOW VISIT US BENGALURU: BANNERGHATTA ROAD | BANSHANKARI | ELECTRONIC CITY | HOSUR ROAD | HSR LAYOUT | KANAKPURA ROAD | MALLESHWARAM | ROCKLINE MALL | RR NAGAR SARJAPURA ROAD | WHITE FIELD
Scan for store location
STORE MANAGER: 8104917753 / 9741523418
@rel_fashionfactory @FashionF_IND @rel.fashionfactory

‘ಸಿನಿಮಾ ಪೈರಸಿ ತಡೆಗೆ ನೋಡಲ್ ಅಧಿಕಾರಿ ನೇಮಕ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಚಲನಚಿತ್ರಗಳ ಪೈರಸಿ ತಡೆಗೆ ಪೈರಸಿಯಾದ ಸಿನಿಮಾಗಳನ್ನು ಡಿಜಿಟಲ್ ವೇದಿಕೆಗಳಿಂದ ತೆಗೆದು ಹಾಕಲು ನಿರ್ದೇಶಿಸುವ ಅಧಿಕಾರ ಹೊಂದಿರುವ 12 ನೋಡಲ್ ಅಧಿಕಾರಿಗಳನ್ನು ಕೇಂದ್ರ ಸರ್ಕಾರ ಶುಕ್ರವಾರ ನೇಮಕ ಮಾಡಿದೆ.

ಪೈರಸಿ ಹಾವಳಿಯಿಂದ ಪ್ರತಿ ವರ್ಷ ಸುಮಾರು ₹20 ಸಾವಿರ ಕೋಟಿ ನಷ್ಟ ಹೊಂದುತ್ತಿರುವ ಚಿತ್ರೋದ್ಯಮವನ್ನು ಈ ಸಮಸ್ಯೆಯಿಂದ ಪಾರು ಮಾಡಲು ಹೊಸ ಸಾಂಸ್ಥಿಕ ಕಾರ್ಯವಿಧಾನವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಸಂಸತ್ತಿನಲ್ಲಿ ಇತ್ತೀಚೆಗೆ ಅಂಗೀಕರಿಸಲಾದ ಸಿನಿಮಾಟೋಗ್ರಾಫ್ (ತಿದ್ದುಪಡಿ) ಕಾಯ್ದೆ–2023ರ ಅಡಿ, ಸಾಂಸ್ಥಿಕ ಕಾರ್ಯವಿಧಾನದ ಭಾಗವಾಗಿ ನೇಮಕ ಮಾಡಿರುವ ನೋಡಲ್ ಅಧಿಕಾರಿಗಳು ಪೈರಸಿ ಸಂಬಂಧದ ದೂರುಗಳನ್ನು ಸ್ವೀಕರಿಸಲಿದ್ದಾರೆ ಮತ್ತು ಪೈರಸಿ ಸಿನಿಮಾಗಳ ಲಿಂಕ್ ತೆಗೆದುಹಾಕಲು ಡಿಜಿಟಲ್ ವೇದಿಕೆಗಳಿಗೆ ನಿರ್ದೇಶನ ನೀಡಲಿದ್ದಾರೆ. ನೋಡಲ್ ಅಧಿಕಾರಿಗಳು ದೂರುಗಳ ಪರಿಶೀಲನೆ ಮಾಡಿ, ನಿರ್ದೇಶನ ನೀಡಿದ 48 ಗಂಟೆಯೊಳಗಾಗಿ, ಪೈರಸಿ ಸಿನಿಮಾ ಅಥವಾ ವಿಷಯಗಳನ್ನು ಹೊಂದಿರುವ ಇಂಟರ್‌ನೆಟ್ ಲಿಂಕ್‌ಗಳನ್ನು ತೆಗೆದು ಹಾಕಬೇಕಿದೆ.

ಅಕ್ರಮವಾಗಿ ಇಂಟರ್‌ನೆಟ್‌ನಲ್ಲಿ ಸೇರಿಸಲಾದ ಸಿನಿಮಾದ ಹಕ್ಕುಸ್ವಾಮ್ಯ ಹೊಂದಿರುವವರು ಅಥವಾ ನೋಡಲ್ ಅಧಿಕಾರಿಗಳಿಗೆ ದೂರು ಸಲ್ಲಿಸಬಹುದು.

ಮಹದೇವ್ ಆ್ಯಪ್ ಪ್ರವರ್ತಕರು ಪಾವತಿಸಿರುವ ಕುರಿತು ಆರಂಭಿಕ ಸಾಕ್ಷ್ಯ ಲಭ್ಯ– ಇ.ಡಿ

‘ಛತ್ತೀಸಗಢ ಸಿ.ಎಂಗೆ ₹508 ಕೋಟಿ’



ಭೂಪೇಶ್ ಬಘೇಲ್

ನವದೆಹಲಿ (ಪಿಟಿಐ): ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರಿಗೆ ಮಹದೇವ್ ಬೆಟ್ಟಿಂಗ್ ಆ್ಯಪ್‌ನ ಪ್ರವರ್ತಕರು ₹ 508 ಕೋಟಿ ನೀಡಿರುವ ಕುರಿತು ಆರಂಭಿಕ ಸಾಕ್ಷ್ಯಗಳು ಲಭ್ಯವಾಗಿವೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

‘ಕ್ಯಾಶ್ ಕೊರಿಯರ್’ನ ಹೇಳಿಕೆ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ವಿಶ್ಲೇಷಣೆಗಳು ಈ ಆರೋಪಗಳಿಗೆ ಪೂರಕವಾಗಿವೆ. ಆದರೆ, ಉಲ್ಲೇಖಿತ ಆರೋಪ ಕುರಿತು ವಿಸ್ತೃತ ತನಿಖೆ ಅಗತ್ಯವಾಗಿದೆ’ ಎಂದು ಇ.ಡಿ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಏಜೆಂಟ್ ಎನ್ನಲಾದ ಅಸಿಂ ದಾಸ್ ಎಂಬಾತನನ್ನು ಇ.ಡಿ ಅಧಿಕಾರಿಗಳು ರಾಯಪುರದಲ್ಲಿ ಬಂಧಿಸಿ, ಆತನಿಂದ ₹ 5.39 ಕೋಟಿ ವಶಪಡಿಸಿಕೊಂಡಿದ್ದರು. ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಚುನಾವಣಾ ವೆಚ್ಚಕ್ಕಾಗಿ ಅಗತ್ಯಹಣವನ್ನು ಹಸ್ತಾಂತರಿಸಲು ಆ್ಯಪ್‌ನ ಪ್ರವರ್ತಕರೇ ಯುಎಇಯಿಂದ ದಾಸ್‌ನನ್ನು ಕಳುಹಿಸಿದ್ದರು ಎಂದು ಆರೋಪಿಸಲಾಗಿದೆ.

ಜಪ್ತಿ ಮಾಡಲಾದ ಮೊತ್ತವನ್ನು ಮಹದೇವ್ ಆ್ಯಪ್‌ನ ಪ್ರವರ್ತಕರೇ ವ್ಯವಸ್ಥೆ ಮಾಡಿದ್ದರು. ಇದನ್ನು ‘ಬಘೇಲ್’ ಎಂಬ ರಾಜಕಾರಣಿಗೆ ಮುಂದಿನ ಚುನಾವಣೆ ವೆಚ್ಚಕ್ಕಾಗಿ ತಲುಪಿಸಬೇಕಾಗಿತ್ತು ಎಂದು ಅಸಿಂ ದಾಸ್ ಒಪ್ಪಿಕೊಂಡಿದ್ದಾನೆ ಎಂದು ಇ.ಡಿ ಹೇಳಿಕೆ ತಿಳಿಸಿದೆ.

‘ವಿಚಾರಣೆಯಲ್ಲಿ ದಾಸ್ ನೀಡಿದ ಮಾಹಿತಿ ಹಾಗೂ ಆತನಿಂದ ವಶಪಡಿಸಿಕೊಂಡಿರುವ ಫೋನ್‌ನ ಪ್ರಯೋಗಾಲಯ ವರದಿ, ಮಹದೇವ್ ನೆಟ್‌ವರ್ಕ್‌ನ ಆರೋಪಿ ಶುಭಂ ಸೋನಿ ಕಳುಹಿಸಿದ್ದ ಇ–ಮೇಲ್‌ನ ವಿಶ್ಲೇಷಣೆಗಳು ಆರೋಪವನ್ನು ಪುಷ್ಟೀಕರಿಸುತ್ತಿದೆ. ಆ ಪ್ರಕಾರ, ಮಹದೇವ್ ಆ್ಯಪ್‌ನ ಪ್ರವರ್ತಕರು ನಿಯಮಿತವಾಗಿ, ಛತ್ತೀಸಗಢದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರಿಗೆ ಹಣವನ್ನು ಪಾವತಿಸಿದ್ದು, ಹೀಗೇ ಪಾವತಿಸಿರುವ ಒಟ್ಟು ಮೊತ್ತವೇ ಸುಮಾರು ₹ 508 ಕೋಟಿ ಆಗಿದೆ’ ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

‘ಈ ಎಲ್ಲದರ ಬಗ್ಗೆ ಇನ್ನಷ್ಟು ತನಿಖೆ ಆಗಬೇಕಾಗಿದೆ’ ಎಂದು ತನಿಖಾ ಸಂಸ್ಥೆಯು ಸ್ಪಷ್ಟಪಡಿಸಿದೆ.

ಮಹದೇವ್ ಆ್ಯಪ್ ಮೂಲಕ ಅಕ್ರಮವಾಗಿ ಸಂಗ್ರಹಿಸಿದ್ದ ಹಣವನ್ನು ರಾಜಕಾರಣಿಗಳು, ಅಧಿಕಾರಿಗಳಿಗೆ ಲಂಚವಾಗಿ ನೀಡಲಾಗಿದೆ ಎಂದು ಇ.ಡಿ ಹಿಂದೆ ಹೇಳಿತ್ತು. ಅಲ್ಲದೆ, ಈ ಬಗ್ಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಹಲವು ಪ್ರಮುಖರು, ಬಾಲಿವುಡ್ ನಟರಿಗೆ ಸಮನ್ಸ್ ಜಾರಿ ಮಾಡಿತ್ತು.

ದೊಡ್ಡ ಪ್ರಮಾಣದ ನಗದನ್ನು ಛತ್ತೀಸಗಢ ಮುಖ್ಯಮಂತ್ರಿಯವರಿಗೆ ಪ್ರವರ್ತಕರು ನೀಡಿದ್ದಾರೆ ಎಂಬ ಗುಪ್ತದಳದ ಮಾಹಿತಿಯನ್ನು ಆಧರಿಸಿ ಗುರುವಾರ, ಬಂಧಿತ ದಾಸ್‌ನ ವಿಚಾರಣೆ ನಡೆಸಲಾಗಿತ್ತು. ಹಣವನ್ನು ಛತ್ತೀಸಗಢದ ದುರ್ಗ್ ಜಿಲ್ಲೆ ಭಿಲಾಯಿಯಲ್ಲಿರುವ ಹೋಟೆಲ್ ಟ್ರೈಟನ್ ಬಳಿ ನಿಲ್ಲಿಸಲಾಗಿದ್ದ ಎಸ್‌ಯುವಿ ವಾಹನದಿಂದ ಜಪ್ತಿ ಮಾಡಲಾಗಿತ್ತು ಎಂದು ಇ.ಡಿ ಮಾಹಿತಿ ನೀಡಿದೆ.

‘ಬಿಜೆಪಿಯ ಚುನಾವಣಾ ನಾಟಕ’

ನವದೆಹಲಿ (ಪಿಟಿಐ): ‘ಇದು, ಬಿಜೆಪಿಯ ಹತಾಶೆಯ ಪ್ರತೀಕ. ಚುನಾವಣಾ ನಾಟಕ’ ಎಂದು ಕಾಂಗ್ರೆಸ್ ಪಕ್ಷ ಪ್ರತಿಕ್ರಿಯಿಸಿದೆ. ‘ಛತ್ತೀಸಗಢದಲ್ಲಿ ಸೋಲು ಖಚಿತವಾದಂತೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಕಡೆಯ ಅಸ್ತ್ರ ಇ.ಡಿ ಪ್ರಯೋಗಿಸಿದ್ದಾರೆ’ ಎಂದಿದೆ.

‘ಮುಖ್ಯಮಂತ್ರಿ ಬಘೇಲ್ ಅವರಿಗೆ ₹ 508 ಕೋಟಿ ಪಾವತಿಯಾಗಿದೆ’ ಎಂಬ ಇ.ಡಿ ಹೇಳಿಕೆಯ ಬೆನ್ನಲ್ಲೇ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ.

‘ಕಾಂಗ್ರೆಸ್ ಪಕ್ಷದ ನಾಯಕರ ವರ್ಚಸ್ಸಿಗೆ ಧಕ್ಕೆ ತರುವುದು ಇದರ ಉದ್ದೇಶ. ಆದರೆ, ಛತ್ತೀಸಗಢ ಮತ್ತು ರಾಜಸ್ಥಾನದಲ್ಲಿ ಜನರೇ ಕಾಂಗ್ರೆಸ್ ಪಕ್ಷಕ್ಕೆ ರಕ್ಷಾ ಕವಚವಾಗಿದ್ದಾರೆ’ ಎಂದಿದ್ದಾರೆ.

ಬೇಷರತ್ ಕ್ಷಮೆ: ಛಡ್ಡಾಗೆ ಸೂಚನೆ

ನವದೆಹಲಿ (ಪಿಟಿಐ): ಸ್ಥಾಯಿ ಸಮಿತಿಯ ವಿಚಾರಕ್ಕೆ ಸಂಬಂಧಿಸಿದಂತೆ, ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರಲ್ಲಿ ಬೇಷರತ್ ಕ್ಷಮೆ ಯಾಚಿಸುವಂತೆ ಎಎಪಿಯ ಅಮಾನತುಗೊಂಡಿರುವ ರಾಜ್ಯಸಭಾ ಸದಸ್ಯ ರಾಘವ್ ಛಡ್ಡಾ ಅವರಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಧನಕರ್ ಅವರು ‘ಅನುಕಂಪದ’ ನೆಲೆಯಲ್ಲಿ ಇಡೀ ವಿಚಾರವನ್ನು ಪರಿಶೀಲಿಸಬಹುದು ಎಂದು ಕೋರ್ಟ್ ಆಶಿಸಿದೆ.

ಈ ಪ್ರಕರಣದಲ್ಲಿನ ಬೆಳವಣಿಗೆಗಳ ಬಗ್ಗೆ ದೀಪಾವಳಿ ರಜೆಯ ನಂತರ ಮಾಹಿತಿ ನೀಡಬೇಕು ಎಂದು ಸುಪ್ರೀಂ ಕೋರ್ಟ್, ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂಚಿಸಿದೆ. ಛಡ್ಡಾ ಅವರು ಧನಕರ್ ಅವರನ್ನು ಖುದ್ದಾಗಿ ಭೇಟಿ ಮಾಡಬೇಕು, ಕ್ಷಮೆ ಯಾಚಿಸಬೇಕು. ಧನಕರ್ ಇಡೀ ವಿಚಾರವನ್ನು ಅನುಕಂಪದಿಂದ ಪರಿಗಣಿಸಿ, ಮುಂದಡಿ ಇರಿಸಬಹುದು ಎಂದು ಕೋರ್ಟ್ ಹೇಳಿದೆ.

ಛಡ್ಡಾ ಅವರು ತಮ್ಮ ಒಪ್ಪಿಗೆ ಇಲ್ಲದೆಯೇ ನಿಲುವಳಿ ಸೂಚನೆಯೊಂದಕ್ಕೆ ತಮ್ಮ ಹೆಸರು ಸೇರಿಸಿದ್ದಾರೆ ಎಂದು ಕೆಲವು ಸಂಸದರು ದೂರಿದ್ದರು. ಇದಾದ ನಂತರ ಛಡ್ಡಾ ಅವರನ್ನು ಅಮಾನತು ಮಾಡಲಾಗಿದೆ.

ವೈಕುಂಠ ಸಮಾರಾಧನೆ

ಅಸತೋಮ ಸದ್ಗಮಯ ! ತಮಸೋಮ ಜ್ಯೋತಿರ್ಗಮಯ !
ಮೃತ್ಯೋರ್ಮ ಅಮೃತಂಗಮಯ !
ಓಂ ಶಾಂತಿಃ ! ಓಂ ಶಾಂತಿಃ ! ಓಂ ಶಾಂತಿಃ !

ನನ್ನ ಪತಿಯವರಾದ

ಶ್ರೀ ದೊಡ್ಡಬಳ್ಳಾಪುರ ನಾರಾಯಣರಾವ್ ಗೋಪಾಲಕೃಷ್ಣ

ರವರು ದಿ.22.10.2023 ರಂದು ದೈವಾಧೀನರಾಧರೆಂದು ತಿಳಿಸಲು ವಿಷಾದಿಸುತ್ತೇನೆ.

ದುಃಖತಪ್ತರು:
ಧರ್ಮಪತ್ನಿ ಶ್ರೀಮತಿ ರತ್ನ ಗೋಪಾಲಕೃಷ್ಣ,
ಪುತ್ರ, ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕಳು,
ಹಾಗೂ ಅಪಾರ ಬಂಧು ಮಿತ್ರರು, ಲಕ್ಷ್ಮಿ ನಾರಾಯಣ ಗ್ರೂಪ್ ಸದಸ್ಯರು.

ನಿಮ್ಮ ಪುಣ್ಯ ಆತ್ಮವು ಶ್ರೀ ಲಕ್ಷ್ಮಿನರಸಿಂಹ ಸ್ವಾಮಿಯ ಪಾದ ಕಮಲಗಳಲ್ಲಿ ಸದ್ಗತಿಹೊಂದಲಿ ಎಂದು ಪ್ರಾರ್ಥಿಸುತ್ತೇವೆ

05-02-1934 - 22-10-2023
ವೈಕುಂಠ ಸಮಾರಾಧನೆ 4.11.2023

ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನ, ವಿದ್ಯಾಪೀಠ
ಲಕ್ಷ್ಮಿನಾರಾಯಣ ಗ್ರೂಪ್ ಆಫ್ ಕಂಪನೀಸ್, ಬೆಂಗಳೂರು
ಸುಚಿತ್ರಾ ಮತ್ತು ಪ್ರಭಾತ್ ಚಿತ್ರಮಂದಿರಗಳು, ಮಂಗಳೂರು
ಪಿ.ಎನ್.ಜಿ ಸೋಲಾರ್, ಸಿಗ್ರಾಪುರ, ತೆಲಂಗಾಣ

ಸಭ್ಯತೆ ಇದ್ದರೆ ತನಿಖೆಗೆ ಸಿದ್ಧ: ಮಹುವಾ

ಮಹುವಾ ಮೊಯಿತ್ರಾ

ಕೋಲ್ಕತ್ತ (ಪಿಟಿಐ): ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಹಣ ಪಡೆದಿದ್ದರು ಎಂದು ತಮ್ಮ ವಿರುದ್ಧ ಬಂದಿರುವ ಆರೋಪದ ಕುರಿತ ವಿಚಾರಣೆಗೆ ಸಹಕರಿಸಲು ಸಿದ್ಧರಿರುವುದಾಗಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಶುಕ್ರವಾರ ಹೇಳಿದ್ದಾರೆ. ಆದರೆ, ಸಭ್ಯತೆಯನ್ನು ಕಾಯ್ದುಕೊಳ್ಳುವ ಅಗತ್ಯವಿದೆ ಎಂದೂ ಹೇಳಿದ್ದಾರೆ.

ಲೋಕಸಭೆಯ ನೀತಿ ಸಮಿತಿಯ ಸಭೆಯಲ್ಲಿ ತಮ್ಮನ್ನು ಗುರಿಯಾಗಿಸಿಕೊಂಡು ಅಪಮಾನಕರ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಲಾಗಿತ್ತು ಎಂದು ಮಹುವಾ ಅವರು ಗುರುವಾರ ಆರೋಪಿಸಿದ್ದರು.

ನೀತಿ ಸಮಿತಿಯ ವಿಚಾರಣೆಯು ಒಂದು ರಾಜಕೀಯ ದಾಳಿ, ಇದರ ಏಕೈಕ ಉದ್ದೇಶ ತಮ್ಮನ್ನು ಸಂಸತ್ತಿನಿಂದ ಅಮಾನತು ಮಾಡುವುದು ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಮಹುವಾ ದೂರಿದ್ದಾರೆ. 'ನಾನು ವಿಚಾರಣೆಗೆ ಯಾವಾಗಲೂ ಸಿದ್ಧ. ಆದರೆ ಕೀಳು ಹಾಗೂ ನಿಂದನೀಯ ಪ್ರಶ್ನೆಗಳಿಂದ ರಕ್ಷಣೆ ಬೇಕು. ಈ ವಿಚಾರವಾಗಿ ಲೋಕಸಭಾ ಸ್ಪೀಕರ್‌ಗೆ ಪತ್ರ ಬರೆದಿದ್ದೇನೆ' ಎಂದಿದ್ದಾರೆ.

'ಸ್ತ್ರೀಯರನ್ನು ಕಂಡರೆ ಆಗದ ಕೊಳಕು ಮನಃಸ್ಥಿತಿಯಿಂದ ರಕ್ಷಣೆ ಒದಗಿಸಬೇಕು ಎಂದು ನಾನು ಕೋರಿದ್ದೇನೆ' ಎಂದು ತಿಳಿಸಿದ್ದಾರೆ. ತಾವು ಯಾವುದೇ ಕಾನೂನು ಬಾಹಿರ ಕೃತ್ಯ ಎಸಗಿಲ್ಲ ಎಂದು ಹೇಳಿದ್ದಾರೆ.

ಮಹುವಾ ಅವರು ಉದ್ಯಮಿ ದರ್ಶನ್ ಹೀರಾನಂದಾನಿ ಅವರ ಆಣತಿಯಂತೆ ತಮ್ಮ ಸಂಸತ್ ಖಾತೆಯ ಮೂಲಕ ಪ್ರಶ್ನೆಗಳನ್ನು ಕೇಳಿದ್ದಾರೆ, ತಮ್ಮ ಖಾತೆಯ ಲಾಗಿನ್ ವಿವರಗಳನ್ನು ಹೀರಾನಂದಾನಿ ಜೊತೆ ಹಂಚಿಕೊಂಡಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿದ್ದಾರೆ.

> ಬಿಜೆಪಿಗೆ ಅದರ ಸಂಸದರಿಗೆ ನಿರ್ದಿಷ್ಟ ಉದ್ಯಮ ಸಮೂಹ ಹಣ ಕೊಡಬಹುದು. ನನ್ನ ಹಳೆಯ ಸ್ನೇಹಿತನೊಬ್ಬ ನನ್ನ ಹುಟ್ಟುಹಬ್ಬಕ್ಕೆ ಉಡುಗೊರೆ ಕೊಡಬಾರದೇ?
> **ಮಹುವಾ ಮೊಯಿತ್ರಾ,** ಟಿಎಂಸಿ ಸಂಸದೆ

ನೀತಿ ಸಮಿತಿಯ ಸಭೆಯಲ್ಲಿ ಮಹುವಾ ಮತ್ತು ವಿರೋಧ ಪಕ್ಷಗಳ ಕೆಲವು ಸದಸ್ಯರು ಆಕ್ಷೇಪಾರ್ಹ ಪದಗಳನ್ನು ಬಳಸಿದ್ದರು ಎಂದು ಸಮಿತಿಯ ಅಧ್ಯಕ್ಷ ಬಿಜೆಪಿ ಸಂಸದ ವಿನೋದ್ ಕುಮಾರ್ ಸೋನಕರ್ ಅವರು ಆರೋಪಿಸಿದ್ದಾರೆ.

'ನಾನು ಪ್ರತಿನಿಧಿಸುವ ಕ್ಷೇತ್ರವು ಒಂದು ಮೂಲೆಯಂತಹ ಪ್ರದೇಶ. ಸಂಸದರ ಲಾಗಿನ್ ವಿವರಗಳನ್ನು ಕನಿಷ್ಠ ಹತ್ತು ಮಂದಿ ಬಳಸುತ್ತಾರೆ. ನನ್ನ ದೂರವಾಣಿಗೆ ಬರುವ ಒಟಿಪಿ ಇಲ್ಲದೆ ಏನೂ ಮಾಡಲು ಸಾಧ್ಯವಿಲ್ಲ' ಎಂದು ತಮ್ಮ ಲಾಗಿನ್ ವಿವರಗಳನ್ನು ಇನ್ನೊಬ್ಬರಿಗೆ ನೀಡಲಾಗಿತ್ತು ಎಂಬ ಆರೋಪದ ಬಗ್ಗೆ ಮಹುವಾ ಉತ್ತರಿಸಿದ್ದಾರೆ.

ಹೀರಾನಂದಾನಿ ಅವರಿಂದ ಕಾನೂನುಬಾಹಿರವಾಗಿ ನೆರವು ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಮಹುವಾ, 'ಹೀರಾನಂದಾನಿ ನನ್ನ ಬಹುಕಾಲದ ಸ್ನೇಹಿತ' ಎಂದಿದ್ದಾರೆ. 'ನಾನು ಸಂಸದೆ ಆಗುವುದಕ್ಕಿಂತ ಮೊದಲಿನಿಂದಲೂ ಅವರು ನನ್ನ ಸ್ನೇಹಿತ. ನನ್ನ ಸ್ನೇಹಿತ ನನಗೆ ಹುಟ್ಟುಹಬ್ಬಕ್ಕೆ ಅಲಂಕಾರಿಕ ವಸ್ತ್ರವೊಂದನ್ನು ಉಡುಗೊರೆಯಾಗಿ ನೀಡಿದರೆ ಅದೇನು ಅಪರಾಧವೇ' ಎಂದು ಪ್ರಶ್ನಿಸಿದ್ದಾರೆ.

'ಹೀರಾನಂದಾನಿ ಅವರನ್ನು ನೀತಿ ಸಮಿತಿಯು ಏಕೆ ವಿಚಾರಣೆಗೆ ಕರೆಸುತ್ತಿಲ್ಲ? ಅವರನ್ನು ಪಾಟೀಸವಾಲಿಗೆ ಗುರಿಪಡಿಸಲು ನನಗೆ ಅವಕಾಶ ಏಕೆ ಕೊಡುತ್ತಿಲ್ಲ' ಎಂದು ಕೂಡ ಪ್ರಶ್ನಿಸಿದ್ದಾರೆ.

ನಾಳೆಯಿಂದ ಆರ್‌ಎಸ್‌ಎಸ್ ಸಭೆ

ನವದೆಹಲಿ: ಗುಜರಾತ್‌ನ ಬುಜ್‌ನಲ್ಲಿ ನವೆಂಬರ್ 5ರಿಂದ 7ರವರೆಗೆ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ವಾರ್ಷಿಕ ಸಭೆ ನಡೆಯಲಿದೆ.

ಸುದ್ದಿಗಾರರ ಜತೆ ಮಾತನಾಡಿದ ಸಂಘಟನೆಯ ಮಾಧ್ಯಮ ವಕ್ತಾರ ಸುನಿಲ್ ಅಂಬೇಕರ್, ಅಯೋಧ್ಯೆಯಲ್ಲಿ ಜನವರಿ 22ರಂದು ರಾಮ ಮಂದಿರದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಸಂಘದ ಭಾಗವಹಿಸುವಿಕೆ, 2025ರಲ್ಲಿ ನಡೆಯಲಿರುವ ಆರ್‌ಎಸ್‌ಎಸ್‌ನ ಶತಮಾನೋತ್ಸವ ಸೇರಿದಂತೆ ಹಲವು ವಿಷಯಗಳು ಚರ್ಚೆಯ ಕಾರ್ಯಸೂಚಿಯಲ್ಲಿವೆ ಎಂದರು.

ಸಂಕ್ಷಿಪ್ತ ಸುದ್ದಿ

ಸಚಿವ ವೇಲು ಮನೆ ಮೇಲೆ ಐ.ಟಿ ದಾಳಿ

ಚೆನ್ನೈ (ಪಿಟಿಐ): ತಮಿಳುನಾಡಿನ ಸಚಿವ ಇ.ವಿ. ವೇಲು ಅವರಿಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದ್ದಾರೆ.

ಕೇಂದ್ರೀಯ ತನಿಖಾ ಸಂಸ್ಥೆಯ ದಾಳಿಗೆ ಗುರಿಯಾದ ಡಿಎಂಕೆ ಸರ್ಕಾರದ ಸಂಪುಟ ದರ್ಜೆಯ ಸಚಿವರಲ್ಲಿ ವೇಲು ಮೂರನೆಯವರು. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸಂಪುಟದಲ್ಲಿ ವೇಲು ಅವರು ಲೋಕೋಪಯೋಗಿ ಖಾತೆ ಸಚಿವರಾಗಿದ್ದಾರೆ.

ಚೆನ್ನೈ, ಕೊಯಮತ್ತೂರು, ತಿರುವಣ್ಣಾಮಲೈ ಮತ್ತು ಕರೂರ್ ಸೇರಿ ರಾಜ್ಯದ ವಿವಿಧ ಭಾಗಗಳಲ್ಲಿ ಸಚಿವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಐ.ಟಿ ಶೋಧ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'97 ಸಾವಿರ ಭಾರತೀಯರ ಸೆರೆ

ವಾಷಿಂಗ್ಟನ್ (ಪಿಟಿಐ): ಕಳೆದ ವರ್ಷದ ಅಕ್ಟೋಬರ್‌ನಿಂದ ಈ ವರ್ಷದ ಸೆಪ್ಟೆಂಬರ್‌ವರೆಗೆ ಅಕ್ರಮವಾಗಿ ಗಡಿಯ ಒಳಗೆ ನುಸುಳಲು ಯತ್ನಿಸಿದ್ದ 96,917 ಭಾರತೀಯರನ್ನು ಬಂಧಿಸಲಾಗಿದೆ ಎಂದು ಅಮೆರಿಕದ ಕಸ್ಟಮ್ಸ್ ಮತ್ತು ಗಡಿ ರಕ್ಷಣೆ (ಯುಸಿಬಿಪಿ) ವಿಭಾಗದ ಅಂಕಿಅಂಶಗಳು ತಿಳಿಸಿವೆ.

ಈ ಪೈಕಿ 30,010 ಜನರು ಕೆನಡಾ ಗಡಿಯಲ್ಲಿ ಮತ್ತು 41,770 ಮಂದಿ ಮೆಕ್ಸಿಕೊ ಗಡಿಯಲ್ಲಿ ಸೆರೆಸಿಕ್ಕಿದ್ದರು. 2023ರಲ್ಲಿ ಸೆರೆಸಿಕ್ಕವರ ಪೈಕಿ 84,000 ಮಂದಿ ಯುವಜನರು ಮತ್ತು 730 ಮಂದಿ ಅಪ್ರಾಪ್ತ ವಯಸ್ಸಿನವರು ಎಂದೂ ತಿಳಿಸಿದೆ.

ದಲಿತ ಮಹಿಳೆ ಮೇಲೆ ಅತ್ಯಾಚಾರ, ಹತ್ಯೆ

ಬಂದಾ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಗ್ರಾಮವೊಂದರಲ್ಲಿ ದಲಿತ ಮಹಿಳೆಯ ಮೇಲೆ ಅತ್ಯಾಚಾರ ಎಸಗಿ ನಂತರ ಆಕೆಯನ್ನು ಹತ್ಯೆ ಮಾಡಲಾಗಿದೆ. ಬಳಿಕ ಆಕೆಯ ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

40 ವರ್ಷದ ಮಹಿಳೆಯು ರಾಜ್‌ಕುಮಾರ್ ಶುಕ್ಲಾ ಅವರ ಹಿಟ್ಟಿನ ಗಿರಣಿ ಸ್ವಚ್ಛ ಮಾಡಲು ಮಂಗಳವಾರ ಅವರ ಮನೆಗೆ ತೆರಳಿದ್ದರು. ಸ್ಥಳಕ್ಕೆ ಮಹಿಳೆಯ ಪುತ್ರಿ ಹೋದಾಗ, ಕೋಣೆಯ ಒಳಗಿಂದ ಮಹಿಳೆ ಚೀರಾಡುತ್ತಿರುವುದು ಕೇಳಿಸಿತ್ತು. ಸ್ವಲ್ಪ ಸಮಯದ ನಂತರ ಬಾಗಿಲು ತೆರೆದಾಗ ಆಕೆಯ ತಾಯಿಯ ದೇಹ ಮೂರು ತುಂಡುಗಳಾಗಿ ಬಿದ್ದಿತ್ತು. ನಂತರ ಆಕೆ ಪೊಲೀಸರಿಗೆ ಮಾಹಿತಿ ನೀಡಿದ್ದಳು ಎಂದು ಪೊಲೀಸ್ ಸಿಬ್ಬಂದಿಯೊಬ್ಬರು ತಿಳಿಸಿದರು.

ಈ ಬೆನ್ನಲ್ಲೇ ರಾಜ್‌ಕುಮಾರ್ ಶುಕ್ಲಾ, ಆತನ ಸಹೋದರರಾದ ಬವುವಾ ಶುಕ್ಲಾ ಮತ್ತು ರಾಮಕೃಷ್ಣ ಶುಕ್ಲಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಸದ್ಯ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದಿದ್ದಾರೆ.

ಈ ಮಧ್ಯೆ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಘಟನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064.
ವೆಬ್‌ಸೈಟ್: www.rwf.indianrailways.gov.in
ಟೆಂಡರು ಸೂಚನೆ ಸಂ.: ಆರ್‌ಡಬ್ಲ್ಯೂಎಫ್/ಎಸ್/ಪಿ1/013/2023–24 ದಿ. 02.11.2023
ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, ಆಸಕ್ತಿಯುಳ್ಳ ಮಾರಾಟಗಾರರಿಂದ ಈ ಕೆಳಗಿನ ಸಾಮಗ್ರಿಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಭಾರತೀಯ ರೈಲ್ವೇ ಇ–ಪೋರ್ಟಲ್ ಆದ www.ireps.gov.in ಮೂಲಕ ಆಹ್ವಾನಿಸಿದ್ದಾರೆ. ಟೆಂಡರು ದಸ್ತಾವೇಜುಗಳು ಮತ್ತು ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ, ಕೇವಲ ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಕ್ರ.ಸಂ.	ಟೆಂಡರು ಸಂ.	ಕೊನೆಯ ದಿನಾಂಕ	ಸಂಕ್ಷಿಪ್ತ ವಿವರಣೆ	ಪರಿಮಾಣ
1.	ಪಿ1232303	22.11.23	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಅನುಸಾರ 90 ಕೆವಿ ಹೆವಿ ಡ್ಯೂಟಿ ವಿವಿವಿಎಫ್ ಎಸಿ ಡ್ರೈವ್	8 ಸೆಟ್‌ಗಳು
2.	ಪಿ1232304	01.12.23	ಇನ್ಸರ್ಟ್‌ಗಳು ಎಲ್‌ಎನ್‌ಯುಎಕ್ಸ್ 38x22x40 ಪಿ–30 ರಿಂದ ಪಿ–40 (ಅಭಿವೃದ್ಧಿಶೀಲ ಟೆಂಡರು)	1000 ಸಂ.
3.	ಪಿ1232341	05.12.23	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಅನುಸಾರ ಗ್ರಾಫೈಟ್ ಗ್ರಾನ್ಯೂಲ್‌ಗಳು (ಅಭಿವೃದ್ಧಿಶೀಲ ಟೆಂಡರು)	22.5 ಮೆ.ಟ.
4.	ಪಿ1232342	01.12.23	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಅನುಸಾರ ಫೆರೋ ಮ್ಯಾಂಗನೀಸ್ (ಅಭಿವೃದ್ಧಿಶೀಲ ಟೆಂಡರು)	32000 ಕೆಜಿ.
5.	ಪಿ1232347	04.12.23	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಅನುಸಾರ ಗ್ರಾಫೈಟ್ ಎಲೆಕ್ಟ್ರೋಡ್‌ಗಳು (ಅಭಿವೃದ್ಧಿಶೀಲ ಟೆಂಡರು)	15 ಮೆ.ಟ.
6.	ಪಿ1231802ಎ	11.12.23	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಅನುಸಾರ ಗ್ರಾಫೈಟ್ ಗ್ರಾನ್ಯೂಲ್‌ಗಳು	558 ಮೆ.ಟ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ವಿ.ವಿ.ಲೆ.ಶಿ/ಟೆಂಡರು/2023–24/730
ದಿನಾಂಕ: 30–10–2023.
ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 14ನೇ ಹಣಕಾಸು ಯೋಜನೆ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ, ಕೆ.ಕೆ.ಆರ್.ಡಿ.ಬಿ, ಟಿ.ಎಸ್.ಪಿ ಆರಾಧನಾ ಯೋಜನೆ, ವಿವೇಕ ಯೋಜನೆ, ಡಿ.ಎಮ್.ಎಫ್.2021–22ನೇ ಸಾಲಿನ ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆ, 2015–16 & 2017–18 ಗ್ರಾಮ ವಿಕಾಸ ಯೋಜನೆ ಮತ್ತು ಧಾರ್ಮಿಕ ಧತ್ತಿ ಯೋಜನೆ ಒಟ್ಟು 22 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 08 ಹಾಗೂ ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 02** ಕಾಮಗಾರಿಯನ್ನು ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 30–10–2023 ರಿಂದ ದಿನಾಂಕ 13–11–2023** ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 30–10–2023** ರ 16.00 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ನ್ನು ಆನ್ ಲೈನ್‌ನಲ್ಲಿ **ದಿನಾಂಕ: 15–11–2023** ರಂದು 11.00 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/385/ಕೆಎಸ್‌ಎಂಸಿಎ/2023–24

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001,
ಫೋನ್: 080–22215601,22211246, ಫ್ಯಾಕ್ಸ್ : 080–22215602
ಸಂ: ಡಿವೈಇಎಸ್/ಎಸ್.ಎಂ.ಸಿ/182/2022–23 ದಿನಾಂಕ: 02.11.2023
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣ ಮತ್ತು ಇತರೆ ಕೇಂದ್ರಗಳಿಗೆ ಭದ್ರತೆ, ಸ್ವಚ್ಛತೆ ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುಲ ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ	ಇ.ಎಂ.ಡಿ. ಮೊತ್ತ
1	ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣ ಮತ್ತು ಇತರೆ ಕೇಂದ್ರಗಳಿಗೆ ಭದ್ರತೆ, ಸ್ವಚ್ಛತೆ ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಕುರಿತು.	ರೂ.892.00 ಲಕ್ಷಗಳು	ರೂ.13.38 ಲಕ್ಷಗಳು

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ 02.12.2023 ಸಮಯ 16.00 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 04.12.2023 ಸಮಯ 16.30 ಗಂಟೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/–
ಉಪ–ನಿರ್ದೇಶಕರು (ಆಡಳಿತ),
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/1966/ಆಕಾರ್/2023–24

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ, ಧಾರವಾಡ
Phone & Fax : 0836-2747944, Email.ID :eepwddha@gmail.com
ಸಂ.ಕ್ರಸಂ : ಕಾನಿಇಂ/ಲೋಇ/ಧಾ/ಪಿಬಿ–1/ಟೆಂಡರ/2023–24/3782
ದಿನಾಂಕ : 02/11/2023
ಟೆಂಡರ ಪ್ರಕಟಣೆ KW - 1, 2
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ–1, 2 ರ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ (e-Procurement) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಿಸಿದಂತೆ **ಲೆಕ್ಕ ಶೀರ್ಷಿಕೆ:– 2216 ವಸತಿ ಕಟ್ಟಡಗಳ ದುರಸ್ತಿ/ನಿರ್ವಹಣೆ** ಅಡಿಯ **ಕಾಮಗಾರಿಗಳು ಒಟ್ಟು= 08** ಕಾಮಗಾರಿಗಳು ಟೆಂಡರ್‌ಗಳ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.
ಲೆಕ್ಕ ಶೀರ್ಷಿಕೆ 2216 ವಸತಿ ಕಟ್ಟಡಗಳ ದುರಸ್ತಿ/ನಿರ್ವಹಣೆ :
1) PWD/2023-24/BD/WORK_INDENT3030 /Call-3, PWD/2023-24/BD/WORK_INDENT3035 /Call-3, PWD/2023-24/BD/WORK_INDENT3047/Call-3, PWD/2023-24/BD/WORK_INDENT3034/Call-2, PWD/2023-24/BD/WORK_INDENT3051/call-2, PWD/2023-24/BD/WORK_INDENT3045/Call-2, PWD/2023-24/BD/WORK_INDENT3000/call-2, PWD/2023-24/BD/WORK_INDENT3006 /Call-2: ಒಟ್ಟು = 08
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **13.11.2023** (ಬೆಳಿಗ್ಗೆ 12:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **15–11–2023** (ಸಾಯಂಕಾಲ 16:00 ಗಂಟೆಯವರೆಗೆ) (3) ತಾಂತ್ರಿಕ/ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **16.11.2023** (ಸಾಯಂಕಾಲ 16:30 ಗಂಟೆಯ ನಂತರ)
ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/443/2023–24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ)
ಬೆವಿಕಂ ಇಂಡೆಂಟ್ ಸಂಖ್ಯೆ: ಬೆವಿಕಂ/2023-24/ಎಸ್‌ಇ0046(ಬೆವಿಕಂ/ಬಿಸಿಪಿ-1467/2023-24) ರ ಅನ್ವಯ 29 ಸಂಖ್ಯೆಯ ಚಾಲಕರ ಸೇವೆಗಳನ್ನು [ಬೆವಿಕಂ ಕೇಂದ್ರೀಯ ಉಗ್ರಾಣ (21 ಸಂಖ್ಯೆ), ಪಶ್ಚಿಮ ವೃತ್ತ (2 ಸಂಖ್ಯೆ), ಪೂರ್ವ ವೃತ್ತ (5 ಸಂಖ್ಯೆ) ಮತ್ತು ಮುಖ್ಯ ಇಂಜಿನಿಯರ್ (ವಿ), ಬೆಂಗ್ರಾಕ್ಷೇವ (1 ಸಂಖ್ಯೆ)] ಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಪಡೆಯುವ ಬಗ್ಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಾಖಲೆಗಳು ದಿನಾಂಕ: **04.11.2023, 16.00 ಗಂಟೆಯಿಂದ ಲಭ್ಯವಿರುತ್ತದೆ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **18.11.2023, ಸಂಜೆ 4.00 ಗಂಟೆಯವರೆಗೆ.** ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: **20.11.2023 ಸಂಜೆ 4.15 ಗಂಟೆಗೆ.**
ಟೆಂಡರ್‌ನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಪಡೆಯಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ ಸಹಾಯವಾಣಿ ಸಂಖ್ಯೆ: +918046010000, +918068948777 ಅಥವಾ ಇ–ಮೇಲ್: support@eprochelpdesk.com
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ
ಸಹಿ/-
ಪ್ರಧಾನ ವ್ಯವಸ್ಥಾಪಕರು (ವಿ),
ಖರೀದಿ, ಬೆವಿಕಂ, ಕೆ.ಆರ್. ವೃತ್ತ,
ಬೆಂಗಳೂರು - 560 001.

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, 3ನೇ ಮಹಡಿ, ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ. ಕಟ್ಟಡ, ಯಶವಂತಪುರ, ಬೆಂಗಳೂರು–560022, **ದೂರವಾಣಿ ಸಂಖ್ಯೆ: 080–23570382.**
Email: jcctdgsto1.bng@ka.gov.in
ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ–01/ಎಸ್‌ಟಿಎನ್/ಸಿಆರ್–11/23–24
ದಿನಾಂಕ: 02.11.2023
ಟೆಂಡರ್ ಪ್ರಕಟಣೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 18 (ಹದಿನೆಂಟು) ತಾಂತ್ರಿಕ ಸಹಾಯಕರು (Technical Assistant) ಗಳ ಸೇವೆಯನ್ನು ಹೆಸರಾಂತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 31.10.2023 ರಂದು ಇ–ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ.
ಪೂರಕ ದಾಖಲೆಗಳೊಂದಿಗೆ ಅರ್ಜಿ/ಬಿಡ್ಡು ಸಲ್ಲಿಸಲು ಕೊನೆಯ **ದಿನಾಂಕ: 18.11.203.** ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ. ದೂರವಾಣಿ ಸಂಖ್ಯೆ: **080–23470479,**
http://kppp.karnataka.gov.in, http://ctax.kar.nic.in
ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ವಿ.ಸ&ಸೇ.ತೆ.ಕ–01, ಬೆಂಗಳೂರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
ಸಂ: ಕೆಆರ್‌ಡಿಸಿಎಲ್/ಐಎಫ್‌ಬಿ/2023–24/15 ದಿನಾಂಕ: 03.11.2023
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ಪ್ರತಿಷ್ಠಿತ ಅನುಭವ ಹೊಂದಿರುವ ಕಂಪನಿ/ಏಜೆನ್ಸಿಗಳಿಂದ **ಡೀಸೆಲ್ / ಪೆಟ್ರೋಲ್/ Swift Dzire / Toyota ETIOS / Toyota Innova ಅಥವಾ ತತ್ಸಮಾನ ಸಾಮರ್ಥ್ಯದ ವಾಣಿಜ್ಯ ಪ್ರಯಾಣಿಕ ವಾಹನ (ಕಾರುಗಳು) ಗಳನ್ನು** ಕೆಆರ್‌ಡಿಸಿಎಲ್ ಬೇಡಿಕೆಯ ಅನುಸಾರ ಎರಡು ವರ್ಷದ ಅವಧಿಗೆ ಬಾಡಿಗೆ ಆಧಾರದ ಮೇಲೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂದಾಜು ವೆಚ್ಚ: **ರೂ.430.00 ಲಕ್ಷಗಳು.** ಇಎಂಡಿ: **ರೂ.6,45,000.00. ಸೇವೆಯ ಕಾಲಾವಧಿ: ಎರಡು ವರ್ಷಗಳು.** ಆಸಕ್ತ ಬಿಡ್ಡುದಾರರು ಟೆಂಡರ್ ಸಲ್ಲಿಸುವ ಮೊದಲು ಸ್ಪಷ್ಟೀಕರಣಗಳನ್ನು ಪಡೆಯಲು ಕಛೇರಿ ಸಮಯದಲ್ಲಿ ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಡಿಸಿಎಲ್, ಬೆಂಗಳೂರು ಅವರನ್ನು ಸಂಪರ್ಕಿಸಬಹುದು. ಆಸಕ್ತ ಅರ್ಜಿದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **www.kppp.karnataka.gov.in** ನಿಂದ ಬಿಡ್‌ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ಬಿಡ್‌ಗಳು ಹಾಗೂ ಇಎಂಡಿ (ವಿದ್ಯುನ್ಮಾನವಾಗಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದು.
ಟೆಂಡರ್ ವೇಳಾಪಟ್ಟಿ: 1) ಟೆಂಡರ್ ವಿಚಾರಣೆಗಾಗಿ ಕೊನೆಯ ದಿನಾಂಕ ಮತ್ತು ಸಮಯ: **20.11.2023ರ 17.30 ಗಂಟೆಯವರೆಗೆ.** ಅರ್ಜಿದಾರರು ತಮ್ಮ ವಿಚಾರಣೆಗಳನ್ನು ಇ–ಮೇಲ್ **cekrdcl@gmail.com, mfakrdcl@gmail.com** ಮೂಲಕ ಸಲ್ಲಿಸಬಹುದು: **2)** ಬಿಡ್ ಪೂರ್ವ ಸಭೆಯನ್ನು ದಿನಾಂಕ: **22.11.2023 ರಂದು 11:30 ಗಂಟೆಗೆ** ಕೆಆರ್‌ಡಿಸಿಎಲ್ ಬೋರ್ಡ್ ರೂಂ, ಬೆಂಗಳೂರಿನಲ್ಲಿ ಈ ಮೇಲ್ಕಂಡ ವಿಳಾಸದಲ್ಲಿ ನಡೆಸಲಾಗುವುದು. **3)** ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05.12.2023 ರಂದು 17:30 ಗಂಟೆವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **07.12.2023 ರಂದು 11:30 ಗಂಟೆಗೆ ತೆರೆಯಲಾಗುವುದು.**
ಗಮನಿಸಿ: ಇನ್ನು ಮುಂದೆ ಈ ಪ್ರಕಟಣೆ ಕುರಿತಾದ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಅವುಗಳನ್ನು ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು
ಕರಅನಿನಿ, ಬೆಂಗಳೂರು
DIPR/CP/BCPL/1963/2023-24

ಜಿಲ್ಲಾ ಪಂಚಾಯತ್ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 126, ನವನಗರ, ಬಾಗಲಕೋಟೆ
ದೂರವಾಣಿ: 08354–235042 ಇ–ಮೇಲ್: bgkeezpe@yahoo.com
ಫ್ಯಾಕ್ಸ್: 08354–235043
ಸಂಖ್ಯೆ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–2,3/ಟೆಂಡರ್/2023–24/1703 ದಿನಾಂಕ: 02/11/2023
ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ದ್ವಿ–ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲೂ–3 ಬಿಡ್ ಡಾಕ್ಯೂಮೆಂಟ್
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿನ ಸನ್ 2022–23ನೇ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. 602.77 ಲಕ್ಷ ಅನುದಾನ ಅಡಿಯಲ್ಲಿ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ದ್ರವತ್ಯಾಜ್ಯ ಕಪ್ಪು ನೀರು ನಿರ್ವಹಣೆಯಲ್ಲಿ ಮಲತ್ಯಾಜ್ಯ (FSTP) ನಿರ್ವಹಣಾ ಘಟಕ ನಿರ್ಮಾಣದ ಅನುದಾನದಡಿ ರೂ. 79.60 ಲಕ್ಷ ಅಂ.ಮೊತ್ತದ ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಹುನಗುಂದ, ವಿಧಾನಸಭಾ ಮತಕ್ಷೇತ್ರದ ಕಾಮಗಾರಿಗಳ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳ ಇಂಡೆಂಟ್ ನಂ: **1154, 912** ಕಾಮಗಾರಿ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ **ಟೆಂಡರ್ ಮೊತ್ತ (ರೂ.79.60 ರಿಂದ 87.82 ಲಕ್ಷಗಳ ಮಿತಿಗೊಳಪಟ್ಟು)** ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.
ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **23.11.2023 ರ ಸಾಯಂಕಾಲ 17.30 ಗಂಟೆವರೆಗೆ.**
ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **25.11.2023 ರಂದು ಮುಂಜಾನೆ 11.00 ಗಂಟೆಯ ನಂತರ.**
ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.
ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.
ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ
ವಾ.ಸಾ.ಇ./ಬಾಗಲಕೋಟ/175/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ ಎಸ್‌ಟಿಎಲ್/ಟಿಎನ್‌ಡಿ/ 2023–24 ದಿನಾಂಕ: 03.11.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೆಆರ್‌ಐಡಿಎಲ್ ಇವರು ಕರ್ನಾಟಕದಾದ್ಯಂತ ಇರುವ ಕೆಆರ್‌ಐಡಿಎಲ್‌ನ (ಕೆಎಲ್‌ಎಸಿ) ಯೋಜನೆಗಳಿಗೆ ಐಎಸ್ 1786 ಎಫ್‌ಇ 550 ಅನ್ವಯ ಟಿಎಂಟಿ ಸ್ಟೀಲ್ ಬಾರ್‌ಗಳ ಸರಬರಾಜಿಗಾಗಿ ಕಳೆದ 3 ಹಣಕಾಸಿನ ವರ್ಷಗಳಲ್ಲಿ ಕೆಳಗಿನ ತಃಖ್ತೆಯಲ್ಲಿ ತಿಳಿಸಿರುವಂತೆ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರು/ ಪ್ರಾಥಮಿಕ ತಯಾರಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕಳೆದ ಮೂರು ಹಣಕಾಸಿನ ವರ್ಷಗಳಲ್ಲಿ ಸರ್ಕಾರದ ಇಲಾಖೆಗಳು/ ಅರೆ ಸರ್ಕಾರಿ ಇಲಾಖೆಗಳು/ ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು/ ಕಂಪನಿಗಳಿಗೆ 1000 ಎಂಟಿಯ ಇದೇ ರೀತಿಯ ಸರಬರಾಜನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಆಸಕ್ತಿಯುಳ್ಳ ತಯಾರಕರು ಟೆಂಡರಿನಲ್ಲಿ ಭಾಗವಹಿಸಬಹುದು ಮತ್ತು ಇ–ಆಡಳಿತ ಕಾರ್ಯಾಲಯದ ವೆಬ್‌ಸೈಟ್:**www.kppp.karnataka.gov.in** ಮೂಲಕ ಮಾತ್ರ ವಿವರಗಳನ್ನು ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ಸಂಪರ್ಕ ಸಂ: +91–8046010000, +91–8068948777.

ಕ್ರ ಸಂ	ಟೆಂಡರ್ ವಿವರ	ಪ್ರಮಾಣ ಎಂಟಿ ಗಳಲ್ಲಿ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರಬೇಕಾದ ವಾರ್ಷಿಕ ವಹಿವಾಟು ರೂ. ಲಕ್ಷಗಳಲ್ಲಿ
01	ಟೆಂಡರ್ ಭಾಗ–1 ಬೆಂಗಳೂರು ಮತ್ತು ಬಿಬಿಎಂಪಿ ವಲಯ	501	294.88	4.42	945.00
02	ಟೆಂಡರ್ ಭಾಗ–2 ಮೈಸೂರು ವಲಯ	619	366.20	5.49	1170.00
03	ಟೆಂಡರ್ ಭಾಗ–3 ಕೇಂದ್ರ (ಚಿತ್ರದುರ್ಗ) ವಲಯ	780	461.44	6.92	1475.00
04	ಟೆಂಡರ್ ಭಾಗ–4 ಬೆಳಗಾವಿ ವಲಯ	715	427.99	6.42	1370.00
05	ಟೆಂಡರ್ ಭಾಗ–5 ಕಲಬುರಗಿ ವಲಯ	385	230.46	3.46	737.00

ಮೇಲಿನ ತಃಖ್ತೆಯಲ್ಲಿ ತಿಳಿಸಿರುವ 5 ಭಾಗಗಳ ಪೈಕಿ ಒಂದು ಸಂಸ್ಥೆಯು ಗರಿಷ್ಠ ಮೂರು ಭಾಗಗಳ ಟೆಂಡರುಗಳಲ್ಲಿ ಮಾತ್ರ ಭಾಗವಹಿಸಲು ಅರ್ಹರಾಗಿರುವರು.
ಸರಬರಾಜಿನ ಅವಧಿ: **ಸರಬರಾಜಿನ ಆದೇಶ ನೀಡಿದ ದಿನಾಂಕದಿಂದ ಮೂರು ತಿಂಗಳು.** ವಿಚಾರಣೆಯ ಕಡೆಯ ದಿನಾಂಕ ಮತ್ತು ಸಮಯ: **27.11.2023 ರಂದು 14.00 ಗಂಟೆವರೆಗೆ.** ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **27.11.2023 ರಂದು 16.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29.11.2023 ರಂದು 16.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **01.12.2023 ರಂದು 16.00 ಗಂಟೆಗೆ.**
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: **ಮುಖ್ಯ ಅಭಿಯಂತರರು (ಬೆಂಗಳೂರು)**
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09 ದೂರವಾಣಿ: 080–28015604
ಇ–ಮೇಲ್ : **ddworkskridl@gmail.com** ಮಾಹಿತಿಗಾಗಿ **www.kridl.org.in** ಇಲ್ಲಿಗೆ ಲಾಗಿನ್ ಆಗಿ.
ಸಹಿ/– ಮುಖ್ಯ ಅಭಿಯಂತರರು (ಬೆಂಗಳೂರು)

CAUVERY NEERAVARI NIGAMA LIMITED
(A Government of Karnataka Enterprise)
CIN NO.U45205KA2003SGC032044
Surface Water Data Centre Building, 3rd & 4th Floor, Anandarao Circle, Bengaluru- 560 009. Tel.:22354997-98
TENDER NOTIFICATION NO: CNNL/TECH/TA-3/2023-24 DT: 30-10-2023 (ONLY THROUGH ELECTRONIC TENDER SYSTEM)
Tender is invited in prescribed form by the Managing Director, Cauvery Neeravari Nigarna Limited. Bengaluru for the services mentioned in the statement below.
The tender can be obtained through website https://kppp.karnataka.gov.in e-tender and can be submitted through electronic tender.
STATEMENT SHOWING THE DETAILS OF THE WORK UNDER KARNATAKA PUBLIC PROCUREMENT PORTAL

Sl. No.	Name of work	Estimated cost put to tender (in Rs.)	EMD Amount (in Rs.)	Transaction fee	Stipulated period
1	Supply of Computer Programmer, Senior Accountant Computer Operators, Telephone operator/ Assistants, Drivers, Group-D, House Keeping, Security Guards on outsource basis to Cauvery Neeravari Nigama Ltd.. Corporate Office, Bengaluru.	1,39,86,591	2,79,732	As per KPPP	Twelve Months

Sl. No.	Process Details	Calender of Events
1	Access to e-Tender Document	10th November 2023 to 20th November 2023, 4:00 pm
2	Last date of submission of e-Tendering Document	20th November 2023, 4:00 pm
3	Date of opening of Technical bid at 11:30 am	21st November 2023
4	Date of opening of Financial bid at 11:30 am	22nd November 2023

All the conditions prescribed in the CNNL Tender Document should be followed and for further: information contact section officer during working hours.
Sd/-
Managing Director,
CNNL, Bengaluru.
DIPR/CP/1967/AKAR/2023-24

ಗುಲಬರ್ಗಾ ವಿಶ್ವವಿದ್ಯಾಲಯ
ಜ್ಞಾನ ಗಂಗಾ, ಕಲಬುರಗಿ–585 106, ಕರ್ನಾಟಕ, ದೂರವಾಣಿ ಸಂ.: 08472–263202
ಫ್ಯಾಕ್ಸ್: 08472–263206, ಇ–ಮೇಲ್: registrargug@rediffmail.com
ಕ್ರ.ಸಂ.ಗುವಿಕ/ವಿಮವಿ/ಪಿ.ಜಿ–ಪ್ರವೇಶಾತಿ/ಪತ್ರಿಕಾ ಪ್ರಕಟಣೆ/2023–24/293 ದಿನಾಂಕ: 31.10.2023
:: ಪ್ರವೇಶಾತಿ ಅಧಿಸೂಚನೆ ::
ವಿಷಯ: ಗುಲಬರ್ಗಾ ವಿಶ್ವವಿದ್ಯಾಲಯದ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ಸ್ನಾತಕೋತ್ತರ ಡಿಪ್ಲೋಮಾ ಪದವಿಗಳ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 31.10.2023.
ಗುಲಬರ್ಗಾ ವಿಶ್ವವಿದ್ಯಾಲಯ, ವಿವಿಧ ಸ್ನಾತಕೋತ್ತರ/ಸ್ನಾತಕೋತ್ತರ ಡಿಪ್ಲೋಮಾ ಪದವಿಗಳಿಗಾಗಿ 2023–24ನೇ ಶೈಕ್ಷಣಿಕ ಸಾಲಿಗೆ **ಮೆರಿಟ್ ಮತ್ತು ಮಿಸಲಾತಿ** ಆಧಾರದ ಮೇಲೆ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ಆಳಂದ ಮತ್ತು ಸಂಲಗ್ನತೆ ಹೊಂದಿದ ಸರಕಾರಿ/ಖಾಸಗಿ ಮತ್ತು ಸಂಜೆ ಮಹಾವಿದ್ಯಾಲಯಗಳಲ್ಲಿ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಪ್ರವೇಶಾತಿಗಾಗಿ ಲಭ್ಯವಿರುವ ಸ್ನಾತಕೋತ್ತರ ಪದವಿಗಳು

ನಿಕಾಯ	ಪದವಿಗಳು	ವಿಷಯಗಳು
ಕಲಾ ನಿಕಾಯ	ಎಂ.ಎ.	ಇಂಗ್ಲೀಷ, ಹಿಂದಿ, ಕನ್ನಡ, ಕನ್ನಡ ಮತ್ತು ಜಾನಪದ, ಮರಾಠಿ, ಸಂಗೀತ, ಸಂಸ್ಕೃತ ಮತ್ತು ಉರ್ದು ಮತ್ತು ಪರ್ಷಿಯನ್.
	ಎಂ.ವಿ.ಎ.	ದೃಶ್ಯಕಲೆ (ಚಿತ್ರಕಲೆ), ದೃಶ್ಯಕಲೆ (ಶಿಲ್ಪಕಲೆ).
ಸಮಾಜ ವಿಜ್ಞಾನ ನಿಕಾಯ	ಎಂ.ಎ.	ಅರ್ಥಶಾಸ್ತ್ರ, ಇತಿಹಾಸ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ರಾಜ್ಯಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ, ಮಹಿಳಾ ಅಧ್ಯಯನ.
	ಎಂ.ಎಸ್.ಡಬ್ಲ್ಯೂ	ಸಮಾಜ ಕಾರ್ಯ.
ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ	ಎಂ.ಎಸ್ಸಿ.	ಆನ್ವಯಿಕ ವಿದ್ಯುನ್ಮಾನ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕವಿಜ್ಞಾನ, ಪರಿಸರ ವಿಜ್ಞಾನ, ಮಟೀರಿಯಲ್ಸ್ ಸೈನ್ಸ್, ಗಣಿತ, ಸೂಕ್ಷ್ಮಜೀವಶಾಸ್ತ್ರ, ಸಾವಯವ ರಸಾಯನಶಾಸ್ತ್ರ, ಭೌತಶಾಸ್ತ್ರ, ಸಂಖ್ಯಾಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ.
ವಾಣಿಜ್ಯ ನಿಕಾಯ	ಎಂ.ಕಾಂ.	ವಾಣಿಜ್ಯ, ವಾಣಿಜ್ಯ (ಫೈನಾನ್ಷಿಯಲ್ ಎನಲೈಸಿಸ್).
ಶಿಕ್ಷಣ ನಿಕಾಯ	ಎಂ.ಎಡ್	ಶಿಕ್ಷಣ.
	ಎಂ.ಪಿ.ಎಡ್	ದೈಹಿಕ ಶಿಕ್ಷಣ.
	ಬಿ.ಪಿ.ಎಡ್.	ದೈಹಿಕ ಶಿಕ್ಷಣ.
ಕಾನೂನೂ ನಿಕಾಯ	ಎಲ್.ಎಲ್.ಎಂ.	ಕಮರ್ಷಿಯಲ್ ಲಾ, ಕಾನ್‌ಸ್ಟಿಟ್ಯೂಶನಲ್ ಆ್ಯಂಡ್ ಆ್ಯಡ್‌ಮಿನಿಸ್ಟ್ರೇಟಿವ್ ಲಾ
ಸ್ನಾತಕೋತ್ತರ ಡಿಪ್ಲೋಮಾ ಪದವಿಗಳು	ಭಾರತೀಯ ಗಣಿತ (ಗಣಿತಶಾಸ್ತ್ರ ಅಧ್ಯಯನ ವಿಭಾಗ), ಡಾ.ಬಿ.ಆರ್.ಅಂಬೇಡ್ಕರ ಸ್ಟಡೀಜ್ (ಡಾ.ಬಿ.ಆರ್.ಅಂಬೇಡ್ಕರ ಅಧ್ಯಯನ & ಸಂಶೋಧನಾ ವಿಭಾಗ), ನಾಟಕ ಸಾಹಿತ್ಯ ಮತ್ತು ರಂಗ ಭೂಮಿ* (ಕನ್ನಡ ಅಧ್ಯಯನ ವಿಭಾಗ), ಪಾಲಿ ಆ್ಯಂಡ್ ಬುದ್ಧಿಸ್ಟ್ ಸ್ಟಡೀಸ್* (ಪಾಲಿ ಆ್ಯಂಡ್ ಬುದ್ಧಿಸ್ಟ್ ಅಧ್ಯಯನ ವಿಭಾಗ), ಟ್ರಾನ್ಸಲೇಶನ್ ಸ್ಕಿಲ್ ಹಿಂದಿ (ಹಿಂದಿ ಅಧ್ಯಯನ ವಿಭಾಗ), ವಚನ ಸಾಹಿತ್ಯ*(ಕನ್ನಡ ಅಧ್ಯಯನ ವಿಭಾಗ), ಯೋಗ*(ದೈಹಿಕ ಶಿಕ್ಷಣ ಅಧ್ಯಯನ ವಿಭಾಗ) ಮತ್ತು ಹ್ಯೂಮನ್ ರಿಸೋರ್ಸ ಮ್ಯಾನೇಜಿಮೇಂಟ್ (ಖಾಸಗಿ ಕಾಲೇಜು). (ಸಹವರ್ತಿ ಪದವಿಗಳು)	

ಸೂಚನೆ: 1. ಎಲ್ಲಾ ಪ್ರವೇಶಗಳು **UUCMS** ಮೂಲಕ **(Unified University College Management System Portal), 2. Link for UUCMS portal https://uucms.karnataka.gov.in/login/index,** 3. ಇತರ ಮಾಹಿತಿಗಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ವೆಬ್ ಸೈಟ್ **www.gug.ac.in** ಸಂಪರ್ಕಿಸಿ.
ಮಹತ್ವದ ದಿನಾಂಕಗಳು: ❖ ಆನ್‌ಲೈನ್ ಅರ್ಜಿ ಪ್ರಾರಂಭ ದಿನಾಂಕ: **31.10.2023.** ❖ ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **18.11.2023.** ❖ ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ಮತ್ತು ಎಲ್ಲಾ ದಾಖಲಾತಿಗಳೊಂದಿಗೆ ಸಂಬಂದಪಟ್ಟವರಿಗೆ ಸಲ್ಲಿಸುವ ಕೊನೆಯ ದಿನಾಂಕ: **24.11.2023.**
ಸಹಿ/– ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/421/ಕೆ.ಎಸ್.ಎಂ.ಸಿ.&ಎ/2023–24

ಹೈಕಮಾಂಡ್ ಸೂಚನೆಗೂ ಬಗ್ಗದ 'ಕೈ' ನಾಯಕರು

ಮುಖ್ಯಮಂತ್ರಿ ಹುದ್ದೆ ಕುರಿತಂತೆ ಯಾವುದೇ ಬಹಿರಂಗ ಹೇಳಿಕೆ ನೀಡಬಾರದು ಎಂದು ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದ್ದರೂ ಆ ಪಕ್ಷಕ್ಕೆ ಸೇರಿದ ಸಚಿವರು–ಶಾಸಕರು ಹೇಳಿಕೆ ನೀಡುವುದನ್ನು ಮುಂದುವರಿಸಿದ್ದಾರೆ

'ಪರಮೇಶ್ವರ ಮುಂದಿನ ಮುಖ್ಯಮಂತ್ರಿಯಾಗಲಿ'

ಪ್ರಜಾವಾಣಿ ವಾರ್ತೆ

ಕೆ.ಎನ್.ರಾಜಣ್ಣ

ತುಮಕೂರು: 'ಮುಂದಿನ ಐದು ವರ್ಷ ನಾನೇ ಮುಖ್ಯಮಂತ್ರಿ' ಎಂದು ಸಿದ್ದರಾಮಯ್ಯ ಹೇಳಿದ್ದ ಬೆನ್ನಲ್ಲೇ ಗೃಹ ಸಚಿವ ಜಿ. ಪರಮೇಶ್ವರ ಮುಖ್ಯಮಂತ್ರಿಯಾಗಲಿ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದ್ದಾರೆ.

'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವ ತನಕ ಪರಮೇಶ್ವರ ಮತ್ತು ನಾನು ಅವರ ಪರ ಇರುತ್ತೇವೆ. ಅವರು ಮುಖ್ಯಮಂತ್ರಿ ಸ್ಥಾನ ಬೇಡ ಎಂದು ಹೇಳಿದರೆ ಪರಮೇಶ್ವರ ಮುಖ್ಯಮಂತ್ರಿ ಆಗಬೇಕು. ಸಿದ್ದರಾಮಯ್ಯ ನಂತರ ಪರಮೇಶ್ವರ ಅವರೇ ಮುಖ್ಯಮಂತ್ರಿ ಯಾಗಬೇಕು. ಬೇರೆಯವರಿಗೆ ಆ ಸ್ಥಾನ ನೀಡಬಾರದು' ಎಂದು ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ಪೊಲೀಸ್ ವಸತಿ ಸಮುಚ್ಚಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪರಮೇಶ್ವರ ಅವರಿಗೆ ಅದೃಷ್ಟ ಇದೆ. ಮುಂದೆ ಏನು ಬೇಕಾದರೂ ಆಗಬಹುದು. ಜಿಲ್ಲೆಯಿಂದ ಒಬ್ಬರು ಮುಖ್ಯಮಂತ್ರಿಯಾದರೆ, ನಾನು ಮುಖ್ಯಮಂತ್ರಿಯಾದಂತೆ. ಅವರಿಗೆ ಉಜ್ವಲ ರಾಜಕೀಯ ಭವಿಷ್ಯ ಇದೆ. ಅದನ್ನು ನೋಡಲು ಕಾತುರನಾಗಿದ್ದೇನೆ. ಅದಕ್ಕೆ ಪೂರಕವಾಗಿ ಕೆಲಸ ಮಾಡುತ್ತೇನೆ' ಎಂದರು.

ಹೈಕಮಾಂಡ್ ವಿರುದ್ಧ ಅಸಮಾಧಾನ

ಪೊಲೀಸ್ ವಸತಿ ಸಮುಚ್ಚಯ ಉದ್ಘಾಟನಾ ಕಾರ್ಯಕ್ರಮದಲ್ಲಿಯೇ ಸಚಿವ ಕೆ.ಎನ್. ರಾಜಣ್ಣ ಅವರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧವೇ ಅಸಮಾಧಾನ ಹೊರಹಾಕಿದ್ದಾರೆ.

'ನಾಯಕತ್ವ ಬದಲಾವಣೆ, ಸರ್ಕಾರದ ವಿಚಾರದಲ್ಲಿ ಏನೂ ಮಾತನಾಡಬಾರದು ಎಂದು ಎಐಸಿಸಿ ಮುಖಂಡರು ಹೇಳಿದ್ದಾರೆ. ಇಂತಹ ಯಾವ ಸೂಚನೆಗೂ ಅಂಜುವ ವ್ಯಕ್ತಿ ನಾನಲ್ಲ. ಈಗ ಮಾತನಾಡಿದ್ದೇನೆ, ಮುಂದೆ ಮಾತನಾಡುವುದಿಲ್ಲ ಎಂದು ಹೇಳುತ್ತೇನೆ. ಏನೂ ಬೇಕಾದರೂ ಮಾಡಿಕೊಳ್ಳಲಿ' ಎಂದರು.

'ಡಿಕೆಶಿ ಸಿ.ಎಂ ಆಗಬೇಕು'

ಇಕ್ಬಾಲ್ ಹುಸೇನ್

ರಾಮನಗರ: 'ಡಿ.ಕೆ. ಶಿವಕುಮಾರ್ ಅವರು ರಾಜ್ಯದಲ್ಲಿ ಪ್ರಬಲವಾಗಿ ಪಕ್ಷ ಕಟ್ಟಿದ್ದಾರೆ. ಸತ್ಯ, ನ್ಯಾಯ, ಧರ್ಮ ಅಂಥ ಇದ್ರೆ ಅವರು ಮುಖ್ಯಮಂತ್ರಿಯಾಗಬೇಕು. ಅವರ ಪರ ನಿಲ್ಲುವಂತೆ ನನಗೆ ಯಾವುದೇ ಒತ್ತಡವಿಲ್ಲ. ಅವರನ್ನು ಭೇಟಿಯಾಗಿಯೇ ಮೂರು ತಿಂಗಳಾಗಿದೆ. ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಯದಲ್ಲಿ ಯಾವುದೇ ಅಸಮಾಧಾನವಿಲ್ಲ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ಕಾರ್ಯಕ್ರಮವೊಂದರಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಪಕ್ಷಕ್ಕಾಗಿ ದುಡಿದವರಿಗೂ ಅವಕಾಶ ಕೊಡಿ ಎಂದು ಕೇಳುವುದರಲ್ಲಿ ತಪ್ಪೇನಿದೆ. ಸತ್ಯ ಮತ್ತು ನ್ಯಾಯಕ್ಕೆ ಬೆಲೆ ಇದೆ. ನಾನು ಅದರ ಪರವಾಗಿದ್ದೇನೆ. ವ್ಯಕ್ತಿ ಪರವಾಗಿ ಹೋರಾಟ ಮಾಡುತ್ತಿಲ್ಲ' ಎಂದರು.

'ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಒಂದು ಸಮುದಾಯಕ್ಕೆ ಸೀಮಿತರಲ್ಲ. ಅವರು ಎಲ್ಲಾ ಸಮುದಾಯಗಳ ನಾಯಕ ರಾಗಿದ್ದಾರೆ. ಈ ವಿಷಯದಲ್ಲಿ ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿ ಕಟ್ಟುವ ಮಾತನಾಡಬಾರದು. ನಾನು ಸಹ ಯಾವುದೇ ವರ್ಗಕ್ಕೆ ಸೀಮಿತವಾಗಿಲ್ಲ. ಎಲ್ಲಾ ವರ್ಗಕ್ಕೆ ಸೇರಿರುವ ಎಲ್ಲರ ಮನೆ ಮಗ. ಎಲ್ಲರೂ ನನ್ನನ್ನು ಸಾಕಿದ್ದರಿಂದಲೇ ಅವರ ಸೇವೆ ಮಾಡುವುದಕ್ಕೆ ಅವಕಾಶ ಸಿಕ್ಕಿದೆ' ಎಂದು ಅವರು ತಿಳಿಸಿದರು.

ಆ ಅದೃಷ್ಟ ಬೇಗ ಕೂಡಿ ಬರಲಿ: ಗೃಹ ಸಚಿವ ಪರಮೇಶ್ವರ

ತುಮಕೂರು: 'ಮುಖ್ಯಮಂತ್ರಿ ಆಗುವ ಅದೃಷ್ಟ ಆದಷ್ಟು ಬೇಗ ಕೂಡಿ ಬರಲಿ ಎಂದು ಆಸೆ ಪಡುತ್ತೇನೆ' ಎಂದು ಪರಮೇಶ್ವರ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಕಾಂಕ್ಷಿಗಳು ತುಂಬಾ ಜನ ಇದ್ದಾರೆ. ಸಚಿವ ರಾಜಣ್ಣ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಅವರ ವಿಶ್ವಾಸಕ್ಕೆ ನಾನು ಆಭಾರಿ' ಎಂದರು.

ಸಿ.ಎಂ ಆಗಲು ನಾನೂ ಸಿದ್ಧ: ಪ್ರಿಯಾಂಕ್

ಮೈಸೂರು: 'ಹೈಕಮಾಂಡ್ ಹೇಳಿದರೆ ಮುಖ್ಯಮಂತ್ರಿಯಾಗಲು ನಾನೂ ಸಿದ್ಧನಿದ್ದೇನೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮುಖ್ಯಮಂತ್ರಿ ಯಾರಾಗಬೇಕು ಅಥವಾ ಯಾರು ಮುಂದುವರಿಯಬೇಕೆಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ. ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ವೈಯಕ್ತಿಕವಾದುದು' ಎಂದರು.

'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಅಥವಾ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಬೇಕೆನ್ನುವುದು ಕೆಲವರ ವೈಯಕ್ತಿಕ ಹೇಳಿಕೆ. ದೆಹಲಿಯಲ್ಲಿ ಪಕ್ಷದ ವರಿಷ್ಠರಲ್ಲಿ ನಾಲ್ಕು ಮಂದಿ ಕುಳಿತು ಮಾತನಾಡಿದ್ದಾರೆ. ಅವರಿಗೆ ಮಾತ್ರ ಈ ವಿಚಾರದ ಬಗ್ಗೆ ಸ್ಪಷ್ಟತೆ ಇದೆ' ಎಂದರು.

'ಜಿಲ್ಲಾ ಪಂಚಾಯಿತಿ ಸದಸ್ಯರಿಂದ ಶಾಸಕರವರೆಗೆ ಎಲ್ಲರಿಗೂ ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಸ್ವಾತಂತ್ರ್ಯವಿದೆ. ತಪ್ಪೇನಿಲ್ಲ. ಆದರೆ, ಅವರ ಹೇಳಿಕೆ, ಶಾಸನವಲ್ಲ. ಎಲ್ಲವೂ ಹೈಕಮಾಂಡ್‌ಗೆ ಬಿಟ್ಟಿದ್ದು' ಎಂದರು.

'ಬಿಜೆಪಿಯಿಂದ ನಾವು ಪಾಠ ಕಲಿಯುವ ಅಗತ್ಯವಿಲ್ಲ. ಬಿ.ಎಸ್.ಯಡಿಯೂರಪ್ಪ ಅವರನ್ನು ಆ ಪಕ್ಷದವರೇ ಕಡೆಗಣಿಸಿದ್ದಾರೆ. ಮಗನಿಗೆ ಸ್ಥಾನ ಸಿಗಬಹುದೆಂದು ಯಡಿಯೂರಪ್ಪ ಈಗ ಮಾತನಾಡುತ್ತಿದ್ದಾರೆ' ಎಂದು ಟೀಕಿಸಿದರು.

'ನಾನೇ 5 ವರ್ಷ ಸಿ.ಎಂ ಎನ್ನುವುದು ಅನಾರೋಗ್ಯಕರ'

ಎಸ್.ಎಂ.ಕೃಷ್ಣ

ಮದ್ದೂರು (ಮಂಡ್ಯ ಜಿಲ್ಲೆ): 'ಜಾತಿ ಆಧಾರದಲ್ಲಿ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಜೊತೆಗೆ, ನಾನೇ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತೇನೆ ಎಂದು ಹೇಳುವುದೂ ಅನಾರೋಗ್ಯಕರ ಬೆಳವಣಿಗೆ' ಎಂದು ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಶುಕ್ರವಾರ ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವೈಯಕ್ತಿಕ ಸಾಧನೆ, ಯೋಗ್ಯತೆ, ಸಾಮಾಜಿಕ ಕಳಕಳಿ ಇರುವವರು ಮುಖ್ಯಮಂತ್ರಿಯಾಗಬೇಕು. ಜಾತಿ ಆಧಾರದ ಮೇಲೆ ಅವಕಾಶ ಪಡೆಯುವುದು ಪ್ರಜಾಪ್ರಭುತ್ವದ ಅಣಕ. ಪ್ರತಿ ರಾಜಕೀಯ ಕಾಲಘಟ್ಟದಲ್ಲಿ ತಿರುವುಗಳಿರುತ್ತವೆ, ಅದನ್ನು ಆಧರಿಸಿ ಸ್ಥಾನಗಳ ಬದಲಾವಣೆಯಾಗುತ್ತವೆ' ಎಂದರು.

'ನಾನೇ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತೇನೆ ಎಂದು ಹೇಳುವ ಅನಾರೋಗ್ಯಕರ ಕಾಲಘಟ್ಟಕ್ಕೆ ನಾವಿಂದು ತಲುಪಿದ್ದೇವೆ. ಈಗ ಈ ಪ್ರಶ್ನೆ ಉದ್ಭವಿಸುವ ಅವಶ್ಯಕತೆಯೇ ಇರಲಿಲ್ಲ. ಉನ್ನತ ಸ್ಥಾನದಲ್ಲಿರುವವರು ಇತಿಮಿತಿ ಇಟ್ಟುಕೊಂಡು ಮಾತನಾಡಿದರೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರೆಯುತ್ತದೆ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ 'ನಾನೇ 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತೇನೆ' ಎಂದು ಹೇಳಿದ್ದರು.

ಸಿದ್ದರಾಮಯ್ಯ ಹೇಳಿಕೆ ಸತ್ಯ: ತಿಮ್ಮಾಪೂರ

ಆರ್.ಬಿ. ತಿಮ್ಮಾಪೂರ

ಜಮಖಂಡಿ (ಬಾಗಲಕೋಟೆ): 'ನಾಯಕತ್ವ ಬದಲಾವಣೆ, ಸಂಪುಟ ಪುನರಚನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಸತ್ಯವಾಗಿದೆ. ಅವರು ಮುಖ್ಯಮಂತ್ರಿಯಾಗಿರುವುದಕ್ಕೆ ಯಾರ ಅಸಮಾಧಾನವೂ ಇಲ್ಲ' ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರು ಹೇಳಿದರು.

ತಾಲ್ಲೂಕಿನ ಕಂಕಣವಾಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಸಕಾಂಗ ಪಕ್ಷದ ನಾಯಕ ಮುಖ್ಯಮಂತ್ರಿ. ಅವರನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಐದು ವರ್ಷ ಅವರೇ ಮುಖ್ಯಮಂತ್ರಿಯಾಗಿರುತ್ತಾರೆ. ಬದಲಾವಣೆ ಮಾಡಬೇಕೆಂದರೆ ಅದು ಶಾಸಕಾಂಗ ಪಕ್ಷದಲ್ಲಿ ಮಾಡಬೇಕು, ಅದನ್ನು ಹೈಕಮಾಂಡ್ ನೋಡಿಕೊಳ್ಳುತ್ತದೆ' ಎಂದು ಹೇಳಿದರು.

ಸ್ಪರ್ಧಾ ವಾಣಿ ಬಿಡುಗಡೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು 'ಪ್ರಜಾವಾಣಿ' ಪತ್ರಿಕೆಯ 'ಸ್ಪರ್ಧಾ ವಾಣಿ'ಯ ಮೊದಲ ಸಂಚಿಕೆಯನ್ನು ಶುಕ್ರವಾರ ಗದಗ ನಗರದಲ್ಲಿ ಬಿಡುಗಡೆ ಮಾಡಿದರು.

ಬೇರೆ ಕ್ಷೇತ್ರದಿಂದ ಸ್ಪರ್ಧಿಸಲ್ಲ: ಸುಮಲತಾ

ಮಂಡ್ಯ: 'ಬೆಂಗಳೂರು ಉತ್ತರ ಕ್ಷೇತ್ರದಿಂದ ಸ್ಪರ್ಧಿಸುವ ಅವಕಾಶವನ್ನು ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲೇ ನಿರಾಕರಿಸಿದ್ದೆ. ನನಗೆ ಮಂಡ್ಯ ಜನ ಸ್ಥಾನಮಾನ ಕೊಟ್ಟಿದ್ದಾರೆ, ಈಗಲೂ ನನ್ನ ಜೊತೆಗೇ ಇದ್ದಾರೆ. ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸುವ ಅವಕಾಶ ಬಂದರೆ ಒಪ್ಪುವುದಿಲ್ಲ' ಎಂದು ಸಂಸದೆ ಸುಮಲತಾ ಶುಕ್ರವಾರ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೇರೆ ಯಾವುದೇ ಕ್ಷೇತ್ರದಿಂದಲೂ ಸ್ಪರ್ಧಿಸುವುದಿಲ್ಲ ಎಂದು ನೂರಾರು ಬಾರಿ ಹೇಳಿದ್ದೇನೆ. ಇದನ್ನು ರಕ್ತದಲ್ಲಿ ಬರೆದುಕೊಡಬೇಕಾ? ಮಂಡ್ಯ ಜಿಲ್ಲೆಯ ರಾಜಕಾರಣ ಸದಾ ಸವಾಲಾಗಿರುತ್ತದೆ. ಸವಾಲುಗಳನ್ನು ಎದುರಿಸಲು ನಾನು ಸಿದ್ಧಳಾಗಿದ್ದೇನೆ. ಬಿಜೆಪಿ– ಜೆಡಿಎಸ್ ಮೈತ್ರಿ ಆಗಿರಬಹುದು, ಆದರೆ ಇನ್ನೂ ಕ್ಷೇತ್ರಗಳ ಹಂಚಿಕೆಯಾಗಿಲ್ಲ' ಎಂದರು.

ಸಿ.ಎಂ ಬದಲಾವಣೆ ಚರ್ಚೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಬೇರೆ ಪಕ್ಷಗಳ ಅಂತರಿಕ ವಿಚಾರ ಕುರಿತು ಮಾತನಾಡುವುದಿಲ್ಲ. ಆದರೆ, ರಾಜ್ಯದಲ್ಲಿ ವಿದ್ಯುತ್, ನೀರಿನ ಸಮಸ್ಯೆ ಇದೆ. ಕ್ಷೇತ್ರಗಳಿಗೆ ಅನುದಾನ ಸಿಗದೇ ಕಾಂಗ್ರೆಸ್ ಶಾಸಕರೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಎಲ್ಲವನ್ನೂ ಉಚಿತವಾಗಿ ಕೊಟ್ಟರೆ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆ ಉಂಟಾಗುತ್ತದೆ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಸವಾಲು ಎದುರಿಸುತ್ತಿದೆ' ಎಂದರು.

'ಕಾವೇರಿ ನೀರಿನ ವಿಚಾರದಲ್ಲಿ ನಮ್ಮ ರಾಜ್ಯದ ವಿರುದ್ಧವಾಗಿಯೇ ಆದೇಶಗಳು ಬರುತ್ತಿವೆ. ರಾಜ್ಯದ ಪರವಾಗಿ ವಾದ ಮಾಡುವಲ್ಲಿ ನಾವು ವಿಫಲರಾಗುತ್ತಿದ್ದೇವೆಯಾ ಎಂಬ ಪ್ರಶ್ನೆ ಕಾಡುತ್ತಿದೆ. ಹೋರಾಟವನ್ನು ನಾವು ಜವಾಬ್ದಾರಿಯಿಂದ ಮುಂದುವರಿಸಬೇಕು' ಎಂದರು.

'ಸಿ.ಎಂ ಸ್ಥಾನಕ್ಕೆ ಹೆಚ್ಚಿದ ಸ್ಪರ್ಧೆ'

ಬೆಂಗಳೂರು: ಮುಖ್ಯಮಂತ್ರಿ ಹುದ್ದೆಗೆ ಡಿ.ಕೆ.ಶಿವಕುಮಾರ್ ಅಲ್ಲದೇ ಇನ್ನೂ ಹಲವು ಸ್ಪರ್ಧಿಗಳು ಹುಟ್ಟಿಕೊಂಡಿದ್ದಾರೆ. ಹೊಸ ಸ್ಪರ್ಧಿಗಳ ಸುಳಿವು ಸಿಗುತ್ತಿದ್ದಂತೆ ಸಿದ್ದರಾಮಯ್ಯ ತಾವೇ ಐದು ವರ್ಷ ಮುಖ್ಯಮಂತ್ರಿ ಆಗಿ ಮುಂದುವರೆಯುವುದಾಗಿ ಘೋಷಿಸಿಕೊಂಡಿದ್ದಾರೆ ಎಂದು ಕೆ.ಎಸ್. ಈಶ್ವರಪ್ಪ ವ್ಯಂಗ್ಯವಾಡಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಸಿದ್ದರಾಮಯ್ಯ ಐದು ವರ್ಷ ಮುಂದುವರೆಯುವ ಕುರಿತು ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅದರ ಅರ್ಥ ಐದು ವರ್ಷ ಮುಖ್ಯಮಂತ್ರಿ ಆಗಿರುವುದಿಲ್ಲ ಎನ್ನುವುದು ಸ್ಪಷ್ಟ ಎಂದರು.

ಮತ್ತೊಂದು ಕಡೆ ಪ್ರಿಯಾಂಕ್ ಖರ್ಗೆ ತಾವೂ ಮುಖ್ಯಮಂತ್ರಿ ಆಗಲು ಸಿದ್ಧ ಎಂದಿದ್ದಾರೆ. ಜಿ.ಪರಮೇಶ್ವರ ಮತ್ತು ಪ್ರಿಯಾಂಕ್ ಖರ್ಗೆ ಅವರಿಗೆ ನಾಚಿಕೆ ಆಗಬೇಕು. ದಲಿತರ ಹೆಸರು ಹೇಳಿ ಮತ ಪಡೆಯುತ್ತಿದ್ದಾರೆ. ದಲಿತರ ಹೆಸರಿನಲ್ಲೇ ಮುಖ್ಯಮಂತ್ರಿ ಹುದ್ದೆ ಬೇಕು ಎನ್ನುತ್ತಿದ್ದಾರೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದರೂ ಇನ್ನೂ ಜಾತಿ ಹೆಸರಿನಲ್ಲೇ ಮತ ಕೇಳುತ್ತಾರೆ, ಜಾತಿ ಹೆಸರಲ್ಲೇ ಮುಖ್ಯಮಂತ್ರಿ ಹುದ್ದೆಯನ್ನೂ ಕೇಳುತ್ತಿದ್ದಾರೆ ಎಂದು ಕಿಡಿಕಾರಿದರು.

'ಸರ್ಕಾರದ ಬಗ್ಗೆ ಕಾಂಗ್ರೆಸ್‌ನಲ್ಲಿ ಅತೃಪ್ತ ಶಾಸಕರ ದೊಡ್ಡ ಪಟ್ಟಿಯೇ ಇದೆ. ನಾನೇ ಐದು ವರ್ಷ ಮುಖ್ಯಮಂತ್ರಿ ಎನ್ನುತ್ತಿದ್ದೀರಿ. ನಿಜಕ್ಕೂ ಇದು ದೌರ್ಭಾಗ್ಯವೇ ಸರಿ. ಇದಕ್ಕಿಂತ ನೀವು ರಾಜೀನಾಮೆ ಕೊಟ್ಟು ಹೋಗುವುದೇ ಸೂಕ್ತ' ಎಂದರು.

ಲೋಕಸಭೆ ಚುನಾವಣೆ: ಶೀಘ್ರ ಅಭ್ಯರ್ಥಿಗಳ ಪಟ್ಟಿ ಸಲ್ಲಿಕೆ– ಡಿಕೆಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಲೋಕಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ರಚಿಸಲಾಗಿರುವ ಸಮೀಕ್ಷಾ ತಂಡವು 3-4 ದಿನಗಳೊಳಗೆ ತನ್ನ ವರದಿ ಸಲ್ಲಿಸಲಿದೆ' ಎಂದು ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹೊಸ ಮುಖ, ಯುವಕರು, ವಾಕ್ ಚಾತುರ್ಯ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದೇವೆ' ಎಂದರು.

'ಸಮೀಕ್ಷಾ ತಂಡವು ಈಗಾಗಲೇ ಶೇ 75ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಂಚರಿಸಿದೆ. ಅಲ್ಲಿನ ಶಾಸಕರು, ಕಾರ್ಯಕರ್ತರನ್ನು ಭೇಟಿಯಾಗಿ ವರದಿ ಸಿದ್ಧಪಡಿಸಿದ್ದಾರೆ. ನಮ್ಮ ವರಿಷ್ಠರು ಕೆಲವು ಸಲಹೆ

> ಪಕ್ಷದ ಸೂಚನೆ ಮೀರಿ ಮಾತನಾಡಿದವರಿಗೆಲ್ಲಾ ನೋಟಿಸ್ ನೀಡುತ್ತೇನೆ
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ನೀಡಿದ್ದಾರೆ. ಈಗಾಗಲೇ ವರದಿ ಸಲ್ಲಿಕೆ ಆಗಬೇಕಾಗಿತ್ತು. ಬೇರೆ ಬೇರೆ ಕಾರಣಗಳಿಂದ ಇದುವರೆಗೆ ಸಲ್ಲಿಸಿಲ್ಲ' ಎಂದರು.

ಬರ ಅಧ್ಯಯನ ಮಾಡಲಿ: 'ಬಿಜೆಪಿಯವರು ಬರ ಅಧ್ಯಯನ ಮಾಡಲಿ, ಕೇಂದ್ರಕ್ಕೆ ವರದಿಯನ್ನೂ ನೀಡಲಿ' ಎಂದು ವ್ಯಂಗ್ಯವಾಡಿದರು.

'ನಮ್ಮ ಪಕ್ಷದಲ್ಲಿ ಯಾವುದೇ ಅಸಮಾಧಾನ ಇಲ್ಲ. ಬಿಜೆಪಿಯವರ ಆರೋಪ ಸುಳ್ಳು. ಸರ್ಕಾರ ರಚನೆಯಾಗಿ 6 ತಿಂಗಳ ಕಳೆದರೂ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಆ ಪಕ್ಷಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅದು ಅಸಮರ್ಥವಾಗಿದೆ' ಎಂದು ಟೀಕಿಸಿದರು.

'ಔರಾದಕರ್ ವರದಿ ಪುನರ್ ಪರಿಶೀಲನೆ'

ಪ್ರತಿಜಿಲ್ಲೆಗೆ ಇಬ್ಬರು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನೇಮಕ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ತುಮಕೂರು: ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯ ವೇತನ ಪರಿಷ್ಕರಣೆ ಸಂಬಂಧ ರಾಘವೇಂದ್ರ ಔರಾದಕರ್ ಸಮಿತಿ ನೀಡಿರುವ ವರದಿಯನ್ನು ಪುನರ್ ಪರಿಶೀಲನೆ ಮಾಡಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಭರವಸೆ ನೀಡಿದ್ದಾರೆ.

ನಗರದಲ್ಲಿ ಶುಕ್ರವಾರ ಪೊಲೀಸ್ ವಸತಿ ಸಮುಚ್ಚಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವರದಿಯ ಪುನರ್ ಪರಿಶೀಲನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಲಾಗಿದೆ. ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡಲು ಹೆಚ್ಚುವರಿಯಾಗಿ ₹600 ಕೋಟಿ ಬೇಕಾಗಬಹುದು ಎಂದರು.

ಪೊಲೀಸರಿಗೆ ಸರಿಯಾಗಿ ಸಂಬಳ ಆಗುತ್ತಿಲ್ಲ ಎನ್ನುವುದು ವಾಸ್ತವದಿಂದ ಕೂಡಿದೆ. ಔರಾದಕರ್ ವರದಿಯ ಕೆಲವು ಅಂಶಗಳನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಆದರೆ ಪೂರ್ಣ ಪ್ರಮಾಣದಲ್ಲಿ ವರದಿ ಜಾರಿಯಾಗಿಲ್ಲ ಎಂದು ಹೇಳಿದರು.

ಪ್ರತಿ ಜಿಲ್ಲೆಗೆ ಇಬ್ಬರು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳನ್ನು ನೇಮಿಸಲು ಈಗಾಗಲೇ ಆದೇಶ ಹೊರಡಿಸಲಾಗಿದೆ. ಒಬ್ಬರು ಅಪರಾಧ ಪ್ರಕರಣ ನೋಡಿಕೊಂಡರೆ, ಮತ್ತೊಬ್ಬರು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕೆಲಸ ಮಾಡಲಿದ್ದಾರೆ ಎಂದರು.

ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಭರ್ತಿ ಮಾಡಲಾಗುವುದು. ಈಗಾಗಲೇ ರಾಜ್ಯದಲ್ಲಿ ಶೇ 40ರಷ್ಟು ಪೊಲೀಸರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಮುಂದಿನ ಐದು ವರ್ಷದಲ್ಲಿ ಶೇ 70ರಷ್ಟು ಪೊಲೀಸರಿಗೆ ಮನೆಗಳನ್ನು ನಿರ್ಮಿಸಿ ಕೊಡಲಾಗುವುದು ಎಂದು ಪರಮೇಶ್ವರ ಹೇಳಿದರು.

ಪಿಎಸ್ಐ ಹುದ್ದೆಗಳ ನೇಮಕಾತಿ ಹಗರಣ ಇನ್ನೂ ಬಗೆಹರಿದಿಲ್ಲ. 545 ಪಿಎಸ್ಐ ಹುದ್ದೆಗಳ ಆಯ್ಕೆ ಪ್ರಕ್ರಿಯೆ ಅರ್ಧಕ್ಕೆ ನಿಂತಿದೆ. ಇದರಿಂದಾಗಿ ಒಂದು ಸಾವಿರಕ್ಕೂ ಹೆಚ್ಚು ಪಿಎಸ್ಐ ಹುದ್ದೆಗಳು ಖಾಲಿ ಉಳಿದಂತಾಗಿದೆ.

ಪೊಲೀಸ್ ಸಿಬ್ಬಂದಿಯ ಕೊರತೆ ಸರಿದೂಗಿಸಿಕೊಂಡು ಹೋಗಲು ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ ನೀಡಲಾಗುತ್ತಿದೆ ಎಂದರು.

ಬಿಟ್ ಕಾಯಿನ್ ಪ್ರಕರಣವನ್ನು ಸರ್ಕಾರ ತುಂಬಾ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸುತ್ತಿದೆ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿ ಹಗರಣ ನಡೆದಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ 57 ಕೊಲೆಗಳಾಗಿವೆ. ಎಲ್ಲ ಆರೋಪಿಗಳನ್ನು ಕೆಲವೇ ತಾಸಿನಲ್ಲಿ ಬಂಧಿಸಲಾಗಿದೆ. ಪೊಲೀಸರು ತಂತ್ರಜ್ಞಾನ ಬಳಸಿ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

12 ಲೇಖಕರಿಗೆ ಪುಸ್ತಕ ಬಹುಮಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘದ 2022ನೇ ಸಾಲಿನ ಪುಸ್ತಕ ಬಹುಮಾನಗಳನ್ನು 12 ಮಂದಿ ಲೇಖಕರಿಗೆ ನೀಡಲಾಗಿದೆ. ವಿಜೇತರಿಗೆ ತಲಾ ₹10,000 ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

ಬಹುಮಾನ ವಿತರಣೆ ಸಮಾರಂಭ ನವೆಂಬರ್ 26ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಶಸ್ತಿ ಪುರಸ್ಕೃತರ ವಿವರ

ಬಹುಮಾನ	ಲೇಖಕ	ಪುಸ್ತಕ
1. ಕುವೆಂಪು ಕಾದಂಬರಿ ಬಹುಮಾನ	ಎಚ್.ಬಿ. ಇಂದ್ರಕುಮಾರ್	ಎತ್ತರ
2. ಪ್ರೊ.ಎಸ್.ವಿ.ಪರಮೇಶ್ವರಭಟ್ಟ ಅನುವಾದ ಸಾಹಿತ್ಯ	ಮಾಧವ ಚಿಪ್ಪಳಿ	ಯೂರಿಪಿಡೀಸ್ ಮೂರು ನಾಟಕಗಳು
3. ಎಂ.ಕೆ.ಇಂದಿರಾ ಮಹಿಳಾ ಸಾಹಿತ್ಯ	ಮುಮ್ತಾಜ್ ಬೇಗಂ	ಲೋಕವೇ ತಾನಾದ ಬಳಿಕ
4. ಪಿ.ಲಂಕೇಶ್ ಮುಸ್ಲಿಂ ಬರಹಗಾರರು	ಫಾತಿಮಾ ರಲಿಯಾ	ಕಡಲು ನೋಡಲು ಹೋದವಳು
5. ಜಿ.ಎಸ್.ಶಿವರುದ್ರಪ್ಪ ಕವನ ಸಂಕಲನ	ನಾ.ಮೊಗಸಾಲೆ	ಬೇಲಿಯ ಗೂಟದಲ್ಲೊಂದು ಚಿಟ್ಟೆ
6. ಹಾ.ಮಾ.ನಾಯಕ ಅಂಕಣ ಬರಹಗಾರರು	ಶಶಿಧರ ಹಾಲಾಡಿ	ಉರುಳಿದ ಕಟ್ಟಡ ಮರಳಿದ ನೆನಪು
7. ಯು.ಆರ್.ಅನಂತಮೂರ್ತಿ ಸಣ್ಣ ಕಥಾ ಸಂಕಲನ	ಚಿದಾನಂದ ಸಾಲಿ	ಹೊಗೆಯ ಹೊಳೆಯಿದು ತಿಳಿಯದು
8. ಕೆ.ವಿ. ಸುಬ್ಬಣ್ಣ ನಾಟಕ ಬಹುಮಾನ	ಬಸವರಾಜ ಸಬರದ	ಜೋಡಿ ನಾಟಕಗಳು
9. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ ಪ್ರವಾಸ ಸಾಹಿತ್ಯ	ಸಂತೋಷ ಕುಮಾರ ಮೆಹಂದಳೆ	ಅಲೆಮಾರಿಯ ಡೈರಿ
10. ಹಸೂಡಿ ವೆಂಕಟಶಾಸ್ತ್ರಿ ವಿಜ್ಞಾನ ಸಾಹಿತ್ಯ	ಸುಕನ್ಯಾ ಸೊನಗಹಳ್ಳಿ	ಬೆಳೆ ರೋಗಗಳು, ಕೀಟಗಳು, ಅವುಗಳ ನಿರ್ವಹಣೆ
11. ನಾ.ಡಿಸೋಜ ಮಕ್ಕಳ ಸಾಹಿತ್ಯ	ಕೊಳ್ಳೇಗಾಲ ಶರ್ಮ	ಜಾಣ ಪ್ರಶ್ನೆ
12. ಡಾ.ಎಚ್.ಡಿ.ಚಂದ್ರಪ್ಪಗೌಡ ವೈದ್ಯ ಸಾಹಿತ್ಯ	ಡಾ.ಪಿ.ಎಂ. ಸೂರ್ಯನಾರಾಯಣ ಶರ್ಮ	ಪಾರ್ಶ್ವವಾಯುವಿನಿಂದ ಚೈತನ್ಯದೆಡೆಗೆ

ಬರ: ₹ 324 ಕೋಟಿ ಹಣ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬರ ಪೀಡಿತ ಪ್ರದೇಶಗಳೆಂದು ಘೋಷಿಸಿರುವ 216 ತಾಲ್ಲೂಕುಗಳಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಪೂರೈಕೆ ಸೇರಿದಂತೆ ತುರ್ತು ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ (ಎಸ್‌ಡಿಆರ್‌ಎಫ್) ₹ 324 ಕೋಟಿ ಬಿಡುಗಡೆ ಮಾಡಲಾಗಿದೆ.

ಜಿಲ್ಲಾಧಿಕಾರಿಗಳ ವೈಯಕ್ತಿಕ (ಪಿ.ಡಿ) ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಿ ಕಂದಾಯ ಇಲಾಖೆಯು ಅಕ್ಟೋಬರ್ 31ರಂದು ಆದೇಶ ಹೊರಡಿಸಿದೆ. ಎಸ್‌ಡಿಆರ್‌ಎಫ್ ಮತ್ತು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿಗಳ ಅನುಸಾರ ಈ ಮೊತ್ತವನ್ನು ಬಳಕೆ ಮಾಡುವಂತೆ ಸೂಚಿಸಲಾಗಿದೆ.

'2.32 ಲಕ್ಷ ಮನೆ ಪೂರ್ಣಗೊಳಿಸಲು ಅನುದಾನ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ನಗರ ಪ್ರದೇಶಗಳಲ್ಲಿನ ಬಡವರು ತಮ್ಮ ಮನೆಗಳಿಗೆ ವಂತಿಗೆ ಪಾವತಿಸಲು ಸಾಧ್ಯವಾಗದೆ ಕಳೆದ ಎಂಟು ವರ್ಷಗಳಿಂದ ಅಪೂರ್ಣಗೊಂಡು ನಿಂತಿದ್ದ 2.32 ಲಕ್ಷ ಮನೆಗಳನ್ನು ಸರ್ಕಾರವೇ ಹಣ ಪಾವತಿಸಿ ಪೂರ್ಣಗೊಳಿಸಿ, ಫಲಾನುಭವಿಗಳಿಗೆ ಉಚಿತವಾಗಿ ಒದಗಿಸಲಿದೆ. ಇದು ಸರ್ಕಾರದ ಆರನೇ ಗ್ಯಾರಂಟಿ' ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

'ಕೊಳೆಗೇರಿ ಅಭಿವೃದ್ಧಿ ಮಂಡಳಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮ ವತಿಯಿಂದ ಬಡವರಿಗೆ ಸೂರು ಕಲ್ಪಿಸಲು 2015ರಲ್ಲಿ ರೂಪಿಸಿದ್ದ ಯೋಜನೆ ಇದಾಗಿದ್ದು, ಮುಂದಿನ ವರ್ಷದ ಅಂತ್ಯದೊಳಗೆ ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ. ಈಗಾಗಲೇ ಹಲವು ಸುತ್ತಿನ ಸಭೆಗಳು ನಡೆದಿವೆ. ಸೋಮವಾರ ಇನ್ನೊಂದು ಸುತ್ತಿನ ಸಭೆ ನಡೆಯಲಿದೆ, ಬಳಿಕ ಸರ್ಕಾರ ತನ್ನ ತೀರ್ಮಾನ ಪ್ರಕಟಿಸಲಿದೆ' ಎಂದು ಅವರು ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಆರಂಭವಾದ ಯೋಜನೆ ಇದು. ಈ 2 ಯೋಜನೆಗಳಲ್ಲಿ ₹ 7.50 ಲಕ್ಷ ವೆಚ್ಚದಲ್ಲಿ ಮನೆಗಳ ಸಮುಚ್ಚಯವನ್ನು ಸರ್ಕಾರ ನಿರ್ಮಿಸಿಕೊಡುತ್ತದೆ. ಇಲ್ಲಿ ಫಲಾನುಭವಿಗೆ ₹3 ಲಕ್ಷ ಸಬ್ಸಿಡಿ ಸಿಗುತ್ತದೆ, ಉಳಿದ ₹4.50 ಲಕ್ಷವನ್ನು ಪಾವತಿಸಬೇಕಾಗುತ್ತದೆ. ಕೊಳೆಗೇರಿ ನಿವಾಸಿಗಳು, ನಗರಗಳಲ್ಲಿನ ಬಡವರನ್ನೇ ಗುರಿಯಾಗಿ ಇಟ್ಟುಕೊಂಡು ರೂಪಿಸಿದ ಯೋಜನೆ ಇದು. ಇವರಿಗೆ ಬ್ಯಾಂಕ್ ಸಾಲ ಸಿಗುತ್ತಿಲ್ಲ. ಹೀಗಾಗಿ ಫಲಾನುಭವಿಗಳ ಪಾಲಿನ ದುಡ್ಡು ಕಟ್ಟಡಗಳ ಗುತ್ತಿಗೆದಾರರ ಕೈಸೇರದೆ 2.32 ಲಕ್ಷ ಮನೆಗಳು ಅರೆಬರೆ ನಿರ್ಮಾಣವಾಗಿವೆ' ಎಂದು ವಿವರಿಸಿದರು.

ಲೀಲಾದೇವಿಗೆ ಸಂ.ಶಿ.ಭೂಸನೂರಮಠ ಸಾಹಿತ್ಯ ಪ್ರಶಸ್ತಿ

ಧಾರವಾಡ: 'ಸಂ.ಶಿ.ಭೂಸನೂರಮಠ ಪ್ರತಿಷ್ಠಾನ'ದ ಸಾಹಿತ್ಯ ಪುರಸ್ಕಾರಕ್ಕೆ ಸಾಹಿತಿ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ ಅವರನ್ನು ಆಯ್ಕೆ ಮಾಡಲಾಗಿದೆ.

'ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನವೆಂಬರ್ 8ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪುರಸ್ಕಾರವು ₹ 15 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ' ಎಂದು ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಪ್ರೊ.ಮಲ್ಲಿಕಾರ್ಜುನ ಹಿರೇಮಠ ತಿಳಿಸಿದ್ದಾರೆ.

ನಿಧನವಾರ್ತೆ

ಎನ್.ವೆಂಕೋಬರಾವ್



ಮೈಸೂರು: ನಗರದ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಸ್ಥಾಪಕ ಪ್ರೊ.ಎನ್. ವೆಂಕೋಬರಾವ್ (87) ಅವರು ದೀರ್ಘಕಾಲದ ಅನಾರೋಗ್ಯದಿಂದ ಶುಕ್ರವಾರ ಬೆಳಿಗ್ಗೆ ಜಯಲಕ್ಷ್ಮಿಪುರಂನ ತಮ್ಮ ಮನೆಯಲ್ಲಿ ನಿಧನರಾದರು.

'ಮೇಷ್ಟ್ರು', ಒಡನಾಡಿಗಳ 'ವೆಂಕಣ್ಣ' ಎಂದೇ ಪ್ರಸಿದ್ಧರಾಗಿದ್ದ ಅವರು ಇಲ್ಲಿನ ಬನುಮಯ್ಯ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. 60ರ ದಶಕದಲ್ಲೇ 'ಶ್ರೀಕಾಂತ' ಕಾವ್ಯನಾಮದಲ್ಲಿ ಅನೇಕ ಕಥೆಗಳನ್ನು ಬರೆದಿದ್ದರು. ಕಳೆದ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾಗಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ 3 ದಶಕಗಳ ಕಾಲ ಹಾಗೂ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಯಲ್ಲಿ 4 ದಶಕಗಳ ಕಾಲ ಸೇವೆ ಸಲ್ಲಿಸಿದ್ದ ಅವರಿಗೆ 'ಲಯನ್ಸ್ ಭೀಷ್ಮ' ಪ್ರಶಸ್ತಿ ದೊರಕಿತ್ತು. ಲಯನ್ಸ್ ಸಂಸ್ಥೆಯ ಶಾಶ್ವತ ಸದಸ್ಯತ್ವ ಪಡೆದಿದ್ದರು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಅವರಿಗೆ ಪತ್ನಿ, ಒಬ್ಬ ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿತಾಗಾರದಲ್ಲಿ ಶುಕ್ರವಾರ ಸಂಜೆ ನಡೆಯಿತು.

ಕೇಂದ್ರದಿಂದ ಹೊಸ ಮೀಸಲಾತಿ ನೀತಿ ರೂಪಿಸಲು ಬಿಜೆಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರಿಗಾಗಿ ಹೊಸ ಮೀಸಲಾತಿ ನೀತಿಯೊಂದನ್ನು ರೂಪಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ.

ಇದಕ್ಕೆ ಪೂರಕವಾಗಿ ಗುರುವಾರ ದೆಹಲಿಯಲ್ಲಿ ಬಿಜೆಪಿಯ ಹಿಂದುಳಿದ ನಾಯಕರ ಸಭೆ ನಡೆಸಿ ವಿಸ್ತೃತ ಚರ್ಚೆ ನಡೆಸಲಾಯಿತು. ಈ ವಿಚಾರವಾಗಿ ಇನ್ನೂ ಆಳವಾದ ಸಮಾಲೋಚನೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಇಂದಿನ ದಿನಮಾನ, ಜನಸಂಖ್ಯೆ ಮತ್ತು ಜನರ ಆಶೋತ್ತರಗಳಿಗೆ ಅನುಗುಣವಾಗಿ ಈ ನೀತಿಯನ್ನು ರೂಪಿಸಲಾಗುವುದು. ಇದಕ್ಕಾಗಿ ಎಲ್ಲ ಹಿಂದುಳಿದ ವರ್ಗಗಳ ನಾಯಕರಿಂದ ಅಭಿಪ್ರಾಯ ಮತ್ತು ಸಲಹೆಗಳನ್ನು ಸಂಗ್ರಹಿಸಲಾಯಿತು. ಸುಪ್ರೀಂಕೋರ್ಟ್ ತೀರ್ಪುಗಳು ಮತ್ತು ಸಂವಿಧಾನದ ಆಶಯವನ್ನು ಗಮನದಲ್ಲಿಟ್ಟುಕೊಂಡು ನೀತಿ ರೂಪಿಸಲಾಗುವುದು ಎಂದರು.

ಸಭೆಯಲ್ಲಿ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಗೃಹ ಸಚಿವ ಅಮಿತ್ ಶಾ, ಸಚಿವ ನಿತಿನ್ ಗಡ್ಕರಿ, ಬಿಜೆಪಿ ಆಡಳಿತವಿರುವ ರಾಜ್ಯಗಳ ಪ್ರಮುಖ ನಾಯಕರು ಭಾಗವಹಿಸಿದ್ದರು. ಸುಮಾರು 40 ಕ್ಕೂ ಹೆಚ್ಚು ನಾಯಕರು ಭಾಗವಹಿಸಿ, ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು ಎಂದು ವಿವರಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಜಾತಿ ಗಣತಿಯ ಪ್ರಸ್ತಾಪ ಮಾಡುತ್ತಿರುವ ಬೆನ್ನಲ್ಲೇ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಒಲವು ಗಳಿಸಲು ಹೊಸ ಮೀಸಲಾತಿ ನೀತಿ ರೂಪಿಸುವ ಯತ್ನದ ಮೂಲಕ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಲು ಬಿಜೆಪಿ ತೀರ್ಮಾನಿಸಿದೆ ಎಂದರು.

ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಹೇಳಿಕೆ

'ಕಾಂತರಾಜು ವರದಿ ಬೆಂಕಿಗೆ ಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂತರಾಜು ವರದಿಯನ್ನು ಬೆಂಕಿಗೆ ಹಾಕಿ ಸುಡಬೇಕು' ಎಂದು ಮಾಜಿ ಸಚಿವ ಹಾಗೂ ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ.

'ಈ ವರದಿಗೆ ಕಾರ್ಯದರ್ಶಿಯ ಸಹಿ ಕೂಡ ಆಗಿಲ್ಲ. ಅವರ ಸಹಿ ಇಲ್ಲದೇ ಸರ್ಕಾರ ಅದನ್ನು ಸ್ವೀಕರಿಸುವುದಕ್ಕೆ ಆಗುವುದಿಲ್ಲ. ಮಾನ್ಯತೆ ಇಲ್ಲದ ವರದಿಯನ್ನು ಬೆಂಕಿಗೆ ಹಾಕುವುದು ಮೇಲಲ್ಲವೇ' ಎಂದು ಅವರು 'ಪ್ರಜಾವಾಣಿ'ಗೆ ಜತೆ ಮಾತನಾಡಿ ತಿಳಿಸಿದರು.

'ಸಹಿ ಇಲ್ಲದ ವರದಿಯನ್ನು ಸ್ವೀಕರಿಸುವುದಾಗಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ರಾಜಕೀಯ ಕಾರಣಕ್ಕಾಗಿ ಸ್ವೀಕರಿಸುವುದಾಗಿ ಹೇಳುತ್ತಿದ್ದಾರೆ. ಇದಕ್ಕೆ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ವಿರೋಧವಿದೆ. ಅಲ್ಲದೇ, ಕಾಂತರಾಜು ವರದಿ ವೈಜ್ಞಾನಿಕವಾಗಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಗಣತಿಯನ್ನು ಜಾತಿ ಗಣತಿ ಎಂದು ಈಗ ಇವರು ಬಿಂಬಿಸಲು ಹೊರಟಿದ್ದಾರೆ. ಹಿಂದುಳಿದವರ ಛಾಂಪಿಯನ್ ಆಗಲು ಸಿದ್ದರಾಮಯ್ಯ ಯತ್ನಿಸುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಯಾರಾದರೂ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರೆ ಈ ವರದಿ ಬಿದ್ದು ಹೋಗುತ್ತದೆ. ಸಿದ್ದರಾಮಯ್ಯ ಜಾತಿ ಗಣತಿ ಅನುಷ್ಠಾನ ಮಾಡುತ್ತೇನೆ ಎಂದರೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವರದಿ ಜಾರಿ ಮಾಡಲು ಬಿಡುವುದಿಲ್ಲ ಎನ್ನುತ್ತಿದ್ದಾರೆ. ಒಂದು ವೇಳೆ ಈ ವರದಿಯನ್ನು ಸ್ವೀಕರಿಸಿದರೆ ಮರು ದಿನವೇ ಸರ್ಕಾರ ಬಿದ್ದು ಹೋಗುತ್ತದೆ' ಎಂದರು.

'ನಾಯಿ–ನರಿಗಳಿಗೆ ಅಪಮಾನ'

ಕೆ.ಎಸ್.ಈಶ್ವರಪ್ಪ

'ಕಾಂಗ್ರೆಸ್ ನಾಯಕರು ನಾಯಿ, ನರಿಗಳಂತೆ ಕಚ್ಚಾಡುತ್ತಿದ್ದಾರೆ ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಆ ರೀತಿ ಹೇಳಿ ನಾಯಿ– ನರಿಗಳಿಗೆ ಅವಮಾನ ಮಾಡಬಾರದಿತ್ತು' ಎಂದು ಕೆ.ಎಸ್.ಈಶ್ವರಪ್ಪ ಕಾಲೆಳೆದಿದ್ದಾರೆ.

'ಯಡಿಯೂರಪ್ಪ ನಮ್ಮ ನಾಯಕರು. ರೈತರ ಬಗ್ಗೆ ಹೋರಾಟ ಮಾಡಿಕೊಂಡು ಬಂದವರು. ಕಾಂಗ್ರೆಸ್ ನಾಯಕರ ಕಚ್ಚಾಟ ನೋಡಿ ಬೇಸತ್ತು ಅವರು ಹಾಗೆ ಹೇಳಿರಬಹುದು. ಅವರ ಮನೆ ಮುಂದೆ ನಾಯಿ–ನರಿಗಳಿಗೆ ಮಾಂಸ ಹಾಕಲ್ಲ. ಅವು ಯಾವ ಮನೆ ಹುಡುಕಿಕೊಂಡು ಹೋಗುತ್ತವೆಯೋ ಗೊತ್ತಿಲ್ಲ. ಯಡಿಯೂರಪ್ಪ ನಮಗೆ ಅವಮಾನ ಮಾಡಿದರಲ್ಲಾ ಎಂದು ಅವರ ಮನೆ ಮುಂದೆ ಧರಣಿ ಮಾಡಬಹುದೇನೋ' ಎಂದು ಹಾಸ್ಯ ಮಾಡಿದರು.

ಚರ್ಚೆ ಬಳಿಕ ನಿರ್ಧಾರ: ಛತ್ತೀಸಗಢದಲ್ಲಿ ಪ್ರಣಾಳಿಕೆ ಬಿಡುಗಡೆ ಬಳಿಕ ಸಚಿವ ಅಮಿತ್ ಶಾ ಹೇಳಿಕೆ

‘ಜಾತಿಗಣತಿ: ಬಿಜೆಪಿ ಎಂದೂ ವಿರೋಧಿಸಿಲ್ಲ’

ಛತ್ತೀಸಗಢದ ರಾಯಪುರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಪ್ರಣಾಳಿಕೆ ಬಿಡುಗಡೆ ಮಾಡಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವೊ, ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಇದ್ದಾರೆ ಪಿಟಿಐ ಚಿತ್ರ

ರಾಯಪುರ (ಪಿಟಿಐ): ಜಾತಿ ಗಣತಿಗೆ ಬಿಜೆಪಿ ಎಂದೂ ವಿರೋಧ ವ್ಯಕ್ತಪಡಿಸಿಲ್ಲ ಆದರೆ ಎಲ್ಲರೊಂದಿಗೆ ಸಮಾಲೋಚಿಸಿದ ಬಳಿಕ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ರಾಷ್ಟ್ರಮಟ್ಟದಲ್ಲಿ ಜಾತಿ ಗಣತಿ ನಡೆಸುವಂತೆ ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳು ಒತ್ತಾಯಿಸುತ್ತಿರುವುದರ ನಡುವೆಯೇ ಶಾ ಈ ಹೇಳಿಕೆ ನೀಡಿದ್ದಾರೆ.

ಪಕ್ಷದ ಪ್ರಣಾಳಿಕೆ ಬಿಡುಗಡೆ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು. ಕಾಂಗ್ರೆಸ್ ಪಕ್ಷವು ಜಾತಿ ಗಣತಿ ಸೇರಿ 17 ಗ್ಯಾರಂಟಿಗಳನ್ನು ನೀಡಿರುವ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ, ‘ನಮ್ಮದು ರಾಷ್ಟ್ರೀಯ ಪಕ್ಷ. ಈ ವಿಷಯದಲ್ಲಿ ನಾವು ಮತಗಳ ರಾಜಕೀಯ ಮಾಡುವುದಿಲ್ಲ. ಎಲ್ಲರೊಂದಿಗೆ ಚರ್ಚಿಸಿ ನಿರ್ಧಾರಕ್ಕೆ ಬರುತ್ತೇವೆ. ಆ ಬಗ್ಗೆ ಹೇಳುತ್ತೇವೆ. ಆದರೆ ಅದರ ಆಧಾರದಲ್ಲೇ ಚುನಾವಣೆಗೆ ಸ್ಪರ್ಧಿಸುವುದು ಸರಿಯಲ್ಲ’ ಎಂದರು.

ಪಂಡರಿಯಾದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ಮತಾಂತರ ಹೆಚ್ಚಾಗಿದೆ. ತಮ್ಮ ಆಯ್ಕೆಯ ಧರ್ಮವನ್ನು ಅನುಸರಿಸಲು ಸಂವಿಧಾನವು ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ ನೀಡಿದೆ. ಆದರೆ ಬುಡಕಟ್ಟು ಜನರನ್ನು ಕಾಂಗ್ರೆಸ್ ಮತಾಂತರ ಮಾಡುತ್ತಿದೆ. ಇದರಲ್ಲಿ ರಾಜ್ಯದ ಹಿತ ಅಡಗಿಲ್ಲ ಎಂದು ಟೀಕಿಸಿದರು.

ಈ ಕಾರಣದಿಂದಾಗಿಯೇ ಪ್ರತಿ ಮನೆ ಮತ್ತು ಗ್ರಾಮದಲ್ಲಿ ಘರ್ಷಣೆ ಶುರುವಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಹದಗೆಟ್ಟಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಹಲವು ಹಗರಣಗಳಲ್ಲಿ ಭಾಗಿಯಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ, ಭ್ರಷ್ಟಾಚಾರ ನಡೆಸಿದವರನ್ನು ಜೈಲಿಗೆ ಅಟ್ಟುತ್ತದೆ ಎಂದರು.

‘ಹಿಂದೆ ಬಿದ್ದಿದ್ದ ಛತ್ತೀಸಗಢವನ್ನು 15 ವರ್ಷಗಳ ಬಿಜೆಪಿ ಆಡಳಿತದಲ್ಲಿ ಉತ್ತಮ ರಾಜ್ಯವಾಗಿ ಪರಿವರ್ತಿಸಿದೆವು. ಮುಂದಿನ ಐದು ವರ್ಷಗಳಲ್ಲಿ ನಾವು ಅಭಿವೃದ್ಧಿ ಹೊಂದಿದ ರಾಜ್ಯವಾಗಿ ಮಾಡುತ್ತೇವೆ’ ಎಂದು ಅವರು ಭರವಸೆ ನೀಡಿದರು. ಛತ್ತೀಸಗಢದಲ್ಲಿ ನವೆಂಬರ್ 7 ಮತ್ತು 17ರಂದು 2 ಹಂತಗಳಲ್ಲಿ ಚುನಾವಣೆ ನಡೆಯಲಿದೆ.

‘ರಾಮಮಂದಿರ ಭೇಟಿಗೆ ಅವಕಾಶ’

ವಿವಾಹಿತ ಮಹಿಳೆಯರಿಗೆ ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ ವಾರ್ಷಿಕ ಆರ್ಥಿಕ ನೆರವು, ಕ್ವಿಂಟಲ್‌ಗೆ ₹ 3,100 ರಂತೆ ಭತ್ತ ಖರೀದಿ, ಬಡ ಕುಟುಂಬಗಳಿಗೆ ₹ 500 ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಸೇರಿದಂತೆ ಹಲವು ಭರವಸೆಗಳನ್ನು ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ನೀಡಿದೆ.

ಛತ್ತೀಸಗಢ ವಿಧಾನಸಭೆಯ ಮೊದಲ ಹಂತದ ಚುನಾವಣೆಗೆ ಕೇವಲ ನಾಲ್ಕು ದಿನಗಳು ಬಾಕಿ ಇರುವಾಗ ಈ ಪ್ರಣಾಳಿಕೆ ಬಿಡುಗಡೆ ಮಾಡಲಾಗಿದೆ. ರಾಜ್ಯದಲ್ಲಿ ಖಾಲಿ ಇರುವ ಒಂದು ಲಕ್ಷ ಸರ್ಕಾರಿ ಉದ್ಯೋಗಗಳನ್ನು ಎರಡು ವರ್ಷಗಳಲ್ಲಿ ಭರ್ತಿ ಮಾಡುವುದಾಗಿ, ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರ ಭೇಟಿಗೆ ರಾಜ್ಯದ ಜನರನ್ನು ಕರೆದೊಯ್ಯುವುದಾಗಿ ಕೂಡ ವಿರೋಧ ಪಕ್ಷ ಬಿಜೆಪಿ ಆಶ್ವಾಸನೆ ನೀಡಿದೆ.

‘ಛತ್ತೀಸಗಡಕ್ಕೆ ಮೋದಿ ಅವರ ಗ್ಯಾರಂಟಿ’ ಶೀರ್ಷಿಕೆಯ ಪ್ರಣಾಳಿಕೆಯನ್ನು ಅಮಿತ್ ಶಾ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ‘ಚುನಾವಣಾ ಪ್ರಣಾಳಿಕೆಯು ಬಿಜೆಪಿಗೆ ಪ್ರಣಾಳಿಕೆ ಮಾತ್ರವಲ್ಲ. ಅದು ನಮಗೆ ಸಂಕಲ್ಪ ಪತ್ರ’ ಎಂದರು.

ಪ್ರಣಾಳಿಕೆ ಭರವಸೆಗಳ ಬಗ್ಗೆ ವಿವರಿಸಿದ ಅವರು, ವಿವಾಹಿತ ಮಹಿಳೆಯರಿಗೆ ವರ್ಷಕ್ಕೆ ₹ 12,000 ಆರ್ಥಿಕ ನೆರವು ನೀಡಲಾಗುವುದು. ಅದೇ ರೀತಿ ದೀನ್‌ದಯಾಳ್ ಉಪಾಧ್ಯಾಯ ಕೃಷಿ ಮಜ್ದೂರ್ ಯೋಜನೆಯಡಿ ಭೂರಹಿತ ಕೃಷಿ ಕಾರ್ಮಿಕರಿಗೆ ವಾರ್ಷಿಕ ₹ 10,000 ನೀಡಲಾಗುವುದು ಎಂದರು.

ನುಡಿ–ಕಿಡಿ


ಭೂಪೇಶ್ ಬಘೆಲ್ ಅವರು ಕಾಂಗ್ರೆಸ್‌ನ ಪ್ರೀಪೇಯ್ಡ್ ಮುಖ್ಯಮಂತ್ರಿ. ಛತ್ತೀಸಗಢದಲ್ಲಿ ಅವರು ಮತ್ತೆ ಅಧಿಕಾರಕ್ಕೆ ಬಂದರೆ, ಎಟಿಎಂ ಕಾರ್ಡ್‌ನಂತೆ ಪಕ್ಷವು ಅವರನ್ನು ಬಳಸಿಕೊಂಡು ರಾಜ್ಯದ ಎಲ್ಲಾ ಹಣವನ್ನು ದೆಹಲಿಗೆ ಕೊಂಡೊಯ್ಯುತ್ತದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ


ಪ್ರತಿ ಜಿಲ್ಲೆಯಲ್ಲಿ ನವೋದಯ ಶಾಲೆಗಳನ್ನು ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ನಾವು ಕೇಳುತ್ತಲೇ ಬಂದಿದ್ದೇವೆ. ಒಂದು ಶಾಲೆ ಕೂಡ ಮಂಜೂರಾಗಲಿಲ್ಲ. ರಾಜ್ಯಕ್ಕೆ ಒಂದು ವೈದ್ಯಕೀಯ ಕಾಲೇಜನ್ನೂ ನೀಡಲಿಲ್ಲ. ಅವರಿಗೆ ಪಾಠ ಕಲಿಸುವ ಅವಶ್ಯಕತೆ ಇದೆ, ಇಲ್ಲದಿದ್ದರೆ ಅವರು ನಮ್ಮನ್ನು ನಿಯಂತ್ರಿಸುತ್ತಾರೆ.

ಕೆ. ಚಂದ್ರಶೇಖರ್ ರಾವ್, ತೆಲಂಗಾಣ ಮುಖ್ಯಮಂತ್ರಿ

ಲೂಟಿ ಮತ್ತು ಸುಳ್ಳುಗಳ ಪಕ್ಷ ಕಾಂಗ್ರೆಸ್. ಸೋದರಿಯರೇ, ಬೊಕ್ಕಸ ಖಾಲಿ ಎಂದು ಹೇಳುವುದೇ ಅದರ ಅಭ್ಯಾಸವಾಗಿದ್ದರೆ, ಸೋದರಿಯರೇ ಬೊಕ್ಕಸ ನಿಮ್ಮದೇ ಎಂದು ಬಿಜೆಪಿ ಘೋಷಿಸುತ್ತದೆ.

ಜ್ಯೋತಿರಾದಿತ್ಯ ಸಿಂಧಿಯಾ
ಕೇಂದ್ರದ ನಾಗರಿಕ ವಿಮಾನಯಾನ ಸಚಿವ

ಚುನಾವಣಾ ಕಣದಲ್ಲಿ

- **ರಾಜೀನಾಮೆ :** ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗೆ ಆಲೋಟ್ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಮಾಜಿ ಸಂಸದ ಮತ್ತು ಶಾಸಕ ಪ್ರೇಮಚಂದ್ ಗುಡ್ಡು ಅವರು ಕಾಂಗ್ರೆಸ್ ಪಕ್ಷಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ. ‘ನಾನು ರಾಜೀನಾಮೆ ನೀಡುವ ವಾತಾವರಣ ಸೃಷ್ಟಿಸಲಾಯಿತು’ ಎಂದು ಪಿಟಿಐ ಸುದ್ದಿಸಂಸ್ಥೆಗೆ ಅವರು ತಿಳಿಸಿದ್ದಾರೆ.
- **ಕಂಗನಾ ಉವಾಚ:** ಭಗವಂತ ಕೃಷ್ಣನ ಆಶೀರ್ವಾದ ಇದ್ದರೆ ತಾವು ಮುಂದಿನ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಬಾಲಿವುಡ್ ನಟಿ ಕಂಗನಾ ರಣಾವತ್ ಹೇಳಿದ್ದಾರೆ. ಗುಜರಾತ್‌ನ ದೇವಭೂಮಿ ದ್ವಾರಕಾ ಪಟ್ಟಣದಲ್ಲಿ ಸುಪ್ರಸಿದ್ಧ ದ್ವಾರಕಾಧೀಶ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಕೃಷ್ಣನ ಕೃಪೆ ಇದ್ದರೆ ಚುನಾವಣಾ ಕಣಕ್ಕಿಳಿಯುವುದಾಗಿ ತಿಳಿಸಿದ್ದಾರೆ.
- **ಎಐಎಂಐಎಂ ಸ್ಪರ್ಧೆ:** ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷವು ಒಂಬತ್ತು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಹೇಳಿದ್ದಾರೆ. ವರದಿಗಾರರ ಜತೆ ಮಾತನಾಡಿದ ಅವರು, ಈ ಹಿಂದೆ ಸ್ಪರ್ಧಿಸಿದ್ದ 7 ಸ್ಥಾನಗಳು ಅಲ್ಲದೆ ರಾಜೇಂದ್ರನಗರ್ ಮತ್ತು ಜ್ಯುಬಿಲಿ ಹಿಲ್ಸ್‌ನಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದರು. ಜ್ಯುಬಿಲಿ ಹಿಲ್ಸ್‌ನಲ್ಲಿ ಮಾಜಿ ಕ್ರಿಕೆಟಿಗ ಅಜರುದ್ದೀನ್ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.
- **ದಿಗ್ವಿಜಯ್ ಸಿಂಗ್ ವಿಶ್ವಾಸ:** ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಉತ್ತಮ ಸಾಧನೆ ಮಾಡಲಿದೆ ಎಂಬ ವಿಶ್ವಾಸವಿದೆ. ಈಗ ಕೇಂದ್ರ ಸಚಿವರಾಗಿರುವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಗೈರು ಪರಿಣಾಮ ಬೀರುವುದಿಲ್ಲ ಎಂದು ರಾಜ್ಯಸಭೆ ಸದಸ್ಯ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ. ಕಳೆದ ಉಪ ಚುನಾವಣೆಯಲ್ಲಿ (2020) ಕಾಂಗ್ರೆಸ್ ಪಕ್ಷವೇ ಹೆಚ್ಚಿನ ಸ್ಥಾನಗಳನ್ನು ಗೆದ್ದಿತ್ತು. ಎಲ್ಲ ಗೆಲುವಿಗೂ ಅವರೇ ಕಾರಣರು ಎಂಬುದು ಸರಿಯಲ್ಲ ಎಂದಿದ್ದಾರೆ.
- **ಬಿಆರ್‌ಎಸ್‌ಗೆ ಸೇರ್ಪಡೆ:** ತೆಲುಗುದೇಶಂ ಪಕ್ಷದ ತೆಲಂಗಾಣ ಘಟಕದ ಮಾಜಿ ಅಧ್ಯಕ್ಷ ಕಾಸನಿ ಜ್ಞಾನೇಶ್ವರ್ ಅವರು ಶುಕ್ರವಾರ ಬಿಆರ್‌ಎಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ಹಾಜರಿದ್ದ ಮುಖ್ಯಮಂತ್ರಿ ಕೆ .ಚಂದ್ರಶೇಖರ್ ರಾವ್ ಅವರು, ಜ್ಞಾನೇಶ್ವರ್ ಮತ್ತು ಅವರ ಬೆಂಬಲಿಗರಿಗೆ ಪಕ್ಷದಲ್ಲಿ ಉತ್ತಮ ಭವಿಷ್ಯವಿದೆ ಎಂದು ಭರವಸೆ ಇತ್ತರು.

ಕಾಂಗ್ರೆಸ್‌ಗೆ ಬೇಷರತ್ ಬೆಂಬಲ: ಶರ್ಮಿಳಾ

ವೈ.ಎಸ್. ಶರ್ಮಿಳಾ

ಹೈದರಾಬಾದ್ (ಪಿಟಿಐ): ನವೆಂಬರ್ 30ರಂದು ನಡೆಯಲಿರುವ ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸದಿರಲು ಮತ್ತು ಪ್ರತಿಪಕ್ಷ ಕಾಂಗ್ರೆಸ್‌ಗೆ ಬೇಷರತ್ತಾಗಿ ಬೆಂಬಲ ನೀಡಲು ವೈಎಸ್‌ಆರ್ ತೆಲಂಗಾಣ ಪಕ್ಷ (ವೈಎಸ್‌ಆರ್‌ಟಿಪಿ) ನಿರ್ಧರಿಸಿದೆ ಎಂದು ಪಕ್ಷದ ಅಧ್ಯಕ್ಷೆ ವೈ.ಎಸ್. ಶರ್ಮಿಳಾ ಶುಕ್ರವಾರ ಇಲ್ಲಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್‌ನ ಭ್ರಷ್ಟ ಮತ್ತು ಜನ ವಿರೋಧಿ ಆಡಳಿತವನ್ನು ಕೊನೆಗಾಣಿಸಲು ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಿರುವುದಾಗಿ ಹೇಳಿದರು. ಈ ಕುರಿತು ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿರುವುದಾಗಿಯೂ ತಿಳಿಸಿದರು.

ರಾಜ್ಯದಲ್ಲಿ ಆಡಳಿತ ಬದಲಾವಣೆಯ ಸಾಧ್ಯತೆಗಳು ಇರುವಾಗ ಬಿಆರ್‌ಎಸ್ ವಿರೋಧಿ ಮತಗಳನ್ನು ಒಡೆಯಲು ತಾವು ಬಯಸುವುದಿಲ್ಲ ಎಂದ ಅವರು ಕಾಂಗ್ರೆಸ್ ನಾಯಕರು ಮತ್ತು ಅವರ ಕಾರ್ಯಕ್ರಮಗಳ ಬಗ್ಗೆ ಅತ್ಯಂತ ಗೌರವವಿದೆ. ಕಾಂಗ್ರೆಸ್‌ನ ಮತಗಳನ್ನು ಒಡೆದು ಆಡಳಿತಾರೂಢ ಬಿಆರ್‌ಎಸ್‌ಗೆ ಅನುಕೂಲ ಮಾಡಿಕೊಡಲು ಬಯಸುವುದಿಲ್ಲ ಎಂದು ವಿವರಿಸಿದರು.

ಅವಿಭಜಿತ ಆಂಧ್ರಪ್ರದೇಶದಲ್ಲಿ ತಮ್ಮ ತಂದೆ ದಿವಂಗತ ರಾಜಶೇಖರ ರೆಡ್ಡಿ ಅವರು ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದಿದ್ದರು ಎಂದರು.

‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಪಾದಯಾತ್ರೆಯು ಕರ್ನಾಟಕದಲ್ಲಿ ಪರಿಣಾಮ ಬೀರಿದೆ. ತೆಲಂಗಾಣದಲ್ಲೂ ಅದು ಪರಿಣಾಮ ಬೀರುವ ಹಂತದಲ್ಲಿರುವಾಗ ಕಾಂಗ್ರೆಸ್‌ಗೆ ನೋವು ಉಂಟು ಮಾಡಲು ಬಯಸುವುದಿಲ್ಲ. ಕಾಂಗ್ರೆಸ್ ನಾಯಕರು ನನಗೆ ಹೊರಗಿನವರಲ್ಲ’ ಎಂದು ವಿವರಣೆ ನೀಡಿದರು.

ಕಾಂಗ್ರೆಸ್ ಮತಗಳನ್ನು ಒಡೆದು ಚಂದ್ರಶೇಖರ್ ರಾವ್ ಅವರು ಮತ್ತೆ ಮುಖ್ಯಮಂತ್ರಿಯಾಗುವಂತೆ ಮಾಡಿದರೆ, ಇತಿಹಾಸ ತಮ್ಮನ್ನು ಕ್ಷಮಿಸುವುದಿಲ್ಲ ಎಂಬ ಹೆದರಿಕೆ ಇರುವುದಾಗಿಯೂ ಅವರು ಹೇಳಿದರು. ಇದಕ್ಕೂ ಮೊದಲು ಶರ್ಮಿಳಾ ಅವರು, ತಮ್ಮ ಪಕ್ಷವು ಕಾಂಗ್ರೆಸ್ ಜತೆ ವಿಲೀನಗೊಳ್ಳುವ ಕುರಿತು ಅಥವಾ ಚುನಾವಣಾಪೂರ್ವ ಸೀಟು ಹಂಚಿಕೆ ಬಗ್ಗೆ ಆ ಪಕ್ಷದ ಹೈಕಮಾಂಡ್ ಜತೆ ಚರ್ಚೆ ನಡೆಸಿದ್ದರು. ಆದರೆ ಅದು ಫಲಕಾರಿಯಾಗಲಿಲ್ಲ.

‘ಇ.ಡಿ, ಸಿಬಿಐ ಬಿಜೆಪಿಯ ಸೇನಾನಿಗಳು’

ವಿರೋಧಪಕ್ಷಗಳ ನಾಯಕರನ್ನು ಹೆದರಿಸುವುದೇ ಮುಖ್ಯ ಗುರಿ: ಕಾಂಗ್ರೆಸ್

ನವದೆಹಲಿ (ಪಿಟಿಐ): ‘ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆ ಬಿಜೆಪಿಗೆ ಪ್ರಚಾರಕರಂತೆ ಮತ್ತು ಮುಂಚೂಣಿ ಸೇನಾನಿಗಳಂತೆ ಕೆಲಸ ಮಾಡುತ್ತಿವೆ. ವಿರೋಧಪಕ್ಷದ ನಾಯಕರನ್ನು ಹೆದರಿಸಿ ಆಡಳಿತ ಪಕ್ಷವನ್ನು ಸೇರುವಂತೆ ಮಾಡುವ ಕಾರ್ಯವನ್ನು ಇವುಗಳಿಗೆ ನಿಗದಿಪಡಿಸಲಾಗಿದೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದೆ.

ಚಿಟ್‌ಫಂಡ್ ಪ್ರಕರಣ ಇತ್ಯರ್ಥಕ್ಕೆ ಸಂಬಂಧಿಸಿದಂತೆ ₹ 15 ಲಕ್ಷ ಲಂಚವನ್ನು ಪಡೆದಿರುವ ಆರೋಪದ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿ ಮತ್ತು ಸಹಚರರನ್ನು ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳವು (ಎಸಿಬಿ) ಗುರುವಾರ ಬಂಧಿಸಿತ್ತು. ಆ ಬಳಿಕ ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು, ಭ್ರಷ್ಟಾಚಾರ ತಡೆಯುವ ಅಧಿಕಾರಿಗಳೇ ಲಂಚವನ್ನು ಪಡೆಯುತ್ತಿದ್ದಾರೆ. ರಾಜಸ್ಥಾನದಲ್ಲಿ ₹ 15 ಲಕ್ಷ ಲಂಚ ಪಡೆಯುವಾಗಲೇ ಇ.ಡಿಯ ಇಬ್ಬರು ಅಧಿಕಾರಿಗಳು ಸಿಕ್ಕಿಬಿದ್ದಿದ್ದಾರೆ ಎಂದು ಹೇಳಿದರು.

ಜಾರಿ ನಿರ್ದೇಶನಾಲಯದ ದರ ಪಟ್ಟಿಯನ್ನು ಮೋದಿ ಸರ್ಕಾರವು ಸಾರ್ವಜನಿಕವಾಗಿ ಬಹಿರಂಗಪಡಿಸ ಬೇಕು. ಸಣ್ಣ ಮಟ್ಟದ ಅಧಿಕಾರಿಗಳ ದರ ಪಟ್ಟಿಯೇ ₹15 ಲಕ್ಷ ಇದ್ದರೆ, ಅವರ ಮೇಲಾಧಿಕಾರಿಗಳ ದರ ಹೇಗಿರ ಬಹುದು ಎಂದು ಅವರು ಪ್ರಶ್ನಿಸಿದರು.

ಇ.ಡಿ, ಸಿಬಿಐ ಮತ್ತು ಐಟಿ ಇಲಾಖೆ ಇವೆಲ್ಲಾ ಬಿಜೆಪಿ ‘ ಸರ್ಕಾರದ ಪ್ರಚಾರಕಗಳಾಗಿವೆ’ ಎಂದು ದೂರಿದರು.

‘ಇವರಿಗೆ ಕೆಲಸದ ಗುರಿ ನೀಡಲಾಗಿದೆ. ವಿರೋಧಪಕ್ಷದ ನಾಯಕರನ್ನು ಹೆದರಿಸುವುದು ಮತ್ತು ಅವರು ಬಿಜೆಪಿ ಸೇರುವಂತೆ ಮಾಡುವುದೇ ಇವರ ಗುರಿಯಾಗಿದೆ. ಇದು ಮೋದಿಜಿ ಅವರ ಟೂಲ್‌ಕಿಟ್’ ಎಂದು ಆರೋಪಿಸಿದರು.

ದೇಶದ ತನಿಖಾ ಸಂಸ್ಥೆಗಳು ಪ್ರಬಲ ಮತ್ತು ನಿರ್ಭಯವಾಗಿರಬೇಕು ಎಂದರು.

‘ನಾಯಕರು ವಿರೋಧಪಕ್ಷಗಳಲ್ಲಿ ಇರುವವರೆಗೆ ಅವರು ಭ್ರಷ್ಟರು. ಬಿಜೆಪಿಯನ್ನು ಸೇರುತ್ತಿದ್ದಂತೆಯೇ ಅವರು ಶುದ್ಧಹಸ್ತರಾಗುತ್ತಾರೆ. ಈ ತನಿಖಾ ಸಂಸ್ಥೆಗಳನ್ನು ಬಲಪಡಿಸಬೇಕೇ ಹೊರತು ನಿಸ್ಸಹಾಯಕವಾಗಿ ಮಾಡಬಾರದು ಎಂದು ಮೋದಿ ಸರ್ಕಾರಕ್ಕೆ ಹೇಳಲು ಬಯಸುತ್ತೇವೆ’ ಎಂದು ನುಡಿದರು.

ತನ್ನ ಕೆಲಸವನ್ನು ಅಡ್ಡಿ ಆತಂಕಗಳಿಲ್ಲದೆ ಮಾಡುತ್ತಿರುವ ಭ್ರಷ್ಟಾಚಾರ ನಿಗ್ರಹ ದಳವು ರಾಜಸ್ಥಾನದಲ್ಲಿ ಇ.ಡಿ. ಅಧಿಕಾರಿಗಳು ಲಂಚ ಪಡೆಯುವಾಗ ಬಂಧಿಸಿದೆ. ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿರುವ ಸಂಸ್ಥೆಗಳನ್ನು ಬಿಜೆಪಿ ಸರ್ಕಾರವು ತುಳಿಯುತ್ತಿದೆ. ಇದು ರಾಷ್ಟ್ರವು ಎದುರಿಸುತ್ತಿರುವ ಗಂಭೀರ ಬೆದರಿಕೆ ಎಂದು ಖೇರಾ ಅಭಿಪ್ರಾಯ ಪಟ್ಟರು.

‘ಬಿಜೆಪಿಯೇತರ ರಾಜ್ಯಗಳಲ್ಲಿ ನಾಯಕರನ್ನು ಹೆದರಿಸಲು ಅವರು ತಮ್ಮ ಮುಂಚೂಣಿ ಸೇನಾನಿಗಳನ್ನು ಕಳುಹಿಸುತ್ತಾರೆ’ ಎಂದು ಆಪಾದಿಸಿದರು.

ಜಾರಿ ನಿರ್ದೇಶನಾಲಯದ ಅಧಿಕಾರಿ ನವಲ್ ಕಿಶೋರ್ ಮೀನಾ ಮತ್ತು ಕಿರಿಯ ಸಹಾಯಕ ಬಾಬುಲಾಲ್ ಮೀನಾ ಅವರನ್ನು ಬಂಧಿಸಲಾಗಿದೆ ಎಂದು ರಾಜಸ್ಥಾನ ಎಸಿಬಿಯ ಹೇಳಿಕೆ ತಿಳಿಸಿದೆ.

ನವಲ್ ಕಿಶೋರ್ ಅವರನ್ನು ಅಮಾನತುಗೊಳಿಸಿರುವಾಗಿ ಮತ್ತು ಆರೋಪಿಗಳಿಬ್ಬರ ವಿರುದ್ಧ ಹಣ ಅಕ್ರಮ ವರ್ಗಾವಣೆ ತನಿಖೆ ಆರಂಭಿಸಿರುವುದಾಗಿ ಇ.ಡಿ. ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಪಕ್ಷಗಳ ನಾಯಕರ ವಿರುದ್ಧವೇ ಹೆಚ್ಚು ಪ್ರಕರಣ: ಟೀಕೆ

ಗುವಾಹಟಿ ವರದಿ: ಕಳೆದ ನಾಲ್ಕು ವರ್ಷಗಳಲ್ಲಿ ಸಿಬಿಐ ಮತ್ತು ಇ.ಡಿ ದಾಖಲಿಸಿರುವ ಶೇ 95 ಪ್ರಕರಣಗಳು ವಿರೋಧಪಕ್ಷಗಳ ನಾಯಕರ ವಿರುದ್ಧವೇ ಇದೆ ಎಂದು ಅಸ್ಸಾಂನಲ್ಲಿ ಪ್ರತಿಪಕ್ಷಗಳು ಟೀಕಿಸಿವೆ.

ಬಿಜೆಪಿಯ ಯಾವುದೇ ನಾಯಕರ ವಿರುದ್ಧ ಒಂದೂ ಪ್ರಕರಣ ಇಲ್ಲ ಎಂದು ಹೇಳಿವೆ. ಆದರೆ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಈ ಎರಡೂ ತನಿಖಾ ಸಂಸ್ಥೆಗಳು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ನಾಯಕರ ವಿರುದ್ಧ ಪ್ರಕರಣ ದಾಖಲಿಸಿದ್ದವು ಎಂದು ಸಂಯುಕ್ತ ವಿರೋಧ ಪಕ್ಷಗಳ ವೇದಿಕೆ ಹೇಳಿದೆ. ಈ ವೇದಿಕೆಯಲ್ಲಿ 15 ವಿರೋಧ ಪಕ್ಷಗಳಿವೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟಿಎಂಸಿ ಅಸ್ಸಾಂ ಘಟಕದ ಅಧ್ಯಕ್ಷ ರಿಪುನ್ ಬೋರಾ ಅವರು ಸಿಬಿಐ ಮತ್ತು ಇಡಿಯನ್ನು ಬಿಜೆಪಿಯು ತನ್ನ ರಾಜಕೀಯ ವೈರಿಗಳನ್ನು ನಿಯಂತ್ರಿಸುವ ಸಾಧನವಾಗಿ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು.

ಗಾಜಾ ಮೇಲೆ ಇಸ್ರೇಲ್ ಬಿಗಿ ಹಿಡಿತ

ಯುದ್ಧ ವಿಸ್ತರಣೆ: ನೆತನ್ಯಾಹುಗೆ ಎಚ್ಚರಿಕೆ ನೀಡಿದ ಹಿಜ್ಬುಲ್ಲಾ ಸಂಘಟನೆ

ಗಾಜಾ ಪಟ್ಟಿಯ ಗಡಿಯಲ್ಲಿ ಬೀಡುಬಿಟ್ಟಿರುವ ಇಸ್ರೇಲ್ ಸೇನೆಯ ಯೋಧರು —ಎಎಫ್‌ಪಿ ಚಿತ್ರ

ಜೆರುಸಲೇಂ (ಎಪಿ): ಮಾನವೀಯ ದೃಷ್ಟಿಯಿಂದ ಯುದ್ಧಕ್ಕೆ ವಿರಾಮ ನೀಡುವ ಸಂಬಂಧ ಒತ್ತಡ ಹೇರಲು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು, ಶುಕ್ರವಾರ ಇಸ್ರೇಲ್‌ಗೆ ಭೇಟಿ ನೀಡಿದ್ದಾರೆ. ಇದರ ಬೆನ್ನಲ್ಲೇ ಗಾಜಾ ಪಟ್ಟಿಯನ್ನು ಸುತ್ತುವರಿದಿರುವ ಇಸ್ರೇಲ್ ಸೇನಾ ಪಡೆಗಳು ತಮ್ಮ ನಿಯಂತ್ರಣವನ್ನು ಮತ್ತಷ್ಟು ಬಿಗಿಗೊಳಿಸಿವೆ.

ಇಸ್ರೇಲ್ ದಾಳಿಗೆ ಗಾಜಾ ಪಟ್ಟಿ ನಲುಗಿಹೋಗಿದೆ. ಅಲ್ಲಿನ ಜನರಿಗೆ ಜೀವನಾವಶ್ಯಕ ವಸ್ತುಗಳ ಪೂರೈಕೆಯಲ್ಲೂ ವ್ಯತ್ಯಯವಾಗಿದೆ. ಹಾಗಾಗಿ, ಮಾನವೀಯ ವಿರಾಮ ಘೋಷಿಸಿ ಹೆಚ್ಚಿನ ನೆರವು ಕಲ್ಪಿಸಬೇಕು ಎಂದು ಜಾಗತಿಕಮಟ್ಟದಲ್ಲಿ ಒತ್ತಡ ಹೆಚ್ಚುತ್ತಿದೆ. ಇಸ್ರೇಲ್ ದಾಳಿಯಿಂದ ಹೆಚ್ಚುತ್ತಿರುವ ಸಾವು, ನೋವಿನ ಬಗ್ಗೆಯೂ ಟೀಕೆ ವ್ಯಕ್ತವಾಗುತ್ತಿದೆ.

ಟೆಲ್ ಅವೀವ್‌ಗೆ ಬಂದಿಳಿದ ಬ್ಲಿಂಕನ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ಉನ್ನತಮಟ್ಟದ ಅಧಿಕಾರಿಗಳ ಜತೆ ಚರ್ಚಿಸಿದರು. ಯುದ್ಧ ಆರಂಭವಾದ ಬಳಿಕ ಬ್ಲಿಂಕನ್ ಅವರದ್ದು ಇದು ಮೂರನೇ ಭೇಟಿಯಾಗಿದೆ.

‘ಯುದ್ಧಕ್ಕೆ ಮಾನವೀಯ ವಿರಾಮ ಘೋಷಿಸಲು ಇಸ್ರೇಲ್ ಮುಂದಾಗಬೇಕು. ಆಗಷ್ಟೇ ಪ್ಯಾಲೆಸ್ಟೀನ್ ಪ್ರದೇಶಕ್ಕೆ ಹೆಚ್ಚಿನ ನೆರವು ಕಲ್ಪಿಸಲು ಅನುಕೂಲವಾಗಲಿದೆ. ಜತೆಗೆ, ಒತ್ತೆಯಾಳುಗಳಾಗಿರುವ ಇಸ್ರೇಲ್ ಪ್ರಜೆಗಳ ಸುರಕ್ಷಿತ ಬಿಡುಗಡೆ ಸಾಧ್ಯ’ ಎಂದು ಬ್ಲಿಂಕನ್ ಹೇಳಿದ್ದಾರೆ.

ಇಸ್ರೇಲ್‌ಗೆ ಎಚ್ಚರಿಕೆ ನೀಡಿದ ಹಿಜ್ಬುಲ್ಲಾ: ಹಮಾಸ್ ಪರ ಇರುವ ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರ ನಾಯಕ ಹಸನ್ ನಸ್ರಲ್ಲಾ ಯುದ್ಧ ಶುರುವಾದ ಬಳಿಕ ಮೊದಲ ಬಾರಿಗೆ ಸಾರ್ವಜನಿಕವಾಗಿ ಮಾತನಾಡಿದ್ದಾರೆ. ಯುದ್ಧ ವಿಸ್ತರಿಸುತ್ತಿರುವ ಇಸ್ರೇಲ್‌ಗೆ ಎಚ್ಚರಿಕೆ ನೀಡಿದ್ದಾರೆ. ಅಮೆರಿಕದ ನಡೆಗೂ ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದ ಲೆಬನಾನ್ ಪ್ರದೇಶದಲ್ಲಿಯೂ ಸಂಘರ್ಷ ಸೃಷ್ಟಿಯಾಗಬಹುದು ಎಂದು ಆತಂಕ ಹೆಚ್ಚಿದೆ.

ತುತ್ತಿನ ಚೀಲಕ್ಕೂ ಕುತ್ತು: ಜೆರುಸಲೇಂ (ಎಎಫ್‌ಪಿ): ಪ್ರತಿದಿನವೂ ಪ್ರವಾಸಿಗರ ಗೌಜು ಗದ್ದಲದಿಂದ ತುಂಬಿರುತ್ತಿದ್ದ ಜೆರುಸಲೇಂನ ಓಲ್ಡ್ ಸಿಟಿ ಪ್ರದೇಶ ಈಗ ಭಣಗುಡುತ್ತಿದೆ. ಇಸ್ರೇಲ್–ಹಮಾಸ್ ನಡುವಿನ ಯುದ್ಧದ ಬಿಸಿ ಇಲ್ಲಿನ ಅಂಗಡಿಗಳ ವ್ಯಾಪಾರಕ್ಕೆ ತಟ್ಟಿದೆ.

ಮಕ್ಕಳ ಆಕ್ರಂದನ

ಬುರೇಜ್ ಶಿಬಿರ (ಗಾಜಾ ಪಟ್ಟಿ) (ಎಪಿ): ‘ಮೊಗದಲ್ಲಿ ಬೂದಿ ಮೆತ್ತಿಕೊಂಡು ನೆಲದ ಮೇಲೆ ನಿಸ್ತೇಜವಾಗಿ ಮಲಗಿರುವ ರಕ್ತಸಿಕ್ತ ಮಕ್ಕಳು. ಅವರ ಚಿಕಿತ್ಸೆಯಲ್ಲಿ ನಿರತರಾದ ವೈದ್ಯರು. ಅಲ್ಲಿಯೇ ಆಮ್ಲಜನಕದ ಮಾಸ್ಕ್ ಧರಿಸಿ ಸಾವು–ಬದುಕಿನ ನಡುವೆ ಸೆಣಸಾಟ ನಡೆಸುತ್ತಿರುವ ಪುಟ್ಟ ಬಾಲಕ. ಪುತ್ರನ ಸಂಕಟ ನೋಡುತ್ತಾ ಪಕ್ಕದಲ್ಲಿಯೇ ಬಿಕ್ಕಳಿಸುತ್ತಾ ಕುಳಿತ ಅಪ್ಪ...’

ಕೇಂದ್ರ ಗಾಜಾ ಪಟ್ಟಿಯ ಅಲ್-ಅಕ್ಸಾ ಆಸ್ಪತ್ರೆಯೊಳಗೆ ಹೋದರೆ ಇಂತಹ ಹತ್ತಾರು ಚಿತ್ರಣಗಳು ಕಣ್ಣಿಗೆ ಕಾಣುತ್ತವೆ. ಆಸ್ಪತ್ರೆಯು ಗಾಯಾಳುಗಳಿಂದ ತುಂಬಿ ಹೋಗಿದ್ದು, ವೈದ್ಯರು ಮಕ್ಕಳಿಗೆ ಚಿಕಿತ್ಸೆ ನೀಡಲು ಹರಸಾಹಸಪಡುತ್ತಿದ್ದಾರೆ. ಇಸ್ರೇಲ್ ನಡೆಸಿದ ದಾಳಿಗೆ ಬುರೇಜ್ ಶಿಬಿರ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನೆಲಸಮಗೊಂಡಿದೆ.

ಕದನ ವಿರಾಮಕ್ಕೆ ನೆತನ್ಯಾಹು ನಕಾರ

ಹಮಾಸ್ ಬಂಡುಕೋರರು ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿರುವ ಇಸ್ರೇಲ್‌ನ 240 ಪ್ರಜೆಗಳನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಬೇಕು. ಅಲ್ಲಿಯವರೆಗೂ ತಾತ್ಕಾಲಿಕ ಕದನ ವಿರಾಮ ಘೋಷಿಸುವುದಿಲ್ಲ ಎಂದು ಪ್ರಧಾನಿ ನೆತನ್ಯಾಹು ಘೋಷಿಸಿದ್ದಾರೆ.

ಬ್ಲಿಂಕನ್ ಜತೆ ಕೆಲವೊತ್ತು ಸಭೆ ನಡೆಸಿದ ಬಳಿಕ ಅವರು ಈ ಹೇಳಿಕೆ ಪ್ರಕಟಿಸಿದ್ದಾರೆ. ಹಮಾಸ್ ನಿರ್ಮೂಲನೆಗೆ ಇಸ್ರೇಲ್ ತನ್ನ ಎಲ್ಲಾ ಶಕ್ತಿ ಸಾಮರ್ಥ್ಯ ಪ್ರದರ್ಶಿಸಲು ಸಿದ್ಧವಿದೆ ಎಂದು ಹೇಳಿದ್ದಾರೆ.

ಪ್ಯಾಲೆಸ್ಟೀನಿಯರ ಬವಣೆ ನೆನೆದು ಜಬೇರ್ ಭಾವುಕ

ಕಾನ್‌ಕನ್ (ಮೆಕ್ಸಿಕೊ), (ಎಎಫ್‌ಪಿ): ಡಬ್ಲ್ಯುಟಿಎ ಫೈನಲ್ಸ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಬುಧವಾರ ಮರ್ಕೆತಾ ವೊಂದ್ರುಸೋವಾ ಅವರನ್ನು ಸೋಲಿಸಿದ ನಂತರ ಟ್ಯುನೀಷಿಯಾದ ಆಟಗಾರ್ತಿ ಆನ್ಸ್ ಜಬೇರ್ ಅವರು ಪ್ಯಾಲೆಸ್ಟೀನ್ ಜನರ ಬವಣೆ ನೆನೆದು ಭಾವುಕರಾದರು. ತಮಗೆ ಬರುವ ಬಹುಮಾನ ಮೊತ್ತದ ಒಂದು ಭಾಗವನ್ನು ಪ್ಯಾಲೆಸ್ಟೀನ್ ಜನತೆಗೆ ನೀಡುವುದಾಗಿಯೂ ಪ್ರಕಟಿಸಿದರು.

ಋತುವಿನ ಈ ಕೊನೆಯ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಜಬೇರ್ 6–4, 6–3 ರಿಂದ ವೊಂದ್ರುಸೋವಾ ಅವರನ್ನು ಸೋಲಿಸಿದ್ದರು. ವಿಂಬಲ್ಡನ್ ಫೈನಲ್‌ನಲ್ಲಿ ಅನುಭವಿಸಿದ ಸೋಲಿಗೆ ಸೇಡನ್ನೂ ತೀರಿಸಿಕೊಂಡಿದ್ದರು.

‘ಈ ಗೆಲುವಿನಿಂದ ಸಂಸತವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನಾನು ಖುಷಿಯಿಂದೇನೂ ಇಲ್ಲ. ವಿಶ್ವದ ವಿದ್ಯಮಾನಗಳು ನನ್ನನ್ನು ಸಮಾಧಾನದಿಂದ ಇರಲು ಬಿಡುತ್ತಿಲ್ಲ’ ಎಂದು ಕಣ್ಣೀರನ್ನು ಒರೆಸಿ ಮೈಕ್ರೊಫೋನ್‌ನಿಂದ ದೂರ ಸರಿದರು.

ನಂತರ ಸಾವರಿಸಿಕೊಂಡು ‘ಗಾಜಾದಲ್ಲಿ ಮಕ್ಕಳು, ಶಿಶುಗಳು ಪ್ರತಿನಿತ್ಯ ಸಾಯುತ್ತಿರುವುದನ್ನು ನೋಡಿ ಸಂಕಟವಾಗುತ್ತಿದೆ. ಹೀಗಾಗಿ ನನಗೆ ಬಹುಮಾನ ಮೊತ್ತದಲ್ಲಿ ಒಂದು ಭಾಗವನ್ನು ಪ್ಯಾಲೆಸ್ಟೀನಿಯರಿಗೆ ನೀಡುವೆ’ ಎಂದು ಹೇಳಿದರು.

ದೆಹಲಿ–ಎನ್‌ಸಿಆರ್ ವಲಯ: ಕಠಿಣ ನಿಯಮಗಳ ಜಾರಿ ಮುಂದೂಡಿಕೆ

ಗಂಭೀರ ಹಂತ ತಲುಪಿದ ವಾಯುಗುಣಮಟ್ಟ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಉಪನಗರಗಳಲ್ಲಿ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) ಶುಕ್ರವಾರ ಗಂಭೀರ ಎಂದು ಪರಿಗಣಿಸಲಾಗುವ ಹಂತವನ್ನು ಮುಟ್ಟಿತು.

ಇದರ ಹಿಂದೆಯೇ ದೆಹಲಿ ಸರ್ಕಾರವು ತುರ್ತು ಪರಿಶೀಲನಾ ಸಭೆಯನ್ನು ನಡೆಸಿತು. ಆದರೆ, ವಾಯುಗುಣಮಟ್ಟ ನಿರ್ವಹಣಾ ಆಯೋಗವು (ಸಿಎಕ್ಯೂಎಂ) ಕಠಿಣ ಕ್ರಮಗಳನ್ನು ಜಾರಿಗೊಳಿಸುವ ಮೊದಲು ಇನ್ನಷ್ಟು ದಿನ ಪರಿಸ್ಥಿತಿ ಗಮನಿಸಲು ನಿರ್ಧರಿಸಿತು.

ದಟ್ಟ ಮತ್ತು ಕಪ್ಪು ಹೊಗೆ ರಾಜಧಾನಿಯ ವಾತಾವರಣವನ್ನು ಆವರಿಸಿದ್ದು, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸೂಚನೆ ನೀಡಿತು. ಇದರ ಬೆನ್ನಲ್ಲೇ ಅನೇಕ ನಿವಾಸಿಗಳು ಮನೆಗಳಲ್ಲಿಯೇ ಉಳಿದರು. ಬಹುತೇಕ ಜನರು ಮಾಸ್ಕ್ ಧರಿಸಿ ಹೊರನಡೆದರು. ಆದರೆ, ವಾಪಸು ಬರುವಾಗ ಹೆಚ್ಚಿನವರಿಗೆ ಕೆಮ್ಮು, ತಲೆನೋವು ಕಾಣಿಸಿಕೊಂಡರೆ, ಕಣ್ಣುಗಳು ಕೆಂಪಗಾಗಿದ್ದವು.

ಪಂಜಾಬ್ ಮತ್ತು ಹರಿಯಾಣದ ಕೆಲವೆಡೆ ಕೃಷಿ ತ್ಯಾಜ್ಯ ಸುಡುವಿಕೆ ಹಾಗೂ ವಾಹನಗಳು ಮತ್ತು ಕೈಗಾರಿಕೆಗಳು ಹೊರಸೂಸುವ ಕಪ್ಪುಹೊಗೆಯು ವಾತಾವರಣವನ್ನು ಸೇರಿ ವಾಯು ಗುಣಮಟ್ಟದ ಸೂಚ್ಯಂಕ ಗಂಭೀರ ಹಂತ ತಲುಪಲು ಕಾರಣವಾಯಿತು. ದೆಹಲಿ–ಎನ್‌ಸಿಆರ್ ವಲಯದಲ್ಲಿ ಇದರ ಪರಿಣಾಮ ಹೆಚ್ಚಾಗಿ ಕಾಣಿಸಿಕೊಂಡಿತು.

ತಲೆನೋವು ಹಾಗೂ ಕಣ್ಣಿನಲ್ಲಿ ನೀರು ಕಾಣಿಸಿಕೊಂಡ ಕಾರಣ ಹಲವು ವಿದ್ಯಾರ್ಥಿಗಳು ಬೆಳಿಗ್ಗೆಯೇ ಮನೆಗಳಿಗೆ ಮರಳಿದರು. ಬೆಳಿಗ್ಗೆ 500 ಮೀಟರ್ ಹತ್ತಿರದ ದೃಶ್ಯವು ಸ್ಪಷ್ಟವಾಗಿ ಕಾಣದ ಸ್ಥಿತಿ ಇತ್ತು ಎಂದು ಶಿಕ್ಷಕಿಯೊಬ್ಬರು ಪ್ರತಿಕ್ರಿಯಿಸಿದರು.

ಶಾಲೆಗಳಿಗೆ ರಜೆ: ಕಲುಷಿತ ವಾತಾವರಣದ ಹಿನ್ನೆಲೆಯಲ್ಲಿ ದೆಹಲಿ ಸರ್ಕಾರ ಪ್ರಾಥಮಿಕ ಶಾಲೆಗಳಿಗೆ ಈ ವಾರ ರಜೆ ಘೋಷಿಸಿತ್ತು. ರಜೆ ಮುಂದುವರಿಸುವ ಕುರಿತು ಸೋಮವಾರ ತೀರ್ಮಾನ ಕೈಗೊಳ್ಳುವ ಸಂಭವವಿದೆ. ನೊಯ್ಡಾ, ಗ್ರೇಟರ್ ನೋಯ್ಡಾ, ಗಾಜಿಯಾಬಾದ್ ಪ್ರದೇಶಗಳಲ್ಲಿ ಪರಿಸ್ಥಿತಿ ಗಂಭೀರವಾಗಿದೆ.

ತುರ್ತು ಕ್ರಮ: ಎನ್‌ಜಿಟಿ ಸೂಚನೆ

ನವದೆಹಲಿ (ಪಿಟಿಐ): ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) ಕಳಪೆ, ತೀವ್ರ ಕಳಪೆಮಟ್ಟದಲ್ಲಿರುವ ರಾಜ್ಯಗಳಲ್ಲಿ ತಕ್ಷಣದ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್‌ಜಿಟಿ) ರಾಜ್ಯಗಳಿಗೆ ಸೂಚಿಸಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ವಿವಿಧ ನಗರಗಳಿಗೆ ಅನ್ವಯಿಸಿ ಬಿಡುಗಡೆ ಮಾಡಿರುವ ಅ. 20 ಮತ್ತು ನವೆಂಬರ್ 1ರ ಅವಧಿಯ ವಾಯು ಗುಣಮಟ್ಟ ವಾರ್ತಾಪತ್ರವನ್ನು ಪರಿಗಣಿಸಿ ನ್ಯಾಯಾಧೀಕರಣವು ಈ ಸೂಚನೆಯನ್ನು ನೀಡಿತು. ಕೈಗೊಂಡಿರುವ ತುರ್ತು ಪರಿಹಾರ ಕ್ರಮಗಳ ಬಗ್ಗೆ ಆಯಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಪ್ರಕರಣದ ಮುಂದಿನ ವಿಚಾರಣೆ ನಡೆಯುವ ನ.10ರ ಒಳಗೆ ನ್ಯಾಯಾಧೀಕರಣಕ್ಕೆ ವರದಿ ಸಲ್ಲಿಸಬೇಕು ಎಂದು ಆದೇಶಿಸಿತು.

ಬಳಕೆ ಮಾಡದೆ ಇದ್ದ ಕಾರಣಕ್ಕೆ ನಿಷ್ಕ್ರಿಯಗೊಂಡ ದೂರವಾಣಿ ಸಂಖ್ಯೆ

90 ದಿನಗಳವರೆಗೆ ಹೊಸಬರಿಗೆ ನೀಡಲ್ಲ: ಟ್ರಾಯ್

ನವದೆಹಲಿ (ಪಿಟಿಐ): ಬಳಕೆ ಮಾಡದೆ ಇದ್ದ ಕಾರಣಕ್ಕೆ ನಿಷ್ಕ್ರಿಯಗೊಂಡ ಹಾಗೂ ಬಳಕೆದಾರರ ಕೋರಿಕೆಯ ಮೇರೆಗೆ ಸಂಪರ್ಕ ಕಡಿತ ಮಾಡಲಾದ ಮೊಬೈಲ್ ದೂರವಾಣಿ ಸಂಖ್ಯೆಗಳನ್ನು ಕನಿಷ್ಠ 90 ದಿನಗಳವರೆಗೆ ಹೊಸ ಚಂದಾದಾರರಿಗೆ ನೀಡುವುದಿಲ್ಲ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಬಳಕೆ ಮಾಡದೆ ಇದ್ದ ಕಾರಣಕ್ಕೆ ಮೊಬೈಲ್ ದೂರವಾಣಿ ಸಂಖ್ಯೆಗಳ ಸಂಪರ್ಕ ಕಡಿತ ಮಾಡಿದ ನಂತರ ಅಥವಾ ಸಂಪರ್ಕ ನಿಷ್ಕ್ರಿಯಗೊಳಿಸಿದ ನಂತರ ದತ್ತಾಂಶವನ್ನು ದುರ್ಬಳಕೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಆತಂಕ ಹೆಚ್ಚುತ್ತಿರುವ ಕುರಿತ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಇರುವ ನ್ಯಾಯಪೀಠ ನಡೆಸಿತ್ತು.

‘ಈ ಅರ್ಜಿಯ ವಿಚಾರಣೆಯನ್ನು ಇನ್ನಷ್ಟು ಮುಂದಕ್ಕೆ ಒಯ್ಯುವ ಇರಾದೆ ನಮಗಿಲ್ಲ... ಖಾಸಗಿತನವನ್ನು ಕಾಪಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕೆಲಸ ಮಾಡಬೇಕಿರುವುದು ಮೊಬೈಲ್ ದೂರವಾಣಿ ಸಂಖ್ಯೆಯನ್ನು ಹಿಂದೆ ಬಳಸುತ್ತಿದ್ದವರು’ ಎಂದು ಪೀಠವು ಅಕ್ಟೋಬರ್ 30ರಂದು ನೀಡಿದ ಆದೇಶದಲ್ಲಿ ಹೇಳಿದೆ.

‘ಮರುಬಳಕೆಯ ಫೋನ್ ನಂಬರ್ ವಿಚಾರವಾಗಿ ಗೊಂದಲಗಳು ಉಂಟಾಗದಂತೆ ನೋಡಿಕೊಳ್ಳಲು, ಖಾತೆಯಲ್ಲಿ ಚಟುವಟಿಕೆ ಇಲ್ಲದಿರುವುದನ್ನು ಗಮನಿಸಲಾಗುತ್ತದೆ. 45 ದಿನಗಳವರೆಗೆ ಖಾತೆಯಲ್ಲಿ ಚಟುವಟಿಕೆ ಇಲ್ಲ ಎಂದಾದರೆ, ನಂತರ ಇನ್ನೊಂದು ಮೊಬೈಲ್ ಫೋನ್‌ನಲ್ಲಿ ಖಾತೆ ಸಕ್ರಿಯವಾಯಿತು ಎಂದಾದರೆ ಹಳೆಯ ಖಾತೆಯ ದತ್ತಾಂಶವನ್ನು ತೆಗೆದುಹಾಕಲಾಗುತ್ತದೆ’ ಎಂದು ವಾಟ್ಸ್‌ಆ್ಯಪ್ ಸಹಾಯವಾಣಿ ಕೇಂದ್ರದಲ್ಲಿ ಇರುವ ಮಾಹಿತಿಯನ್ನು ಕೋರ್ಟ್ ದಾಖಲಿಸಿಕೊಂಡಿದೆ.

‘ಜಲ ಜೀವನ್ ಮಿಷನ್’ ಯೋಜನೆ ಅವ್ಯವಹಾರ ಪ್ರಕರಣ

ಹಣ ಅಕ್ರಮ ವರ್ಗಾವಣೆ: ರಾಜಸ್ಥಾನದಲ್ಲಿ ಶೋಧ

ಜೈಪುರ (ಪಿಟಿಐ): ‘ಜಲ ಜೀವನ್ ಮಿಷನ್’ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ರಾಜಸ್ಥಾನದ ವಿವಿಧೆಡೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದ್ದಾರೆ.

ಸಾರ್ವಜನಿಕ ಆರೋಗ್ಯ ಮತ್ತು ಎಂಜಿನಿಯರಿಂಗ್ ಇಲಾಖೆ ಹಾಗೂ ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಸುಬೋಧ್ ಅಗರ್‌ವಾಲ್ ಅವರಿಗೆ ಸಂಬಂಧಿಸಿದ 25 ಕಡೆಗಳಲ್ಲಿ ಇ.ಡಿ ಅಧಿಕಾರಿಗಳು ಜಾಲಾಡಿದರು. ಜಲ ಸಂಪನ್ಮೂಲ ಇಲಾಖೆಯನ್ನು ಮುಖ್ಯಮಂತ್ರಿ ಅಶೋಕ ಗೆಹಲೋತ್ ಅವರ ಆಪ್ತ ಮಹೇಶ್ ಜೋಶಿ ನಿರ್ವಹಿಸುತ್ತಿದ್ದಾರೆ.

ರಾಜಸ್ಥಾನ ವಿಧಾನಸಭೆಯ 200 ಕ್ಷೇತ್ರಗಳಿಗೆ ನವೆಂಬರ್ 25ರಂದು ಮತದಾನ ನಡೆಯಲಿದ್ದು, ಡಿಸೆಂಬರ್ 3ರಂದು ಫಲಿತಾಂಶ ಪ್ರಕಟವಾಗಲಿದೆ. ಚುನಾವಣೆಗೆ ಮುನ್ನ ನಡೆದಿರುವ ಈ ದಾಳಿಯು ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

‘ಚೀನಾಕ್ಕೆ ಹವಾಲ ಹಣ’

ನವದೆಹಲಿ(ಪಿಟಿಐ): ದೆಹಲಿಯ ಎಎಪಿ ಸಚಿವ ರಾಜ್ ಕುಮಾರ್ ಆನಂದ್ ಅವರು ಚೀನಾಕ್ಕೆ ಹವಾಲ ಹಣ ಪಾವತಿ ಮಾಡಿದ್ದಾರೆ ಎಂದು ರೆವಿನ್ಯೂ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ಆರೋಪಿಸಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಹೇಳಿದೆ.

ರಾಜ್ ಕುಮಾರ್ ಅವರು ಚೀನಾದಿಂದ ವಸ್ತುಗಳನ್ನು ಆಮದು ಮಾಡಿಕೊಂಡು, ₹ 7 ಕೋಟಿಯ ಕಸ್ಟಮ್ಸ್ ಸುಂಕವನ್ನು ವಂಚಿಸಿ ಹಣ ಪಾವತಿ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

‘ಇ.ಡಿ ಕಿರುಕುಳ’

ನವದೆಹಲಿ: ಇ.ಡಿ ಅಧಿಕಾರಿಗಳ ತಂಡ ತಮ್ಮ ಮನೆ ಮೇಲೆ ನಡೆಸಿದ ದಾಳಿಯನ್ನು ‘ಕಿರುಕುಳ ಮತ್ತು ಪಿತೂರಿ’ಯ ಭಾಗವೆಂದು ದೆಹಲಿ ಸರ್ಕಾರದ ಸಚಿವ ರಾಜ್ ಕುಮಾರ್ ಆನಂದ್ ಆರೋಪಿಸಿದ್ದಾರೆ. ರಾಷ್ಟ್ರ ರಾಜಧಾನಿಯ ಸಿವಿಲ್ ಲೈನ್ಸ್ ಪ್ರದೇಶದಲ್ಲಿರುವ ಸಚಿವ ಆನಂದ್ ಮತ್ತು ಇತರರಿಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ಗುರುವಾರ ಬೆಳಿಗ್ಗೆ ಶೋಧ ಆರಂಭಿಸಿದ ಅಧಿಕಾರಿಗಳು, ಶುಕ್ರವಾರ ನಸುಕಿನ 5 ಗಂಟೆಗೆ ಕೊನೆಗೊಳಿಸಿದರು.

ಸುಭಾಷಿತ

ಹಣವು ಮನುಷ್ಯರನ್ನು ಬದಲಾಯಿಸುವುದಿಲ್ಲ, ಅದು ಅವರ ಮುಖವಾಡವನ್ನು ಬಯಲಿಗೆಳೆಯುತ್ತದೆ. ವ್ಯಕ್ತಿಯು ಸ್ವಭಾವತಃ ಸ್ವಾರ್ಥಿ, ದುರಹಂಕಾರಿ ಅಥವಾ ದುರಾಸೆಯುಳ್ಳವನಾಗಿದ್ದರೆ ಹಣ ಅವನನ್ನು ಹೊರಗೆಳೆಯುತ್ತದೆ ಅಷ್ಟೆ. **–ಹೆನ್ರಿ ಫೋರ್ಡ್**

ಮಕ್ಕಳಿಗಾಗಿ 'ಚಂದ್ರಯಾನ ಉತ್ಸವ' ಕಲ್ಪಿತ ತಥ್ಯಗಳ ಅವಸರ ಪ್ರಸವ

ವರ್ತಮಾನದ ಯಾವುದೇ ಮಹಾ ಸಾಧನೆಯನ್ನು ಮಕ್ಕಳ ಪಠ್ಯಪುಸ್ತಕಗಳಲ್ಲಿ ತುರ್ತಾಗಿ ಸೇರಿಸುವುದು ಸುಲಭದ ಮಾತಲ್ಲ. ಆದ್ದರಿಂದಲೇ ಪೂರಕ ಪಠ್ಯಗಳನ್ನು ಸರ್ಕಾರ ಶಿಫಾರಸು ಮಾಡಬಹುದಾಗಿದೆ. ಈ ಉದ್ದೇಶದಿಂದ ಈಚಿನ 'ಚಂದ್ರಯಾನ–3'ರ ಸಾಧನೆಯ ಕುರಿತು ರಾಷ್ಟ್ರೀಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಪ್ರಕಟಿಸಿರುವ 'ಚಂದ್ರಯಾನ ಉತ್ಸವ' ಸರಣಿ ಕೈಪಿಡಿಗಳು ಈಗ ವಿವಾದಕ್ಕೆ ಕಾರಣವಾಗಿವೆ. ಅವುಗಳಲ್ಲಿ 'ವೈಜ್ಞಾನಿಕವಾಗಿ ತಪ್ಪುಗ್ರಹಿಕೆಗೆ ಆಸ್ಪದವಾಗುವ ಪುರಾಣದ ಉಲ್ಲೇಖಗಳಿವೆ' ಎಂದು ವಿಜ್ಞಾನಕ್ಕೆ ಸಂಬಂಧಿಸಿದ ಸುಮಾರು 40 ಸಂಘಟನೆಗಳ ಜಾಲಬಂಧ (ಎಐಪಿಎಸ್‌ಎನ್) ಎತ್ತಿತೋರಿಸಿದೆ. ಭಾರತದ ಬಾಹ್ಯಾಕಾಶ ಸಾಧನೆಗಳ ಬಗ್ಗೆ ಮಕ್ಕಳಿಗೆ ಶೀಘ್ರವಾಗಿ ತಿಳಿಸಬೇಕೆಂಬ ಎನ್‌ಸಿಇಆರ್‌ಟಿ ತುಡಿತ ಶ್ಲಾಘನೀಯವೇ ಹೌದಾದರೂ ಅದರಲ್ಲಿ ಪುರಾಣಕಾಲದ ಕಾಲ್ಪನಿಕ ಸಂಗತಿಗಳನ್ನು ಸತ್ಯವೆಂದೇ ನಂಬುವಂತೆ ಸೇರ್ಪಡೆ ಮಾಡಿದ್ದು ಅನೇಕರ ಆಕ್ಷೇಪಕ್ಕೆ ಕಾರಣವಾಗಿದೆ. ಕೆಲವು ವರ್ಷಗಳಿಂದ ವಿಜ್ಞಾನ ಮತ್ತು ವೈಚಾರಿಕತೆಗೆ ವಿರುದ್ಧವಾದ ಹೇಳಿಕೆಗಳು ಅಧಿಕಾರಸ್ಥರಿಂದ ಪದೇ ಪದೇ ಬರುತ್ತಲೇ ಇವೆ. ಗಣೇಶನಿಗೆ ಆನೆಯ ರುಂಡವನ್ನು ಸೇರಿಸಿದ್ದೇ ಪ್ಲಾಸ್ಟಿಕ್ ಸರ್ಜರಿಯ ಮೂಲಪುರುಷ ಎಂಬುದಾಗಿ 2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಹೇಳಿದಾಗಲೇ ವಿಜ್ಞಾನಿಗಳು ಆಕ್ಷೇಪ ಎತ್ತಿದ್ದರು. ಇಂತಹ ಅವೈಜ್ಞಾನಿಕ ಹೇಳಿಕೆಗಳ ಸರಣಿ ಇಂದಿಗೂ ಮುಂದುವರಿದಿದೆ.



ಭಾರತದ ಬಾಹ್ಯಾಕಾಶ ಸಾಧನೆಗಳ ಬಗ್ಗೆ ಮಕ್ಕಳಿಗೆ ಶೀಘ್ರವಾಗಿ ತಿಳಿಸಬೇಕೆಂಬ ಎನ್‌ಸಿಇಆರ್‌ಟಿ ತುಡಿತ ಶ್ಲಾಘನೀಯವೇ ಹೌದಾದರೂ ಅದರಲ್ಲಿ ಪುರಾಣಕಾಲದ ಕಾಲ್ಪನಿಕ ಸಂಗತಿಗಳನ್ನು ಸತ್ಯವೆಂದೇ ನಂಬುವಂತೆ ಸೇರ್ಪಡೆ ಮಾಡಿದ್ದು ಆಕ್ಷೇಪಾರ್ಹ

ಗಾಂಧಾರಿಗೆ ನೂರೊಂದು ಮಕ್ಕಳು ಜನಿಸಲು ಸ್ಟೆಮ್ ಸೆಲ್ ತಂತ್ರಜ್ಞಾನವೇ ಕಾರಣ ಎಂದು ಆಂಧ್ರ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಪ್ರೊ. ಜಿ.ನಾಗೇಶ್ವರ ರಾವ್ ಅವರು ಹೇಳಿದ್ದು; ಯಾವ ಮಂಗವೂ ಮನುಷ್ಯನಾಗಿ ಬದಲಾದದ್ದನ್ನು ನಮ್ಮ ಪೂರ್ವಿಕರು ನೋಡಿಲ್ಲವಾದ್ದರಿಂದ ಡಾರ್ವಿನ್ ಸಿದ್ಧಾಂತವೇ ತಪ್ಪು ಎಂದು ಕೇಂದ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿದ್ದ ಸತ್ಯಪಾಲ್ ಸಿಂಗ್ ಹೇಳಿದ್ದು; ಹಸುವಿನ ದೇಹದಲ್ಲಿ ಚಿನ್ನದ ಅಂಶ ಇರುವುದರಿಂದಾಗಿಯೇ ಅದರ ಹಾಲು ಸ್ವಲ್ಪ ಹಳದಿ ಬಣ್ಣದಲ್ಲಿರುತ್ತದೆ ಎಂದು ಪಶ್ಚಿಮ ಬಂಗಾಳದ ಬಿಜೆಪಿ ಮುಖಂಡ ದಿಲೀಪ್ ಘೋಷ್ ಪ್ರತಿಪಾದಿಸಿದ್ದು; ಅಷ್ಟೇಕೆ, ಮಾಂಸಾಹಾರ ಭಕ್ಷಣೆ ಮಾಡುತ್ತಿರುವುದೇ ಹಿಮಾಚಲ ಪ್ರದೇಶದ ಈಚಿನ ಮೇಘಸ್ಫೋಟದ ದುರಂತಕ್ಕೆ ಕಾರಣ ಎಂದು ಮಂಡಿಯ ಐಐಟಿ ನಿರ್ದೇಶಕ ಪ್ರೊ. ಲಕ್ಷ್ಮೀಧರ ಬೆಹ್ರಾ ಘೋಷಿಸಿದ್ದು– ಇವೆಲ್ಲವೂ ಉನ್ನತ ಸ್ಥಾನದಲ್ಲಿರುವವರ ಅವೈಜ್ಞಾನಿಕ ಪ್ರತಿಕ್ರಿಯೆಗಳೇ ಆಗಿವೆ. ರಾಷ್ಟ್ರೀಯ ಫುಟ್‌ಬಾಲ್ ತಂಡದ ಆಯ್ಕೆಗೆಂದು ಆಟಗಾರರ ಜಾತಕವನ್ನು ಜ್ಯೋತಿಷಿಯೊಬ್ಬರಿಗೆ ಕಳಿಸಿದ್ದಂತಹ ಅವೈಜ್ಞಾನಿಕ ಪ್ರಕಾರವೂ ಎನ್ನಿಸಿದೆ. ಎನ್‌ಸಿಇಆರ್‌ಟಿ ಜಾಲತಾಣದಲ್ಲಿ ಈಗ ನೋಡಸಿಗುವ 'ಚಂದ್ರಯಾನ ಉತ್ಸವ'ದ ಮಾಡ್ಯೂಲ್‌ಗಳಲ್ಲೂ ವೇದಕಾಲದಿಂದ ಹೇಳಲಾದ ವೈಮಾನಿಕಶಾಸ್ತ್ರವನ್ನು ಶ್ಲಾಘಿಸಲಾಗಿದೆ. ಅದು ವೇದಕಾಲದ್ದಲ್ಲವೆಂದೂ 1920ರ ಆಸುಪಾಸಿನಲ್ಲಿ ಆನೇಕಲ್‌ನ ಪಂಡಿತ ಸುಬ್ಬರಾಯ ಶಾಸ್ತ್ರಿ ಎಂಬುವರು ರಚಿಸಿದ ಗ್ರಂಥವೆನ್ನಲು ಪುರಾವೆಗಳಿದ್ದರೂ ವೇದಕಾಲದ್ದೆಂಬಂತೆ ಬಿಂಬಿಸಲಾಗುತ್ತಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ವಿಶ್ಲೇಷಿಸಿದ್ದಾರೆ. ಆ ಗ್ರಂಥದಲ್ಲಿನ ಯಾವ ವಿವರವೂ ವಿಮಾನದ ಹಾರಾಟಕ್ಕೆ ಪೂರಕ ಅಲ್ಲವೆಂತಲೂ ಹೇಳಿದ್ದಾರೆ. ಅಂತೂ ಪುರಾತನರ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಯಾವುದೇ ಪುರಾವೆ ಇಲ್ಲದಿದ್ದರೂ ಈಗಿನವರ ಅವೈಜ್ಞಾನಿಕ ಧೋರಣೆಗಳಿಗೆ ಪುರಾಣಗಳು ಪುಂಖಾನುಪುಂಖವಾಗಿ ಸಿಗುತ್ತಲೇ ಇವೆ.

ಪುರಾತನ ಕತೆಗಳಿಗೆ ವಿಜ್ಞಾನದ ಬಣ್ಣವನ್ನು ಲೇಪಿಸಿದ್ದಷ್ಟೇ ಅಲ್ಲ, ಎನ್‌ಸಿಇಆರ್‌ಟಿಯ ಪಠ್ಯಕರ್ತರು ವಿಜ್ಞಾನದ ಚರಿತ್ರೆಯನ್ನೂ ತಿರುಚುವ ಕೆಲಸವನ್ನು ಮಾಡಿದ್ದಾರೆ. ಜರ್ಮನಿಯ ನಾಜಿ ಪಕ್ಷದ ಸದಸ್ಯನಾಗಿದ್ದ ವೆರ್ನರ್ ವೊನ್ ಬ್ರಾನ್ ಎಂಬಾತನನ್ನು ರಾಕೆಟ್ ವಿಜ್ಞಾನದ ಜನಕ ಎಂದು ಈ 'ಉತ್ಸವ' ಸರಣಿಯಲ್ಲಿ ಬಣ್ಣಿಸಲಾಗಿದೆ. 'ನಮಗೆಲ್ಲ ಆತನ ಅದಮ್ಯ ಚೈತನ್ಯವೇ ಪ್ರೇರಕಶಕ್ತಿ ಆಗಬೇಕು' ಎಂದು ಹಾರೈಸಲೂ ಆಗಿದೆ. ವಾಸ್ತವ ಏನೆಂದರೆ, ಈತನಿಗಿಂತ ಹತ್ತು ವರ್ಷ ಮೊದಲೇ 1926ರಲ್ಲಿ ಅಮೆರಿಕದ ರಾಬರ್ಟ್ ಗೊಡ್ಡಾರ್ಡ್ ಎಂಬಾತ ರಾಕೆಟ್ ತಯಾರಿಸಿ ಹಾರಿಸಿದ್ದ. ಆತನೇ ರಾಕೆಟ್ ವಿಜ್ಞಾನದ ಜನಕ ಎಂದು ಅಮೆರಿಕದ ನಾಸಾ ಸಂಸ್ಥೆ ದಾಖಲಿಸಿದೆ. ಮೇರಿಲ್ಯಾಂಡ್‌ನಲ್ಲಿರುವ ಅತಿ ದೊಡ್ಡ ಬಾಹ್ಯಾಕಾಶ ಸಂಶೋಧನಾ ಕೇಂದ್ರಕ್ಕೆ ಆತನ ಹೆಸರನ್ನೇ ಇಡಲಾಗಿದೆ. ಗೊಡ್ಡಾರ್ಡ್ ರೂಪಿಸಿದ ಮಾದರಿಯನ್ನೇ ಅಭಿವೃದ್ಧಿಪಡಿಸಿ ಹತ್ತು ವರ್ಷಗಳ ನಂತರ ಈ ವೆರ್ನರ್ ಮಹಾಶಯ ನಾಜಿ ಸೈನ್ಯಕ್ಕೆಂದು ರಾಕೆಟ್ ತಯಾರಿಸಿದ್ದ. ತನ್ನ ಬಾಹ್ಯಾಕಾಶದ ಕನಸಿನ ಸಾಧನವನ್ನು ವೆರ್ನರ್ ಯುದ್ಧಾಸ್ತ್ರವಾಗಿ ಬಳಸಿದ್ದಕ್ಕಾಗಿ ಗೊಡ್ಡಾರ್ಡ್ ವ್ಯಥಿಸಿದ್ದ ಕೂಡ. ಇವೆಲ್ಲವೂ ಚರಿತ್ರೆಯಲ್ಲಿ ದಾಖಲಾಗಿದ್ದರೂ ಯುದ್ಧಾಪರಾಧದ ಶಿಕ್ಷೆಯಿಂದ ಬಚಾವಾಗಲೆಂದೇ ಜರ್ಮನಿಯಿಂದ ಅಮೆರಿಕಕ್ಕೆ ವಲಸೆ ಹೋದನೆಂಬ ಆಪಾದನೆ ಹೊತ್ತ ರಾಕೆಟ್ ತಜ್ಞನ ಯಾವ ಆದರ್ಶವು ಮಕ್ಕಳಿಗೆ ಪ್ರೇರಕಶಕ್ತಿಯಾಗಲು ಸಾಧ್ಯ?

ಇಸ್ರೊ ಸಂಸ್ಥೆಯ ಬಾಹ್ಯಾಕಾಶ ಸಾಧನೆಗಳು ಮಕ್ಕಳನ್ನು ತಲುಪಬೇಕು, ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಹಿಂದಿನ ಭಾರತೀಯ ಪರಂಪರೆಯನ್ನು ಹಾಡಿಹೊಗಳುವ ಭರದಲ್ಲಿ ಇಂಥ ಅವಸರದ, ತಪ್ಪು ಮಾಹಿತಿಗಳ, ಅಪಕ್ವ ಸಾಹಿತ್ಯವನ್ನು ಸೃಷ್ಟಿಸಿದ್ದೂ ಅಲ್ಲದೆ, ಅದಕ್ಕೆ ಆಕ್ಷೇಪಗಳು ಬಂದ ನಂತರವೂ ಸರಿಪಡಿಸದೇ ಎನ್‌ಸಿಇಆರ್‌ಟಿ ತನ್ನ ಜಾಲತಾಣದಲ್ಲಿ ಉಳಿಸಿಕೊಂಡಿದ್ದು ಧಾರ್ಷ್ಟ್ಯವಲ್ಲದೆ 'ಚಂದ್ರಯಾನ ಉತ್ಸವ'ವಂತೂ ಆಗಲಾರದು.

ದಿನದ ಟ್ವೀಟ್

ಕಾರ್ಯತಂತ್ರ ರೂಪಿಸಿ

ಇಂಥ ಸ್ಥಿತಿ ದೆಹಲಿಯಲ್ಲಷ್ಟೇ ಇಲ್ಲ. ವಾಯುಮಾಲಿನ್ಯವು ಉತ್ತರ ಭಾರತದ ಬಹುಭಾಗವನ್ನು ಆಕ್ರಮಿಸಿದೆ. ಇದು, ಕೇಂದ್ರ ಸರ್ಕಾರ, ವಿವಿಧ ರಾಜ್ಯ ಸರ್ಕಾರಗಳು, ಜಿಲ್ಲಾ ಮತ್ತು ನಗರ ಆಡಳಿತಗಳು ಒಟ್ಟಾಗಿ ಕುಳಿತು, ಸರ್ವಸಮ್ಮತ ಕಾರ್ಯತಂತ್ರ ರೂಪಿಸಿ ಬಳಿಕ ಅನುಷ್ಠಾನಕ್ಕೆ ತಂದು ಬಗೆಹರಿಸಬೇಕಾದ ಸಮಸ್ಯೆ. ಆದರೆ, ಶ್ರೀಮಂತರು ಮತ್ತು ನಾಯಕರು ಡಜನ್‌ಗಟ್ಟಲೆ– ಬೇಕಾದರೆ ನೂರಾರು– ಏರ್ ಪ್ಯೂರಿಫಯರ್‌ಗಳನ್ನು ಕೊಳ್ಳುವಷ್ಟು ಶಕ್ತಿವಂತರಾಗಿರುತ್ತಾರೆ. ಹೀಗಾಗಿ, ಅವರು ಇದಕ್ಕೆಲ್ಲ ತಲೆಕೆಡಿಸಿಕೊಳ್ಳುವುದಿಲ್ಲ.

ಪ್ರೊಸೆನ್‌ಜೀತ್ ದತ್ತ, ಪತ್ರಕರ್ತ

ಕಿಡಿನುಡಿ



ಕಾಂಗ್ರೆಸ್ ಹೈಕಮಾಂಡ್ ಬಯಸಿದರೆ ತಾವು ಮುಖ್ಯಮಂತ್ರಿ ಆಗುವುದಾಗಿ ರಾಜ್ಯದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಘೋಷಿಸಿದ್ದಾರೆ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ನ ಭಾವಿ ಮುಖ್ಯಮಂತ್ರಿಗಳು, ಕನ್ನಡಿಗರ ಕಲ್ಯಾಣಕ್ಕಾಗಿ ಶ್ರಮಿಸುವ ಬದಲು ಅಧಿಕಾರಕ್ಕಾಗಿ ಹಪಹಪಿಸುತ್ತಿರುವುದು ಅತ್ಯಂತ ದುರದೃಷ್ಟಕರ.

ಸಿ.ಟಿ.ರವಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 4-11-1998

- **ರಾಜ್ಯ ಯೋಜನಾ ವೆಚ್ಚ 5,353 ಕೋಟಿ ರೂಪಾಯಿ**

ನವದೆಹಲಿ, ನ. 3 (ಪಿಟಿಐ)– ಯೋಜನಾ ಆಯೋಗವು ಕರ್ನಾಟಕದ 1998–99ರ ಸಾಲಿನ ಹಣಕಾಸು ವರ್ಷದ ವಾರ್ಷಿಕ ಯೋಜನಾ ವೆಚ್ಚವನ್ನು ರೂ. 5,353 ಕೋಟಿಗೆ ನಿಗದಿಪಡಿಸಿದೆ.

ಕಳೆದ ವರ್ಷದ ಯೋಜನಾ ವೆಚ್ಚಕ್ಕಿಂತ ಇದು ಶೇ 28ರಷ್ಟು ಹೆಚ್ಚಾಗಿದೆ.

ಯೋಜನಾ ಆಯೋಗದ ಉಪಾಧ್ಯಕ್ಷ ಜಸ್ವಂತ್ ಸಿಂಗ್, ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಯೋಗದ ಅಧಿಕಾರಿಗಳು ಇಂದು ಭಾಗವಹಿಸಿದ್ದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

- **ಜಯಾ ವಿರುದ್ಧ ವಿಶೇಷ ನ್ಯಾಯಾಲಯದ ನೇಮಕಕ್ಕೆ ಅಸ್ತು**

ಚೆನ್ನೈ, ನ. 3– ಅಣ್ಣಾ ಡಿಎಂಕೆ ಪಕ್ಷದ ನಾಯಕಿ ಹಾಗೂ ಮಾಜಿ ಮುಖ್ಯಮಂತ್ರಿ ಜಯಲಲಿತಾ ಮತ್ತು ಅವರ ಮಂತ್ರಿ ಮಂಡಲದಲ್ಲಿ ಸಚಿವರಾಗಿದ್ದ ಕೆಲವರ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಮೂವರು ವಿಶೇಷ ನ್ಯಾಯಾಧೀಶರ ನೇಮಕವನ್ನು ಇಂದು ಮದ್ರಾಸ್ ಹೈಕೋರ್ಟ್ ಎತ್ತಿಹಿಡಿದಿದೆ. ಜಯಾ ಅವರಿಗೆ ಕಾನೂನು ಸಮರದಲ್ಲಿ ಅಪಜಯ ಆದಂತಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 4-11-1973

- **ಮಧ್ಯಪ್ರದೇಶದ ಖಾಂಡ್ವಾದಲ್ಲಿ ಸುಮಿತ್ರಾ ದೇಸಾಯಿ ಪತ್ತೆ**

ಭೋಪಾಲ್, ನ. 3– ಕಳೆದ ಮೇ ತಿಂಗಳಿನಲ್ಲಿ ಬೆಂಗಳೂರಿನಿಂದ ಕಣ್ಮರೆಯಾಗಿ ಕರ್ನಾಟಕದಲ್ಲಿ ರಾಜಕೀಯ ಬಿರುಗಾಳಿಯನ್ನು ಎಬ್ಬಿಸಿದ್ದ ಶ್ರೀಮತಿ ಸುಮಿತ್ರಾ ದೇಸಾಯಿ ಮಧ್ಯ ಪ್ರದೇಶದ ಖಾಂಡ್ವಾದಲ್ಲಿ ಪತ್ತೆಯಾಗಿದ್ದಾರೆ.

'ಆಕೆ ಈಗ ಖಾಂಡ್ವಾ ಸರ್ಕಿಟ್ ಹೌಸ್‌ನಲ್ಲಿದ್ದಾರೆ. ಅವರನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆ' ಎಂದು ಮಧ್ಯಪ್ರದೇಶದ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಆರ್.ಎನ್. ನಾನು ಅವರು ಇಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸುಮಿತ್ರಾ ದೇಸಾಯಿ ಅವರನ್ನು ಹೋಲುವ ಮಹಿಳೆಯೊಬ್ಬರು ಶುಕ್ರವಾರ ಸಂಜೆ ಖಾಂಡ್ವಾದಲ್ಲಿ (ಇಂದೋರಿಗೆ ದಕ್ಷಿಣಕ್ಕೆ 150 ಕಿಲೊಮೀಟರ್ ದೂರದಲ್ಲಿದೆ) ಪತ್ತೆಯಾದರೆಂದು ಅವರು ತಿಳಿಸಿದರು.

ಅನುವಾದ ಕ್ಷೇತ್ರದಲ್ಲಿ ಅವಕಾಶಗಳು ತೆರೆದುಕೊಂಡಿವೆ; ಬಳಸಿಕೊಳ್ಳಲು ಆಗಿಲ್ಲ ಸಿದ್ಧತೆ

ಕನ್ನಡದ ನಾಳೆಗಳನ್ನು ರೂಪಿಸುವತ್ತ...

ವಿಶ್ಲೇಷಣೆ

ಟಿ.ಎನ್.ವಾಸುದೇವಮೂರ್ತಿ

ಇಹದ ಪಂಚಭೂತಮಯವಾದ ಜಗತ್ತಿಗೆ ಸಂಬಂಧಿಸಿರದ ಅಲೌಕಿಕ ತತ್ವವನ್ನು ಫೋಟೊದಲ್ಲಿ ಒಂದು ಪ್ರತಿಕೃತಿಯ ರೂಪದಲ್ಲಿ ಪ್ರತಿಷ್ಠಾಪಿಸಿ ಹಾರ ಹಾಕಿ ಪೂಜಿಸುವುದು ನಮ್ಮ ಸಾಂಪ್ರದಾಯಿಕ ಪದ್ಧತಿಯಾಗಿದೆ. ಆದರೆ ಒಂದು ಭಾಷೆ ಇಹದ ಜಗತ್ತಿಗೆ ಸಂಬಂಧಿಸಿರದ ಅಲೌಕಿಕ ತತ್ವವಲ್ಲ. ಅದು ನಮ್ಮ ನಶ್ವರ ಸಂಬಂಧಗಳನ್ನು ತಾತ್ಕಾಲಿಕವಾಗಿಯಾದರೂ ಅರ್ಥಪೂರ್ಣವಾಗಿಸುವ ಶಬ್ದಮಯ ಪ್ರಪಂಚವಾಗಿದೆ.

ಕವಿ ಗೋಪಾಲಕೃಷ್ಣ ಅಡಿಗರು 'ಕನ್ನಡವೆಂದರೆ ತಾಯಿಯೇ ದೇವಿಯೇ?/ ನಾನು ನೀನು, ಅವರು/ ಜನಮನದೊಳಗುದಿ ತುಡಿತ ಮಿಡಿತಗಳ/ ಪ್ರತಿಕೃತಿ ಗತಿ ನೂರಾರು' (ಬತ್ತಲಾರದ ಗಂಗೆ) ಎಂದು ಹೇಳುತ್ತಾರೆ. ಇಂತಹ ಕನ್ನಡವನ್ನು ನಮ್ಮ ಒಳಗುದಿ, ತುಡಿತ, ಮಿಡಿತಗಳಿಗಾಗಿ ಬಳಸದೇ ಕನ್ನಡ ನಮ್ಮ ಇಹದ ಜಗತ್ತಿನಲ್ಲಿ ಜೀವಂತವಾಗಿ ಬಳಕೆಯಲ್ಲಿಲ್ಲ ಎಂಬ ರೀತಿಯಲ್ಲಿ ಫೋಟೊದ ಚೌಕಟ್ಟಿನೊಳಗೆ ಪ್ರತಿಷ್ಠಾಪಿಸಿ ಹಾರ ಹಾಕಿ ಪೂಜಿಸುತ್ತಿದ್ದೇವೆ.

ನಮ್ಮ ಶಾಲಾಕಾಲೇಜುಗಳಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ಬ್ಯಾಂಕುಗಳಲ್ಲಿ, ದೈನಂದಿನ ವ್ಯಾಪಾರ ವಹಿವಾಟುಗಳಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಿದೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರಲು ಸೂಕ್ತವಾದ ನೀತಿಯನ್ನು ರೂಪಿಸಲು ಇನ್ನೂ ನಮ್ಮ ರಾಜಕಾರಣಿಗಳಿಗೆ ಸಾಧ್ಯವಾಗಿಲ್ಲ. ಇನ್ನು ಉನ್ನತ ಶಿಕ್ಷಣದ ಹಂತದಲ್ಲಿ ಕಡ್ಡಾಯವಾಗಿ ಕನ್ನಡ ಕಲಿಸುವ ಉಪಕ್ರಮವನ್ನು ಹಿಂದಿನ ವರ್ಷ ಕೈಗೊಂಡಾಗ ನಮ್ಮವರೇ ಅದಕ್ಕೆ ಅಡ್ಡಗಾಲು ಹಾಕಿದರು. ಹಿಂದಿ, ಸಂಸ್ಕೃತದಂತಹ ಭಾಷೆಗಳ ಶಿಕ್ಷಕರ ಉದ್ಯೋಗದ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಹೈಕೋರ್ಟಿನಲ್ಲಿ ವಾದಿಸಿದರು. ನಾವೇನು ಉದ್ಯೋಗಗಳನ್ನು ಸೃಷ್ಟಿಸುವುದಷ್ಟೇ ಶಿಕ್ಷಣ ವ್ಯವಸ್ಥೆಯ ಉದ್ದೇಶವೆಂದು ಭಾವಿಸಿದ್ದೇವೆಯೇ?

ಸಂಶೋಧಕ ಎಂ. ಚಿದಾನಂದಮೂರ್ತಿ ಅವರು 'ವಿಜ್ಞಾನ, ತಂತ್ರಜ್ಞಾನದಂತಹ ಜ್ಞಾನಕ್ಷೇತ್ರಗಳಿಗೆ ಪ್ರತಿಭಾವಂತರಷ್ಟೇ ಹೋಗುತ್ತಾರೆ, ಇನ್ನಾವ ಪ್ರತಿಭೆಯೂ ಇಲ್ಲದವರು, ಇನ್ನೆಲ್ಲಿಯೂ ಸಲ್ಲದ ಅಭ್ಯರ್ಥಿಗಳು ಕನ್ನಡ ಎಂ.ಎ. ಕಲಿಯಲು ಬರುತ್ತಿದ್ದಾರೆ' ಎಂಬ ಮಾತನ್ನು ಆಗಾಗ ವಿಷಾದದಿಂದ ಹೇಳುತ್ತಿದ್ದರು. ಅವರ ಮಾತಿನಲ್ಲಿ ಸತ್ಯಾಂಶ ಇದೆಯಾದರೂ ಅದಕ್ಕೆ ಅಭ್ಯರ್ಥಿಗಳನ್ನು ದೂಷಿಸಲಾಗದು.

ನಮ್ಮ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಗುಣಮಟ್ಟ ಕುಸಿದಿದೆ. ನಮ್ಮ ಶಾಲೆಗಳ ಬಹುತೇಕ ಗಣಿತ, ವಿಜ್ಞಾನ ಶಿಕ್ಷಕರು ತಮ್ಮ ವಿಷಯದ ಮೂಲಭೂತ ಜ್ಞಾನವನ್ನೂ ಹೊಂದಿರದ ಸ್ಥಿತಿಯಲ್ಲಿದ್ದಾರೆ. ಇಂತಹವರಿಂದ ಪ್ರಾಥಮಿಕ, ಪ್ರೌಢಶಾಲಾ ಹಂತದಲ್ಲಿ ಪಾಠ ಹೇಳಿಸಿಕೊಳ್ಳುವ ವಿದ್ಯಾರ್ಥಿಗಳಲ್ಲಿಯೂ ಸಹಜವಾಗಿಯೇ ಆ ವಿಷಯಗಳ ಮೂಲಭೂತ ಜ್ಞಾನ ಇರುವುದಿಲ್ಲ. ವಿದ್ಯಾರ್ಥಿಗಳು ಬಾಲ್ಯದಿಂದಲೂ ಪರಿಸರ ಭಾಷೆ ಅಥವಾ ಮಾತೃಭಾಷೆಯಾದ ಕನ್ನಡವನ್ನೇ ಅಚ್ಚುಕಟ್ಟಾಗಿ ಮತ್ತು ಸುಲಭವಾಗಿ ಕಲಿಯುವುದರಿಂದ ಸಹಜವಾಗಿಯೇ ಉನ್ನತ ಶಿಕ್ಷಣವನ್ನೂ ಕನ್ನಡದಲ್ಲೇ ಮುಂದುವರಿಸಲು ಒಲವು ತೋರಿಸುತ್ತಾರೆ. ಸಮಸ್ಯೆಯ ಮೂಲ ಇಲ್ಲಿದೆ ಎನಿಸುತ್ತದೆ.

ಗಣಿತದಲ್ಲೋ ಭೌತಶಾಸ್ತ್ರದಲ್ಲೋ ಅಥವಾ ರಸಾಯನಶಾಸ್ತ್ರದಲ್ಲೋ ವಿಶೇಷ ಪರಿಣತಿ ಹೊಂದಬಲ್ಲ ಸಾಮರ್ಥ್ಯವುಳ್ಳ ವಿದ್ಯಾರ್ಥಿಗೆ ಆ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಬುನಾದಿ ಸಿಗದ ಕಾರಣ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಅವರಿಗೂ ಹಾಗೆಯೇ ಅವರು ಆಯ್ಕೆ ಮಾಡಿಕೊಳ್ಳುವ ಕನ್ನಡದಂತಹ ಜ್ಞಾನಶಾಖೆಗೂ ಅನ್ಯಾಯವೇ ಆಗುತ್ತಿದೆ.

ಸುಮಾರು ನೂರಿಪ್ಪತ್ತು ವರ್ಷಗಳ ಹಿಂದೆ ಬಿ.ಎಂ. ಶ್ರೀಕಂಠಯ್ಯ ಅವರು ಕನ್ನಡದ ಶ್ರೀಮಂತಿಕೆಯನ್ನು ಕುರಿತು 'ಬೆಳೆ ಏನೋ ಸಾಕಷ್ಟಿದೆ; ಆದರೆ ಕೊಯ್ಲು ಮಾಡಿಕೊಳ್ಳುವವರಿಲ್ಲ' ಎಂದಿದ್ದರು. ಅವರು ಈ ಮಾತನ್ನು ಯಾವ ಸನ್ನಿವೇಶದಲ್ಲಿ ಹೇಳಿದ್ದರೋ ಆ ಸನ್ನಿವೇಶ ಇಂದಿಗೂ ಹಾಗೆಯೇ ಇದೆ. ಕನ್ನಡದ ಈಗಿನ ಸ್ಥಿತಿಯನ್ನು ಕಂಡು ನೊಂದ ನಮ್ಮ ಬುದ್ಧಿಜೀವಿಗಳು 'ಕನ್ನಡ ಅನ್ನದ ಭಾಷೆಯಾಗಬೇಕು' ಎಂಬ ಮಾತನ್ನು ಮತ್ತೆ ಮತ್ತೆ ಹೇಳುತ್ತಿರುತ್ತಾರೆ. ಜಾಗತೀಕರಣ ಪದಾರ್ಪಣೆಯಾದಂದೇ ಕನ್ನಡವು ಅನ್ನದ ಭಾಷೆಯಾಯಿತು. ಆದರೆ ಆ ಅನ್ನಭಾಗ್ಯವನ್ನು ಪಡೆದುಕೊಳ್ಳುವ ಅದೃಷ್ಟವಂತರಿಲ್ಲ ಎಂಬ ಪರಿಸ್ಥಿತಿ ಸದ್ಯಕ್ಕೆ ನಮ್ಮ ನಾಡಿನಲ್ಲಿ ನಿರ್ಮಾಣವಾಗಿದೆ.

ಜಾಗತೀಕರಣದ ನಂತರ ಅನುವಾದ ಕ್ಷೇತ್ರದಲ್ಲಿ ವಿಪುಲವಾದ ಅವಕಾಶಗಳು ತೆರೆದುಕೊಂಡಿವೆ. ಅಮೆರಿಕದ ಬ್ಯೂರೊ ಆಫ್ ಸ್ಟ್ಯಾಟಿಸ್ಟಿಕ್ಸ್ ವರದಿಯ ಪ್ರಕಾರ, 2029ರ ವೇಳೆಗೆ ಅನುವಾದಕರ ಬೇಡಿಕೆ ಶೇಕಡ 20ರಷ್ಟು ಹೆಚ್ಚಲಿದೆ. ಶಿಕ್ಷಣ, ಆಡಳಿತ, ಆರೋಗ್ಯ ಆರೈಕೆ, ಕೈಗಾರಿಕೆ, ವ್ಯಾಪಾರ, ಬ್ಯಾಂಕಿಂಗ್, ಕಾನೂನು, ಪತ್ರಿಕೋದ್ಯಮ, ಸಬ್‌ಟೈಟಲಿಂಗ್, ಮನರಂಜನೆಯಂತಹ ನೂರಾರು ಕ್ಷೇತ್ರಗಳು ತಮ್ಮ ಉಳಿವಿಗಾಗಿ, ಬೆಳವಣಿಗೆಗಾಗಿ ಸ್ಥಳೀಯ ಭಾಷೆಗೆ ಪ್ರಾಮುಖ್ಯ ನೀಡುತ್ತಿವೆ. ಸಿನಿಮಾ, ಧಾರಾವಾಹಿ, ಸಾಕ್ಷ್ಯಚಿತ್ರದಂತಹವುಗಳ ಡಬ್ಬಿಂಗ್ ಮೇಲಿನ ನಿರ್ಬಂಧ ತೆರವುಗೊಂಡ ಮೇಲೆ ಟಿ.ವಿ. ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರದಲ್ಲಿ ಸ್ಥಳೀಯ ಭಾಷಿಕರಿಗೆ ದೊಡ್ಡಮಟ್ಟದಲ್ಲಿ ಉದ್ಯೋಗಾವಕಾಶ ತೆರೆದುಕೊಂಡಿದೆ.



ಆದರೆ ಇದಕ್ಕೆಲ್ಲ ಸೂಕ್ತ ಅಭ್ಯರ್ಥಿಗಳನ್ನು ಸೃಷ್ಟಿಸುವಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಸಮರ್ಥವಾಗಿದೆಯೇ ಎಂದು ಅವಲೋಕಿಸಿದರೆ ನಿರಾಸೆಯಾಗುತ್ತದೆ.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಂತಹ ಖಾಸಗಿ ವಿಶ್ವವಿದ್ಯಾಲಯಗಳು ಸ್ಥಳೀಯ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಸಾವಿರ ಸಾವಿರ ಸಂಖ್ಯೆಯಲ್ಲಿ ಪುಸ್ತಕಗಳು ಮತ್ತು ಸಂಶೋಧನಾ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸುತ್ತಿವೆ. ಪದವಿ ಪೂರೈಸಿದ ಪ್ರತಿಭಾವಂತ ಯುವ ಅಭ್ಯರ್ಥಿಗಳನ್ನು ಈ ಅನುವಾದ ಕಾರ್ಯಕ್ಕಾಗಿ ಪ್ರತಿವರ್ಷವೂ ಆರಿಸಿ ಅವರಿಗೆ ಅನುವಾದದ ತರಬೇತಿ ನೀಡುತ್ತಿವೆ. ನಾಡಿನ ಎಲ್ಲ ವಿಶ್ವವಿದ್ಯಾಲಯಗಳೂ ತಾವು ಬೋಧಿಸುವ ಪಠ್ಯವಿಷಯ ಮತ್ತು ಅಧ್ಯಯನ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಕನ್ನಡದಲ್ಲಿಯೂ ಒದಗಿಸಬೇಕೆಂದು ಮುಖ್ಯಮಂತ್ರಿ ಇತ್ತೀಚೆಗೆ ಆದೇಶ ಹೊರಡಿಸಿದ್ದರು. ಆದರೆ ಈ ಆದೇಶ ಎಷ್ಟರ ಮಟ್ಟಿಗೆ ಜಾರಿಯಾಗುತ್ತದೋ ನಮ್ಮ ವಿಶ್ವವಿದ್ಯಾಲಯಗಳು ಈ ಆದೇಶವನ್ನು ಎಷ್ಟರಮಟ್ಟಿಗೆ ಗಂಭೀರವಾಗಿ ತೆಗೆದುಕೊಳ್ಳುತ್ತವೋ ಕಾದು ನೋಡಬೇಕು.

ಇಂದು ಬೆಂಗಳೂರಿನಂತಹ ನಗರಗಳಲ್ಲಿ ಕನ್ನಡವನ್ನೇ ಕಲಿಯದೆ ದಶಕಗಳ ಕಾಲದಿಂದ ವಾಸಿಸುತ್ತಿರುವ ಲಕ್ಷಾಂತರ ಜನರಿದ್ದಾರೆ. ಕರ್ನಾಟಕದಲ್ಲಿ ಉದ್ಯೋಗಾವಕಾಶ ಬಯಸುವವರಿಗೆ ಕನಿಷ್ಠ ಮಟ್ಟದ ಸ್ಥಳೀಯ ಭಾಷಾಜ್ಞಾನ ಅತ್ಯಗತ್ಯವೆಂಬ ನಿಯಮಾವಳಿಯನ್ನು ರೂಪಿಸುವ ಸಾಧ್ಯಾಸಾಧ್ಯತೆಯ ಕುರಿತು ಕಾನೂನು ತಜ್ಞರು ಪರ್ಯಾಲೋಚಿಸಬೇಕಿದೆ. ಏಕೆಂದರೆ, ಜರ್ಮನಿ ದೇಶ ತನ್ನ ಸ್ಥಳೀಯತೆಯನ್ನು ಕಾಪಾಡಿಕೊಳ್ಳಲು ತನ್ನ ನೆಲದಲ್ಲಿ ಆ ಬಗೆಯ ನಿಯಮವನ್ನು ಜಾರಿಗೆ ತಂದಿದೆ. ಅಂತಹುದೇ ನಿಯಮ ನಮ್ಮಲ್ಲೂ ಜಾರಿಯಾದಲ್ಲಿ ಲಕ್ಷಾಂತರ ಜನ ಕನ್ನಡ ಕಲಿಯುತ್ತಾರೆ, ಸಾವಿರಾರು ಜನ ಶಿಕ್ಷಕರಿಗೆ ಉದ್ಯೋಗವಾಗುತ್ತದೆ, ಎಲ್ಲಕ್ಕಿಂತ ಮಿಗಿಲಾಗಿ ಕನ್ನಡದ ಪ್ರವರ್ಧನೆಯಾಗುತ್ತದೆ.

ಅದಕ್ಕಾಗಿ ವಿಶೇಷ ಸಿದ್ಧತೆಯ ಅಗತ್ಯವೇನೂ ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಈಗಾಗಲೇ ಕಾವ, ಜಾಣ, ರತ್ನ ಎಂಬ ವಿವಿಧ ಹಂತದ ಸರ್ಟಿಫಿಕೇಟ್ ಕೋರ್ಸುಗಳನ್ನು ನಡೆಸುತ್ತಿದೆ. ಈ ಕೋರ್ಸುಗಳನ್ನು ಬಳಸಿಕೊಂಡು ಅಂತಹ ಕಾನೂನನ್ನು ಸಮರ್ಥವಾಗಿ ಜಾರಿಗೆ ತಂದರೂ ಸಾಕು. ಈ ಬಗೆಯ ಉಪಕ್ರಮಕ್ಕೆ ನ್ಯಾಯಾಂಗದ ಅನುಮೋದನೆಯೂ ಸಿಗುತ್ತದೆ. ಹಿಂದಿನ ವರ್ಷ ಪದವಿ ತರಗತಿಗೆ ಕನ್ನಡವನ್ನು ಕಡ್ಡಾಯಗೊಳಿಸಿದ ಸರ್ಕಾರದ ಉಪಕ್ರಮವನ್ನು ಆಕ್ಷೇಪಿಸಿದ ಹೈಕೋರ್ಟ್, 'ಉದ್ಯೋಗದಲ್ಲಿ ಬೇಕಾದರೆ ಕನ್ನಡ ಕಲಿಕೆಗೆ ಆಗ್ರಹಿಸಬಹುದು. ಈ ಸಂಬಂಧ ನೀವು ಷರತ್ತು ವಿಧಿಸಬಹುದು' ಎಂದು ಸರ್ಕಾರಕ್ಕೆ ಸೂಚಿಸಿತ್ತು.

ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಬಡವರು, ದಲಿತರು ಮತ್ತು ಹಿಂದುಳಿದ ಸಮುದಾಯಗಳ ಮೇಲೆ ತನಗೆ ವಿಶೇಷ ಕಾಳಜಿಯುಂಟೆಂಬ ಭರವಸೆ ನೀಡಿ ಮತದಾರರನ್ನು ಒಲಿಸಿಕೊಂಡಿತು. ಕನ್ನಡ ಪರವಾದ ಇಂತಹ ಕೆಲಸಗಳನ್ನು ಈಗ ಸಮರೋಪಾದಿಯಲ್ಲಿ ಕೈಗೊಳ್ಳಬೇಕಿದೆ. ಕನ್ನಡದ ಪ್ರವರ್ಧನೆಯಿಂದ ನೇರವಾದ, ಗರಿಷ್ಠವಾದ ಪ್ರಯೋಜನ ಸಿಗುವುದು ನಮ್ಮ ದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಎಂಬುದನ್ನು ಆಳುವ ಸರ್ಕಾರ ಮರೆಯಬಾರದು.

ಲೇಖಕ: ಸಹಪ್ರಾಧ್ಯಾಪಕ, ಆದಿಚುಂಚನಗಿರಿ ವಿಶ್ವವಿದ್ಯಾಲಯ

ಚುರುಮುರಿ

ಕನ್ನಡ ಸಂಭ್ರಮ

● ಕೆ.ವಿ.ರಾಜಲಕ್ಷ್ಮಿ

'ಗಂಟೆ ಏಳಾದರೂ ಮಕ್ಕಳು ಏಳೋಲ್ಲ, ಏಳೂಮುಕ್ಕಾಲಿಗೆ ಸ್ಕೂಲ್ ವ್ಯಾನ್ ಬರುತ್ತೆ, ಕಣ್ಣುಜ್ಜಿಕೊಂಡೇ ಬರಿಹೊಟ್ಟೇಲಿ ಹೋಗುತ್ವೆ. ಆದರೆ ಎಬ್ಬಿಸೋ ಸಾಹಸ ಮಾಡೋದುಂಟೆ? ಮನೆ ಎರಡಾಗುತ್ತೆ ಅಂತ ಬೇಸರಿಸಿಕೊಳ್ತಿದ್ಲು ನನ್ನ ಗೆಳತಿ ಪಾತು' ನನ್ನವಳ ಸುಪ್ರಭಾತ.

'ಹ್ಞೂಂ, ಇನ್ನೇನು ಮತ್ತೆ? ನಮ್ಮ ಕಾಲದ ಹಾಗೆ ಶಿಸ್ತೇ ಸಂಯಮವೇ? ಏನಾದ್ರೂ ಹೇಳೋಕ್ಕೆ ಹೋದ್ರೆ ನಮ್ಮ ಸ್ಟ್ರೆಸ್ ನಿಮಗೆ ಅರ್ಥವಾಗೋಲ್ಲ ಹರ್ಟ್ ಮಾಡ್ಬೇಡಿ ಅಂತ ನಮ್ಮನ್ನೇ ಗದರಿಸುತ್ವೆ' ಅತ್ತೆಯೂ ದನಿಗೂಡಿಸಿದರು.

'ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಪಾಠ ಕಲಿಯೋದು, ಕಲಿಸೋದು ಎರಡೂ ಸವಾಲೇ!' ನಾನೆಂದೆ.

'ಅದೇನು ಕಲಿಯುತ್ವೆ? 68ನೇ ರಾಜ್ಯೋತ್ಸವ, ಕರ್ನಾಟಕ ಅಂತ ಮರುನಾಮಕರಣದ ಸುವರ್ಣ ಸಂಭ್ರಮ ಅಂತ ಕುಣಿದದ್ದೇ ಆಯಿತು. ಮೊನ್ನೆ ಪಕ್ಕದ್ಮನೆ ಹುಡುಗ ಒಳ್ಳೇ ಪೇಂಟಿಂಗ್ ತಂದಿದ್ದ. ಇದನ್ನು ಮಾಡಿದ್ದು ನಿಮ್ಮ ತಾಯಿನಾ ಅಂತ ಕೇಳಿದ್ರೆ, ಅಲ್ಲ ಮಮ್ಮಿ ಅನ್ನೋದೇ?'

'ನಿಮ್ಮ ಅಜ್ಜಿ ಮನೇಲಿದ್ದಾರಾ' ಅಂದ್ರೆ 'ಹಾಗೆ ಯಾರೂ ಇಲ್ಲ, ಗ್ರ್ಯಾನಿ ಇದ್ದಾರೆ' ಅಂತಾನೆ ಪೋರ! 'ಸಿಂಹ' ಅಂತ ಕನ್ನಡದಲ್ಲಿ ಬರೆಯೋಕ್ಕೆ ಹೇಳಿದರೆ 'ಸಿಮ್ಮ' ಅಂತ ಬರೀತಾನೆ. ನೋಡಿದರೆ ಐದನೇ ತರಗತಿಯಲ್ಲಿದ್ದಾನೆ! ಕನ್ನಡದಲ್ಲಿ ಪಾಸ್ ಮಾರ್ಕ್ ಬಂದರೆ ಸಾಕು ಅಂತಾನೆ. ಪರಭಾಷಾ ವ್ಯಾಮೋಹದಲ್ಲಿ, ನಮ್ಮ ಕನ್ನಡದ ಅವಸ್ಥೆ ನೋಡು ಹೇಗಿದೆ? ಎಳವೆಯಲ್ಲಿ ಸರಿಪಡಿಸದಿದ್ದರೆ ಮುಂದೆ ಹೇಗೆ?' ಅತ್ತೆಯ ಕಳಕಳಿ.

'ವಾರಕ್ಕೆ ಎಪ್ಪತ್ತು ಗಂಟೆ ದುಡಿದರೆ ದೇಶ ಮುನ್ನಡೆಯುತ್ತೆ ಅಂತ ಕೂಗು ಎದ್ದಿದೆ' ಕಂಠಿ ಬಂದವನೇ ಕಣ್ಣುಜ್ಜಿಕೊಂಡ. 'ನಾವು 24/7 ದುಡೀತಾನೆ ಇರ್ತೀವಲ್ಲ, ನಮ್ಮನ್ಯಾರೂ ಗಮನಿಸೋಲ್ಲ' ನನ್ನವಳ ಮಾತಿಗೆ ನೆತ್ತಿ ಹತ್ತಿ, ಕೆಮ್ಮಿದೆ.

'ಈ ಬಾರಿ ನಮ್ಮ ಆಫೀಸಿನ ರಾಜ್ಯೋತ್ಸವದಲ್ಲಿ 'ಉತ್ತಮ ಗೃಹಿಣಿ' ಪ್ರಶಸ್ತಿ ಕೊಡ್ತಿದ್ದಾರೆ. ನಿಮ್ಮ ಪ್ರೊಫೈಲ್ ಕೊಟ್ಟರೆ ನಿಮ್ಮನ್ನೂ ಶಿಫಾರಸು ಮಾಡಬಹುದು' ಕಂಠಿಯ ಪ್ರಸ್ತಾಪ.

'ಪ್ರೊಫೈಲ್ ನಾನು ರೆಡಿ ಮಾಡ್ತೀನಿ' ಅಂದೆ.

'ತರಕಾರಿ ಉಪ್ಪಿಟ್ಟು ಆಗ್ತಿದೆ, ಐದೇ ನಿಮಿಷ' ಅಡುಗೆಮನೆಯಿಂದ ಪರಿಮಳ ಬರತೊಡಗಿತು.

ಸಂಗತ

ಡಿ.ಜೆ. ಅಬ್ಬರಕ್ಕೆ ಬೇಕು ಅಂಕುಶ

ಕರಾಳಮುಖ ತೋರುತ್ತಿದ್ದರೂ ಡಿ.ಜೆಯ ಅಬ್ಬರ ತಗ್ಗಿಸುವ ಕಾರ್ಯ ಆಗುತ್ತಿಲ್ಲವೇಕೆ?

● ಸದಾಶಿವ್ ಸೊರಟೂರು

ಮೊನ್ನೆ ವಿಜಯದಶಮಿಯ ದಿನ ಹೊನ್ನಾಳಿಯಲ್ಲಿ ದೇವಿಯ ಮೆರವಣಿಗೆ ಇತ್ತು. ಆದರೆ ದೇವಿಗಿಂತ ಹೆಚ್ಚು ವಿಜೃಂಭಿಸಿದ್ದು ಡಿ.ಜೆಯ (ಡಿಸ್ಕ್ ಜಾಕಿ) ಸದ್ದು. ಈ ಸದ್ದು ಉಂಟುಮಾಡಿದ ಹಿಂಸೆ ಇತ್ತಲ್ಲ, ಅದನ್ನು ಆ ದೇವಿಯೂ ಕ್ಷಮಿಸಲಾರಳೇನೊ! ಡಿ.ಜೆ. ಸದ್ದಿಗೆ ಬೆಚ್ಚಿಬಿದ್ದ ಹನ್ನೊಂದು ತಿಂಗಳ ಮಗುವೊಂದು ಸಂಜೆಯಿಂದ ಶುರುವಿಟ್ಟು ಮಧ್ಯರಾತ್ರಿಯವರೆಗೂ ಉಸಿರುಗಟ್ಟಿ ಅತ್ತು ತೀವ್ರ ಗಂಭೀರ ಹಂತಕ್ಕೆ ತಲುಪಿತ್ತು. ಇನ್ನೊಂದು ಮನೆಯವರಿಗೆ ಇದರ ಅರಿವಿತ್ತೋ ಏನೊ, ಡಿ.ಜೆ. ಬರುತ್ತಿದ್ದಂತೆ ತಮ್ಮ ಹಸುಗೂಸನ್ನು ಆಟೊದಲ್ಲಿ ಎತ್ತಿಕೊಂಡು ಸದ್ದು ಬರದ ದೂರದ ಜಾಗಕ್ಕೆ ಹೊರಟುಹೋದರು.

ಜಗಳೂರಿನಲ್ಲಿ ಗಣೇಶ ವಿಸರ್ಜನೆ ವೇಳೆ ಡಿ.ಜೆ. ಸದ್ದಿಗೆ ಹೆಜ್ಜೆ ಹಾಕುತ್ತಿದ್ದ ಯುವಕನೊಬ್ಬ ಸ್ಥಳದಲ್ಲೇ ಕುಸಿದುಬಿದ್ದ. ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಹೃದಯಸ್ತಂಭನವಾಗಿ ಸತ್ತೇಹೋದ. ಕೊಪ್ಪಳದಲ್ಲೂ ಇಂತಹದ್ದೇ ಪ್ರಕರಣ ನಡೆದ ಉದಾಹರಣೆ ಇದೆ. ಡಿ.ಜೆ. ಸದ್ದಿಗೆ ರಾಯಚೂರಿನಲ್ಲಿ 19 ದಿನಗಳ ಹಸುಗೂಸು ಮಲಗಿದ್ದಲ್ಲೇ ಮೃತಪಟ್ಟಿದೆ ಎಂದು ದೂರೊಂದು ದಾಖಲಾಗಿದೆ.

ನಿಜಕ್ಕೂ ಅಬ್ಬರದ ಸದ್ದಿಗೆ ಸಾವು ಸಂಭವಿಸುವುದೇ? ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕಾರಣವಾಗಬಹುದು ಎನ್ನುತ್ತಾರೆ ವೈದ್ಯರು. ಹೃದಯದ ಅನಾರೋಗ್ಯ ಇದ್ದವರಿಗೆ ಅಬ್ಬರದ ಸದ್ದಿನಿಂದ ಎದೆಬಡಿತ ಒಮ್ಮೆಲೇ ಹೆಚ್ಚಾಗಬಹುದು. ಹೃದಯದ ಬಡಿತ ಏಕಾಏಕಿ ಹೆಚ್ಚಾಗುತ್ತಾ ಹೋದಂತೆ ನಿಂತುಹೋಗುವ ಸಾಧ್ಯತೆಯೂ ಇರುತ್ತದೆ. ಆಗ ಉಸಿರು ನಿಲ್ಲುತ್ತದೆ. ಸದ್ದು ಕೊಲೆಗಾರನಾಗುತ್ತದೆ.

ನಮ್ಮ ಕಿವಿಯ ತಮಟೆ ಎಷ್ಟು ಪ್ರಮಾಣದ ಸದ್ದನ್ನು ಸಹಿಸಿಕೊಳ್ಳಬಹುದು? ಪ್ರಾಥಮಿಕ ಶಾಲೆಯಲ್ಲೇ ಹೇಳಿಕೊಡುವ ಪಾಠ ಇದು. 70 ಡೆಸಿಬಲ್‌ವರೆಗಿನ ಸದ್ದು ನಮ್ಮ ಕಿವಿಗೆ ಹಿತ. ಡಿ.ಜೆಯ ಡೆಸಿಬಲ್ ಕೆಲವೊಮ್ಮೆ 130ಕ್ಕೂ ಮೀರಿರುತ್ತದೆ ಎಂದರೆ ನೀವು ನಂಬಲೇಬೇಕು. ಇಷ್ಟು ಮಟ್ಟದ ಸದ್ದನ್ನು ಕೇಳಿಸಿಕೊಂಡರೆ ಕಿವಿಯ ತಮಟೆ ಹರಿದು ನೂರು ಚೂರಾಗಬಹುದು. ಇದಕ್ಕೆ ಜೊತೆ ಜೊತೆಯಾಗಿ ಬರುವ ತಲೆಸುತ್ತು, ನಿದ್ರಾಹೀನತೆ, ಆತಂಕ, ಉದ್ವೇಗ, ಖಿನ್ನತೆ, ಕಿವಿಯಲ್ಲಿ ಸದಾ ಗುಂಯ್ ಅನ್ನುವ ಶಬ್ದದ ಕಿರಿಕಿರಿಯೂ ನಮಗೆ ಲಭ್ಯವಾಗುತ್ತವೆ.

ಇಷ್ಟೊಂದು ಕರಾಳ ಮುಖವನ್ನು ತೋರಿಸುತ್ತಿದ್ದರೂ ದಿನೇದಿನೇ ಡಿ.ಜೆಯ ಅಬ್ಬರ ಹೆಚ್ಚಾಗುತ್ತಿದೆ. ಡಿ.ಜೆ. ಇಲ್ಲದೆ ಯಾವುದೇ ಕಾರ್ಯಕ್ರಮ, ಉತ್ಸವ ಪೂರ್ಣವಾಗುವುದಿಲ್ಲ. ಆದರೆ ಅದರಿಂದ ಬಾಧಿತರಾಗುವವರ ಕೂಗು ಕೇಳುವವರು ಯಾರು? ಹೋರಿ ಬೆದರಿಸುವುದು, ಜಲ್ಲಿಕಟ್ಟಿನಂತಹ ಆಚರಣೆಗಳಲ್ಲಿ ತನ್ನಿಚ್ಛೆಯಂತೆ ಹೋಗಿ ಅಪಾಯ ತಂದುಕೊಳ್ಳುವವನ ರಕ್ಷಣೆಗೆ ನೀತಿ-ನಿಯಮಗಳಿವೆ. ಇಲ್ಲಿ ತನ್ನ ಪಾಡಿಗೆ ತಾನಿದ್ದಾಗಲೂ ಸದ್ದು ಬಂದು ಕೊಲ್ಲುತ್ತಿರುವಾಗ ವ್ಯವಸ್ಥೆ ಯಾಕೆ ಸುಮ್ಮನಿದೆ ಎಂಬುದು ಅರ್ಥವಾಗುತ್ತಿಲ್ಲ.

ಮೆರವಣಿಗೆ ತಪ್ಪಲ್ಲ. ಹಬ್ಬ, ಅದಕ್ಕೆ ಸಂಬಂಧಿಸಿದ ಆಚರಣೆಗಳು ನಿಜಕ್ಕೂ ನಾವು ಬದುಕನ್ನು ಇನ್ನಷ್ಟು ಸಂಭ್ರಮಿಸಲು ಮಾಡಿಕೊಂಡ ತುಂಬಾ ಸುಂದರವಾದ ವ್ಯವಸ್ಥೆಗಳು. ಹಾಡು-ಹಸೆ, ನೃತ್ಯ, ಹಲಗೆಯಂತಹ ವಾದ್ಯಗಳನ್ನು ಬಳಸಿ ಮಾಡಿದ ಹಬ್ಬಗಳನ್ನು, ಮೆರವಣಿಗೆಗಳನ್ನು, ಶುಭಕಾರ್ಯಗಳನ್ನು ನಾವು ಅನುಭವಿಸಿದ್ದೇವೆ. ಕಣ್ಣಿಗೂ ಮನಸ್ಸಿಗೂ ಅವು ಅದೆಷ್ಟು ಮುದ ಕೊಡುತ್ತಿದ್ದವು ಎಂಬುದನ್ನು ನೋಡಿದ್ದೇವೆ. ಮೆರವಣಿಗೆಯಲ್ಲಿ ಡೊಳ್ಳು, ಕೋಲಾಟ, ಓಲಗದಂತಹವು ಎಷ್ಟೊಂದು ಸೊಗಸು ಅನಿಸುತ್ತಿದ್ದವು. ಮನೆಗಳಲ್ಲಿ ಮದುವೆಯಂತಹ ಶುಭಕಾರ್ಯವಿದ್ದಾಗ ಹೊರಗೆ ತುಸು ಜೋರಾಗಿ ಹಾಡು ಹಾಕುವುದು ತುಂಬಾ ಹಿಂದಿನಿಂದಲೂ ಇದೆ. ಈಗ ನೆನಪಿರುವ ಎಷ್ಟೋ ಹಾಡುಗಳು ಬಾಲ್ಯದಲ್ಲಿ ಇಂತಹ ಕಾರ್ಯಕ್ರಮದಲ್ಲಿ ಕೇಳಿದ ಹಾಡುಗಳೇ ಆಗಿವೆ. ಬೀದಿಯಲ್ಲಿ ಜನ ಆ ಹಾಡುಗಳನ್ನು ತುಂಬಾ ಸಂಭ್ರಮದಿಂದ ಕೇಳಿಸಿಕೊಂಡು ಖುಷಿಪಡುತ್ತಿದ್ದರು. ಈಗ ಆ ಹಿತವಾದ ಹಾಡಿನ ಜಾಗದಲ್ಲಿ ಹಿಂಸಿಸುವ ಸದ್ದೊಂದು ಬಂದು ಕೂತಿದೆ. ಸಂಗೀತ ಒಂದು ಔಷಧಿಯಂತೆ ಎಂದು ಹೇಳುವ ಮಾತಿದೆ. ಆದರೆ ಸಂಗೀತವೇ ಕಾಯಿಲೆ ತಂದರೆ ಈ ಕಾಲಕ್ಕೆ ಏನನ್ನೋಣ?

ನಿಜಕ್ಕೂ ಹಬ್ಬ, ಮೆರವಣಿಗೆಗಳು ನಮ್ಮ ಸಂಭ್ರಮವನ್ನು ಬೇರೆಯವರಿಗೆ ಹಂಚುವ, ಅವರನ್ನೂ ನಮ್ಮ ಸಂಭ್ರಮದೊಳಗೆ ಕರೆತರುವ ಸ್ವರೂಪದವು. ಆದರೆ ಈಗೇನಾಗಿದೆ? ಡಿ.ಜೆ. ಹಾಕಿ ಬೇರೆಯವರಿಗೆ ತೊಂದರೆ ಕೊಟ್ಟು ನಾವು ಸಂಭ್ರಮಿಸುತ್ತಿದ್ದೇವೆ.

ಸಂಬಂಧಿಸಿದ ಇಲಾಖೆಯವರು ಇನ್ನು ಮೇಲಾದರೂ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಡಿ.ಜೆ. ಒದಗಿಸುವವರನ್ನು ಒಂದು ಪರವಾನಗಿಯಡಿ ತರಬೇಕು. ಡಿ.ಜೆಯ ಸದ್ದನ್ನು ಕಟ್ಟುನಿಟ್ಟಾಗಿ ಮಿತಿಗೆ ಒಳಪಡಿಸಬೇಕು. ಒಂದು ನಿರ್ದಿಷ್ಟ ಸಮಯ ನಿಗದಿಪಡಿಸಬೇಕು. ಮೆರವಣಿಗೆಯಲ್ಲಿ ಡಿ.ಜೆ. ಇರುವುದರ ಬಗ್ಗೆ ಮೊದಲೇ ಸೂಚನೆ ನೀಡಬೇಕು. ಡಿ.ಜೆ. ಆಯೋಜಿಸುವವರು ನಿರ್ದಿಷ್ಟ ಠೇವಣಿ ಇಡಬೇಕು. ಏನಾದರೂ ಅವಘಡಗಳಾದರೆ ಅದರಿಂದ ಪರಿಹಾರ ಕೊಡುವಂತೆ ಆಗಬೇಕು. ಪೊಲೀಸ್ ಇಲಾಖೆಯ ಕಾವಲು ಬೇಕು. ಈ ಸಂಬಂಧದ ನಿಯಮಗಳನ್ನು ಇನ್ನಷ್ಟು ಬಿಗಿ ಮಾಡಬೇಕು. ಅವು ಕಟ್ಟುನಿಟ್ಟಾಗಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕರಿಗೆ ತೊಂದರೆಯಾಗದಂತೆ, ಅವರ ಆರೋಗ್ಯಕ್ಕೆ ಧಕ್ಕೆಯಾಗದಂತೆ ನಿಗಾ ವಹಿಸಬೇಕು.

ಡಿಸ್ಕ್ ಜಾಕಿ ಎಂದರೆ ರೇಡಿಯೊ ಜಾಕಿ ತರಹದವನು. ಮಾತಿನ ಮಧ್ಯೆ ಹಾಡನ್ನು ತುಸು ಜೋರಾಗಿ ಕೇಳಿಸುತ್ತಿದ್ದವನು. ಎರಡನೇ ಮಹಾಯುದ್ಧದ ನಂತರ ಅಮೆರಿಕದಲ್ಲಿ ಇದಕ್ಕೊಂದು ವಿಶೇಷ ಸ್ಥಾನ ಇತ್ತು. ಇದು ಅಮೆರಿಕದ ಕಾಣಿಕೆ. ಜೋರಾಗಿ ಹಾಕುವ ಹಾಡಿನ ರೂಪದ ಡಿ.ಜೆ. ಈಗ ನಮ್ಮನ್ನು ಕೊಲ್ಲುವಂತಾದದ್ದು ಈ ಕಾಲದ ದೌರ್ಭಾಗ್ಯ.

ವಾಚಕರ ವಾಣಿ

ಇವರಿಗೇಕೆ ಭೇಟಿ ಸಾಧ್ಯವಾಗುತ್ತಿಲ್ಲ?

'ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ದಿನಬೆಳಗಾದರೆ ದೇಶದ ಪ್ರಧಾನಿ ಬಗ್ಗೆ ಹಗುರವಾಗಿ ಮಾತನಾಡಿದರೆ, ಟೀಕೆ ಮಾಡಿದರೆ ಯಾರು ತಾನೆ ಹತ್ತಿರ ಸೇರಿಸುತ್ತಾರೆ' ಎಂದು ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ಭೇಟಿಗೆ ಅವಕಾಶ ದೊರೆಯದಿರುವ ಬಗೆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ್ದಾರೆ. ಆದರೆ, ಸದಾ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮತ್ತು ಅವರ ನೇತೃತ್ವದ ಸರ್ಕಾರವನ್ನು ಹೊಗಳುವವರಿಗೂ ಮೋದಿ ಭೇಟಿ ದೊರಕದಿರುವ ಬಗ್ಗೆ ಅವರು ಮೌನವಾಗಿರುವುದು ಆಶ್ಚರ್ಯ ಎನಿಸುತ್ತದೆ.

ಅದೆಷ್ಟು ಬಾರಿ ಕರ್ನಾಟಕದ ಬಿಜೆಪಿ ಧುರೀಣರು ಮೋದಿ ಭೇಟಿಗಾಗಿ ದೆಹಲಿಗೆ ತೆರಳಿ, ಭೇಟಿ ಮಾಡಲಾಗದೆ ಬರಿಗೈಲಿ ಹಿಂತಿರುಗಲಿಲ್ಲ? ಬಿಜೆಪಿಯ ಹಿರಿಯ ಧುರೀಣ ಸದಾನಂದ ಗೌಡ ಅವರು ಇತ್ತೀಚೆಗೆ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಕರೆಯ ಮೇರೆಗೆ ದೆಹಲಿಗೆ ತೆರಳಿ, ಮೂರು ದಿನ ಕಾಯ್ದರೂ ಭೇಟಿ ಸಾಧ್ಯವಾಗದೆ ಸುಸ್ತಾಗಿ ಹಿಂತಿರುಗಿ ಬರಲಿಲ್ಲವೇ? ಇದನ್ನು ಕರ್ನಾಟಕ ಮತ್ತು ಕರ್ನಾಟಕದವರನ್ನು ದೆಹಲಿಯವರು ನಿಕೃಷ್ಟವಾಗಿ ನಡೆಸಿಕೊಳ್ಳುವ ಪರಿ ಎನ್ನಬಹುದೇ?

ರಮಾನಂದ ಶರ್ಮಾ, ಬೆಂಗಳೂರು

ಕಾತರದಿ ಕಾಯುತಿರುವೆ!

'ವಿಜಯನಗರದ ವೈಭವ
ಮರಳಿಸುವುದು ಆದ್ಯತೆ'–
ಮುಖ್ಯಮಂತ್ರಿ ಘೋಷಣೆ (ಪ್ರ.ವಾ., ನ. 3).
ನಾನೂ ಕಾತರದಿ ಕಾದಿರುವೆ ಖರೀದಿಸಲು
ಮಾರ್ಗದ ಬದಿಯಲ್ಲಿ ಮುತ್ತು, ರತ್ನ,
ವಜ್ರ, ವೈಢೂರ್ಯ ಯಾವಾಗ
ಮಾರಾಟ ಮಾಡುವರೋ ಎಂದು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಒಂದೇ ಸಂಘಕ್ಕೆ ಎಷ್ಟು ಬಾರಿ ಪ್ರಶಸ್ತಿ?

ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಈಗಾಗಲೇ 2007ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿತ್ತು. ಇದೀಗ ಈ ವರ್ಷವೂ ಮತ್ತೊಮ್ಮೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಲಾಗಿದೆ! ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಘಟಾನುಘಟಿ ಗಣ್ಯ ಸದಸ್ಯರ ಬಹುದೊಡ್ಡ ಪಟ್ಟಿಯೇ ಇದೆ. ದಾಖಲೆ ಪರಿಶೀಲಿಸಲು ಸಂಸ್ಕೃತಿ ಇಲಾಖೆ ಇದೆ. ಶಿವಮೊಗ್ಗ ಕರ್ನಾಟಕ ಸಂಘದ ಪರಿಚಯ ಪತ್ರದಲ್ಲೇ ಈಗಾಗಲೇ ಪ್ರಶಸ್ತಿ ಪಡೆದ ಬಗ್ಗೆ ತಿಳಿಸಲಾಗಿದೆ. ಗೂಗಲ್‌ನಲ್ಲೂ ಈ ವಿವರ ಕಾಣಿಸುತ್ತದೆ. ಹಾಗಿದ್ದರೂ ಈ ತಪ್ಪು ಹೇಗೆ ಸಂಭವಿಸಿತು? ಈ ತಪ್ಪಿನ ಹೊಣೆ ಯಾರದು?

ಗಿರಿಧರ ಕಾರ್ಕಳ, ಬೆಂಗಳೂರು

ಲೋಕಾಯುಕ್ತ ದಾಳಿ: ಶ್ವೇತಪತ್ರ ಹೊರಡಿಸಿ

ರಾಜ್ಯದ ವಿವಿಧ ಇಲಾಖೆಗಳ ಅಧಿಕಾರಿಗಳ ಮೇಲೆ ಇತ್ತೀಚೆಗೆ ಲೋಕಾಯುಕ್ತ ದಾಳಿ ನಡೆದಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. 17 ಸರ್ಕಾರಿ ಅಧಿಕಾರಿಗಳ ಕಚೇರಿ, ನಿವಾಸ ಸೇರಿದಂತೆ ಸುಮಾರು 70 ಕಡೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಅಪಾರ ಪ್ರಮಾಣದ ನಗದು, ಚಿನ್ನ, ಸ್ಥಿರಾಸ್ತಿ, ಐಷಾರಾಮಿ ವಾಹನಗಳು ಹಾಗೂ ಹೂಡಿಕೆಗಳ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ ಎನ್ನಲಾಗಿದೆ. ಲೋಕಾಯುಕ್ತ ದಾಳಿ ಹೊಸದೇನಲ್ಲ. ಅದು ಹೆಚ್ಚಿನ ಮಟ್ಟದಲ್ಲಿ ನಡೆಯುತ್ತಿದ್ದರೂ ಭ್ರಷ್ಟಾಚಾರ ಮಾತ್ರ ನಿಯಂತ್ರಣಕ್ಕೆ ಬರುತ್ತಿಲ್ಲ.

ಆರೋಪಕ್ಕೆ ಒಳಗಾದ ಅಧಿಕಾರಿಗಳನ್ನು ಸರ್ಕಾರವೇ ಮತ್ತೆ ಉನ್ನತ ಹುದ್ದೆಯಲ್ಲಿ ಕೂರಿಸಿದ ಉದಾಹರಣೆಗಳು ಬಹಳಷ್ಟಿವೆ. ಹಾಗಾಗಿ, ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ಆರೋಪಿ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರ ಶ್ವೇತಪತ್ರ ಹೊರಡಿಸುವುದು ಅಗತ್ಯ.

ಕೆ.ವಿ.ವಾಸು, ಮೈಸೂರು

ಕನ್ನಡ ಕಾರ್ಯಕ್ರಮ: ನಡೆಯಲಿ ವಿಮರ್ಶೆ

ಕರ್ನಾಟಕ ಸಂಭ್ರಮ– 50ರ ಲಾಂಛನ ಬಿಡುಗಡೆ ಮಾಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು ಹಾಗೂ ಅಧಿಕಾರಿಗಳು ಕನ್ನಡದ ಅವಗಣನೆ ಮಾಡುವ ಕುರಿತು ಆಕ್ಷೇಪ ವ್ಯಕ್ತಪಡಿಸಿರುವುದು ಸರಿಯಷ್ಟೆ. ಅದೇ ರೀತಿ ಕನ್ನಡ ಭಾಷೆ, ಸಾಹಿತ್ಯ, ಕಲೆ ಎಲ್ಲವೂ ವಿಶ್ವವ್ಯಾಪಿ ಆಗಬೇಕೆನ್ನುವ ಹಂಬಲ, ಆದರ್ಶ ಒಳ್ಳೆಯವೆ. ಆದರೆ ಕನ್ನಡದ ಹೆಸರಿನಲ್ಲಿ ಸಮ್ಮೇಳನಗಳನ್ನು ಆಯೋಜಿಸಿ, ಯೋಜನೆಗಳನ್ನು ರೂಪಿಸಿ, ಮೂರ್ನಾಲ್ಕು ದಿನಗಳ ಉತ್ಸವ ಮಾಡಿದರೆ ಜಗತ್ತಿನೆಲ್ಲೆಡೆ ಕನ್ನಡದ ಕಹಳೆ ಊದಿದಂತೆ ಆಗುತ್ತದೆಯೇ ಎಂಬುದು ಪ್ರಶ್ನೆ! ಏಕೆಂದರೆ, ಜನರ ತೆರಿಗೆ ಹಣವನ್ನು ಒಳಗೊಳ್ಳುವ ಕನ್ನಡದ ಕಾರ್ಯಕ್ರಮಗಳು ಒಂದೇ ಕಡೆ ಕೇಂದ್ರೀಕೃತವಾಗಿವೆ ಮತ್ತು ಇವುಗಳಿಗೆ ಬಳಕೆಯಾಗುವ ಹಣ ಸದ್ವಿನಿಯೋಗ ಆಗುತ್ತಿದೆಯೇ ಎಂಬುದರ ಕುರಿತು ನಾಡಪ್ರಜೆ ಹಾಗೂ ಪ್ರಭುತ್ವವು ಪ್ರಾಮಾಣಿಕ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಕನ್ನಡವು ಕರ್ನಾಟಕದಲ್ಲಿ, ಮುಖ್ಯವಾಗಿ ರಾಜಧಾನಿ ಬೆಂಗಳೂರಿನಲ್ಲೇ ಗಟ್ಟಿಯಾಗಿ ಇಲ್ಲ. ಭಾಷಾ ಶುದ್ಧಿಯು ಉತ್ತಮ ಸಂಸ್ಕಾರ, ಪೂರ್ಣತ್ವದ ಸಾಧನೆಯ ಸಂಕೇತ. ಅದು ಒಂದು ಜನಾಂಗದ ಅಭಿವೃದ್ಧಿಯ ಸೂಚಕ. ಅದರ ಅಭ್ಯಾಸ ಸರಿಯಾದರೆ ಸಂವಹನ ಸುಸೂತ್ರ. ಇಲ್ಲವಾದರೆ ಗೊಂದಲ ತಪ್ಪಿದ್ದಲ್ಲ.

ಆರ್.ವೆಂಕಟರಾಜು, ಬೆಂಗಳೂರು

ಮಾನಿಟರ್ರೇ ಹೀಗಾದರೆ?!

ವಿದ್ಯಾರ್ಥಿಗಳ ಗದ್ದಲ ನಿರ್ವಹಣೆ
ಕ್ಲಾಸ್ ಮಾನಿಟರ್‌ನ ಹೊಣೆ
ಮಾನಿಟರ್ರೇ ದಾಂದಲೆ ಎಬ್ಬಿಸಿದರೆ...
ತರಗತಿಯ ಶಿಸ್ತು ನಿಭಾಯಿಸುವವರಾರು?
(ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕೆ ನೀಡಿದ ನಂತರವೂ 'ನಾನೇ 5 ವರ್ಷ ಮುಖ್ಯಮಂತ್ರಿ' ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಆನಂದ ರಾಮತೀರ್ಥ, ಜಮಖಂಡಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

23ರವರೆಗೆ ತಮಿಳುನಾಡಿಗೆ ನೀರು: ಪ್ರಾಧಿಕಾರ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕವು ತಮಿಳುನಾಡಿಗೆ ಇದೇ 23ರವರೆಗೆ ಪ್ರತಿದಿನ 2,600 ಕ್ಯೂಸೆಕ್ ಕಾವೇರಿ ನೀರು ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಶುಕ್ರವಾರ ಆದೇಶಿಸಿದೆ. ಈ ಮೂಲಕ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಎತ್ತಿ ಹಿಡಿದಿದೆ.

ತಮಿಳುನಾಡಿಗೆ ನವೆಂಬರ್ 15ರ ವರೆಗೆ ನೀರು ಹರಿಸಲು ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿತ್ತು. ಪ್ರಾಧಿಕಾರದ ಸಭೆಯ ಆರಂಭದಲ್ಲೇ ಕರ್ನಾಟಕದ ಅಧಿಕಾರಿಗಳು, ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ಒಳಹರಿವು ಶೂನ್ಯವಾಗಿದೆ. ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ವಾದಿಸಿದರು. ತಮಿಳುನಾಡಿನ ಅಧಿಕಾರಿಗಳು, 'ಕರ್ನಾಟಕ ಸರ್ಕಾರವು ನೆಪ ಹೇಳುತ್ತಾ ಕಾಲಹರಣ ಮಾಡುತ್ತಿದೆ. ಸಂಕಷ್ಟದ ಸೂತ್ರದಡಿ 15 ಟಿಎಂಸಿ ಅಡಿಯಷ್ಟು ಹಿಂಬಾಕಿ ನೀರು ಸಹ ಹರಿಸಬೇಕು. ಪ್ರತಿದಿನ 13 ಸಾವಿರ ಕ್ಯೂಸೆಕ್ ಹರಿಸಲು ನಿರ್ದೇಶನ ನೀಡಬೇಕು' ಎಂದು ಮನವಿ ಮಾಡಿದರು.

'ಮೇಕೆದಾಟು ಯೋಜನೆ ಅನುಷ್ಠಾನಗೊಂಡರೆ ಈ ಎಲ್ಲ ಸಮಸ್ಯೆ ಪರಿಹಾರ ಆಗಲಿದೆ. ಆದರೆ, ಪ್ರಾಧಿಕಾರದ ಸಭೆಯಲ್ಲಿ ಮೇಕೆದಾಟು ಯೋಜನೆಯ ಚರ್ಚೆಯೇ ಆಗುತ್ತಿಲ್ಲ. ಸಭೆಯ ಕಾರ್ಯಸೂಚಿಯಲ್ಲಿ ವಿಷಯ ಸೇರ್ಪಡೆ ಮಾಡಿ ಯೋಜನೆಗೆ ಒಪ್ಪಿಗೆ ನೀಡಬೇಕು' ಎಂದು ಕರ್ನಾಟಕದ ಅಧಿಕಾರಿಗಳು ಆಗ್ರಹಿಸಿದರು.

'ಈ ವಿಷಯ ಸುಪ್ರೀಂ ಕೋರ್ಟ್‌ನಲ್ಲಿದೆ. ಸುಪ್ರೀಂ ಕೋರ್ಟ್‌ನಲ್ಲಿ ವ್ಯಾಜ್ಯ ಇತ್ಯರ್ಥವಾಗುವ ತನಕ ಚರ್ಚೆ ನಡೆಸುವಂತಿಲ್ಲ. ಈ ಬಗ್ಗೆ ಕೇಂದ್ರ ಜಲಶಕ್ತಿ ಸಚಿವರು ಸಹ ಸ್ಪಷ್ಟನೆ ನೀಡಿದ್ದಾರೆ' ಎಂದು ತಮಿಳುನಾಡಿನ ಅಧಿಕಾರಿಗಳು ಗಮನ ಸೆಳೆದರು.

ಪ್ರಾಧಿಕಾರದ ಅಧ್ಯಕ್ಷರು ಪ್ರತಿಕ್ರಿಯಿಸಿ, 'ಇದು ವಿಶೇಷ ಸಭೆ. ಇಂದಿನ ಸಭೆಯಲ್ಲಿ ಚರ್ಚೆ ನಡೆಸಲು ಸಾಧ್ಯವಿಲ್ಲ. ಈ ಬಗ್ಗೆ ಚರ್ಚೆ ನಡೆಸಲು ಶೀಘ್ರದಲ್ಲಿ ಸಭೆ ಕರೆಯಲಾಗುವುದು' ಎಂದು ಭರವಸೆ ನೀಡಿದರು.

ಶಿಕ್ಷಣ ಇಲಾಖೆ: ಅಂಗವಿಕಲ ಮಕ್ಕಳಿಗೆ ಸೌಲಭ್ಯ; ₹2.18 ಕೋಟಿ ದುರ್ಬಳಕೆ ಆರೋಪ

56 ಅಧಿಕಾರಿಗಳ ವಿರುದ್ಧ ಎಫ್‌ಐಆರ್

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ₹2.18 ಕೋಟಿ ಅನುದಾನ ದುರ್ಬಳಕೆ ಆರೋಪದ ಮೇಲೆ ಮೂವರು ನಿರ್ದೇಶಕರೂ ಸೇರಿ 56 ಅಧಿಕಾರಿಗಳ ವಿರುದ್ಧ ಎಂಟು ವರ್ಷಗಳ ಬಳಿಕ ಎಫ್‌ಐಆರ್ ದಾಖಲಾಗಿದ್ದು, ಸದ್ಯ ಕಾರ್ಯನಿರ್ವಹಿಸುತ್ತಿರುವ 22 ಅಧಿಕಾರಿಗಳನ್ನು ಅಮಾನತು ಮಾಡಲು ಶಿಕ್ಷಣ ಇಲಾಖೆ ಮುಂದಾಗಿದೆ.

ಕೇಂದ್ರ ಸರ್ಕಾರದ ಅನುದಾನದ ಸಮನ್ವಯ ಶಿಕ್ಷಣ ಯೋಜನೆಯ ಅಡಿ ಪ್ರೌಢಶಾಲಾ ಹಂತದಲ್ಲಿ ಓದುತ್ತಿರುವ ಅಂಗವಿಕಲ ಮಕ್ಕಳಿಗೆ ವಿಶೇಷ ಕಲಿಕಾ ವ್ಯವಸ್ಥೆ, ಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರ, ಸಾಧನ ಸಲಕರಣೆ, ಕಲಿಕೆ–ಬೋಧನೆ ಸಾಮಗ್ರಿಗಳ ಪೂರೈಕೆ, ವಿಶೇಷ ಶಿಕ್ಷಕರ ಗೌರವಧನದ ವೆಚ್ಚವಾಗಿ 2009–10ನೇ ಸಾಲಿನಿಂದ 2013–14ರವರೆಗೆ ₹18.39 ಕೋಟಿ ಖರ್ಚು ಮಾಡಲಾಗಿತ್ತು. ಅಷ್ಟೂ ಹಣವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ 2014ರಲ್ಲಿ ಬಿಡುಗಡೆ ಮಾಡಲಾಗಿತ್ತು.

ಹಗರಣಕ್ಕೆ ಎಂಟು ವರ್ಷ: ಇಲಾಖೆಗೆ ಸಲ್ಲಿಕೆಯಾದ ಬಿಲ್‌ಗಳಿಗಿಂತ ಹೆಚ್ಚುವರಿ ₹2.18 ಕೋಟಿ ಹಣ ಬಿಡುಗಡೆ ಮಾಡಿರುವುದನ್ನು 2015ರಲ್ಲಿ ನಡೆದಿದ್ದ ಲೆಕ್ಕಪರಿಶೋಧನಾ ವರದಿ ಬಹಿರಂಗಪಡಿಸಿತ್ತು. ಹಗರಣ ನಡೆದು ಎಂಟು ವರ್ಷಗಳ ಬಳಿಕ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಸೂಚನೆ ಮೇರೆಗೆ ಇಲಾಖೆಯ ನಿರ್ದೇಶಕ ಬಿ.ಎಸ್.ರಘುವೀರ ಅವರು ಬೆಂಗಳೂರಿನ ಹಲಸೂರು ಠಾಣೆಗೆ ದೂರು ಸಲ್ಲಿಸಿದ್ದರು. ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ.

ಅಂದು ಅನುದಾನ ಬಿಡುಗಡೆ ಮಾಡಿದ್ದ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿಯ ನಿರ್ದೇಶಕರಾಗಿದ್ದ ಕೆ.ಆನಂದ, ಜೊಹರಾ ಜಬೀನ್, ಅನುದಾನ ಕೋರಿ ಪ್ರಸ್ತಾವ ಸಲ್ಲಿಸಿದ್ದ ಅಲ್ಪಸಂಖ್ಯಾತರ ಶಿಕ್ಷಣದ ನಿರ್ದೇಶಕ ಮೀರ್ ಉಬೇದುಲ್ಲಾ, ತ್ರಿಸದಸ್ಯ ಸಮಿತಿ ನೀಡಿದ್ದ ವೆಚ್ಚದ ದಾಖಲೆಗಳನ್ನು ಪರಿಶೀಲಿಸಿದ್ದ ಹಿರಿಯ ಸಹಾಯಕ ನಿರ್ದೇಶಕಿ ಆರ್.ಮಂಜುಳಾ ಸೇರಿದಂತೆ ಕರ್ನಾಟಕ ಶಿಕ್ಷಣ ಸೇವೆಯ 56 ಅಧಿಕಾರಿಗಳು ಹಾಗೂ 22 ಸ್ವಯಂ ಸೇವಾ ಸಂಸ್ಥೆಗಳನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಗಿದೆ.

ನಾಲ್ವರು ಮೃತ, 30 ಜನ ನಿವೃತ್ತಿ: ಆರೋಪ ಹೊತ್ತವರಲ್ಲಿ ನಾಲ್ವರು ಈಗಾಗಲೇ ಮೃತಪಟ್ಟಿದ್ದಾರೆ. 30 ಅಧಿಕಾರಿಗಳು ನಿವೃತ್ತರಾಗಿದ್ದಾರೆ.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಓದುತ್ತಿರುವ ದೈಹಿಕ ಮತ್ತು ಮಾನಸಿಕ ನ್ಯೂನತೆ ಇರುವ ಪ್ರತಿ ಐದು ಮಗುವಿಗೆ ಒಬ್ಬ ವಿಶೇಷ ಶಿಕ್ಷಕರನ್ನು ನೇಮಿಸುವ, ಅವರಿಗೆ ಅಗತ್ಯವಾದ ಸೌಕರ್ಯಗಳನ್ನು ಕಲ್ಪಿಸುವ ಹೊಣೆಗಾರಿಕೆಯನ್ನು ರಾಜ್ಯದ 97 ಸಂಸ್ಥೆಗಳಿಗೆ ನೀಡಲಾಗಿತ್ತು. ಅವುಗಳಲ್ಲಿ 22 ಸಂಸ್ಥೆಗಳು ಅನುದಾನ ದುರ್ಬಳಕೆ ಮಾಡಿಕೊಂಡಿವೆ ಎಂದು ಆರೋಪಿಸಲಾಗಿದೆ. ಅಸ್ತಿತ್ವದಲ್ಲಿ ಇಲ್ಲದ ಕೆಲ ಸಂಸ್ಥೆಗಳು ಹಣ ಪಡೆದು ವಂಚಿಸಿರುವುದನ್ನೂ ಇಲಾಖೆ ಪತ್ತೆ ಮಾಡಿದೆ.

ಆರೋಪ ಪಟ್ಟಿಯಲ್ಲಿ ತಪ್ಪಿತಸ್ಥರಲ್ಲದವರ ಹೆಸರು

ಶಿಕ್ಷಣ ಇಲಾಖೆ ಎಫ್‌ಐಆರ್ ದಾಖಲಿಸಿರುವ ಅಧಿಕಾರಿಗಳಲ್ಲಿ ಅಂದು ಅನುದಾನ ಬಿಡುಗಡೆಯಾಗದೆ ಇರುವ ತಾಲ್ಲೂಕುಗಳ ಬಿಇಒಗಳ ಹೆಸರೂ ಸೇರಿವೆ. ಕೆಲ ಅಧಿಕಾರಿಗಳು ಇಲಾಖೆಯ ಸೂಚನೆ ಬಂದ ತಕ್ಷಣ ಹೆಚ್ಚುವರಿಯಾಗಿ ಹಂಚಿಕೆ ಮಾಡಿದ್ದ ಅನುದಾನವನ್ನು ಸ್ವಯಂಸೇವಾ ಸಂಸ್ಥೆಗಳಿಂದ ನಿಗದಿತ ಸಮಯದ ಒಳಗೆ ವಸೂಲಿ ಮಾಡಿ, ಇಲಾಖೆಗೆ ಜಮೆ ಮಾಡಿದ್ದಾರೆ. ಆದರೂ, ಅಂತಹ ಕೆಲ ಅಧಿಕಾರಿಗಳ ಹೆಸರು ಎಫ್‌ಐಆರ್‌ನಲ್ಲಿವೆ.

'ಸ್ವಯಂ ಸೇವಾ ಸಂಸ್ಥೆಗಳು ಖರ್ಚು ಮಾಡಿದಷ್ಟೇ ಹಣಕ್ಕೆ ಎಲ್ಲ ಅಧಿಕಾರಿಗಳು ಅನುಮೋದನೆ ನೀಡಿದ್ದಾರೆ. ಆಯಾ ಶಾಲೆಗಳ ಮುಖ್ಯ ಶಿಕ್ಷಕರು ನೀಡಿದ್ದ ಪಟ್ಟಿಯನ್ನು ನಿಯಮಾನುಸಾರ ಪರಿಶೀಲಿಸಿ ಬಿಇಒ, ಡಯಟ್‌ನ ಒಬ್ಬ ಹಿರಿಯ ಉಪನ್ಯಾಸಕ ಹಾಗೂ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರನ್ನು ಒಳಗೊಂಡ ತ್ರಿಸದಸ್ಯ ಸಮಿತಿ ಸಹಿ ಹಾಕಿದೆ. ಆದರೆ, ಹೆಚ್ಚುವರಿ ಹಣ ಬಿಡುಗಡೆ ಮಾಡುವಂತೆ ಅಂದು ಸ್ವಯಂ ಸೇವಾ ಸಂಸ್ಥೆಗಳು ಮಾಡಿದ್ದ ಮನವಿಗೆ ಸ್ಪಂದಿಸಿ, ಶಿಕ್ಷಣ ಇಲಾಖೆಯ ನಿರ್ದೇಶಕರೇ ಹಣ ಬಿಡುಗಡೆ ಮಾಡಿದ್ದಾರೆ. ವಿಷಯ ಗಮನಕ್ಕೆ ಬಂದ ತಕ್ಷಣ ಹೆಚ್ಚುವರಿ ಹಣ ವಸೂಲಿ ಮಾಡಿದ್ದೇವೆ. ಇದರಲ್ಲಿ ಇತರೆ ಅಧಿಕಾರಿಗಳ ತಪ್ಪಿಲ್ಲ. ನಮ್ಮ ಮನವಿ ಪರಿಶೀಲಿಸದೇ ಶಿಸ್ತುಕ್ರಮಕ್ಕೆ ಮುಂದಾದಾಗ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿಯ ಮೊರೆ ಹೋಗಿದ್ದೆವು. ನ್ಯಾಯಾಲಯ ಇಲಾಖೆಯ ಆದೇಶವನ್ನು ವಜಾ ಮಾಡಿದೆ. ಆದರೂ, ಇಲಾಖೆ ಎಫ್‌ಐಆರ್ ದಾಖಲಿಸಿದೆ. ಇದು ಸೇಡಿನ ಕ್ರಮ' ಎನ್ನುತ್ತಾರೆ ಅಂದು ಬಿಇಒಗಳಾಗಿದ್ದ ಸೋಮಶೇಖರ್, ಹಾಲಾನಾಯ್ಕ.

ಆರೋಪಿತರ ಹುದ್ದೆ	ಸಂಖ್ಯೆ
ನಿರ್ದೇಶಕರು	3
ಹಿರಿಯ ಸಹಾಯಕ ನಿರ್ದೇಶಕಿ	1
ಉಪ ನಿರ್ದೇಶಕರು	22
ಬಿಇಒಗಳು	30
ಸ್ವಯಂಸೇವಾ ಸಂಸ್ಥೆಗಳು	22
ಒಟ್ಟು	78

ಮುಖ್ಯಾಂಶಗಳು

- ಎಂಟು ವರ್ಷಗಳ ಬಳಿಕ ಎಫ್‌ಐಆರ್ ದಾಖಲು
- ಒಟ್ಟು 97ರಲ್ಲಿ 22 ಸಂಸ್ಥೆಗಳಿಂದ ಹಣ ದುರ್ಬಳಕೆ ಆರೋಪ

ಪ್ರಜಾವಾಣಿ ವಿಶೇಷ

'ಮಹಿಳಾ ಮೀಸಲಾತಿ ಗಣತಿ ನಂತರ ಅನುಷ್ಠಾನ: ಅಸಿಂಧುಗೊಳಿಸುವುದು ಕಷ್ಟ'

'ಸುಪ್ರೀಂ' ಸುದ್ದಿಗಳು

ನವದೆಹಲಿ (ಪಿಟಿಐ): ಮಹಿಳಾ ಮೀಸಲಾತಿಯು ಜನಗಣತಿಯ ನಂತರದಲ್ಲಿ ಅನುಷ್ಠಾನಕ್ಕೆ ಬರುತ್ತದೆ ಎಂದು ಹೇಳುವ ಭಾಗವನ್ನು ಅಸಿಂಧುಗೊಳಿಸುವುದು 'ಬಹಳ ಕಷ್ಟ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. 'ಇದೊಂದು ಒಳ್ಳೆಯ ನಡೆ' ಎಂದು ಪೀಠವು ಈ ಕಾನೂನಿನ ವಿಚಾರವಾಗಿ ಹೇಳಿದೆ.

ಮಹಿಳಾ ಮೀಸಲಾತಿ ಕಾನೂನನ್ನು ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೂ ಮೊದಲೇ ಅನುಷ್ಠಾನಕ್ಕೆ ತರುವಂತೆ ಆದೇಶಿಸಬೇಕು ಎಂದು ಕೋರಿ ಕಾಂಗ್ರೆಸ್ಸಿನ ಜಯಾ ಠಾಕೂರ್ ಅವರು ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯ ವಿಚಾರವಾಗಿ ನೋಟಿಸ್ ಜಾರಿಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರಿದ್ದ ವಿಭಾಗೀಯ ಪೀಠವು ನಿರಾಕರಿಸಿತು.

ಇದೇ ವಿಚಾರವಾಗಿ ಅರ್ಜಿಯೊಂದು ಸುಪ್ರೀಂ ಕೋರ್ಟ್‌ನಲ್ಲೇ ಬಾಕಿ ಇದೆ. ಆ ಅರ್ಜಿಯ ಜೊತೆಯಲ್ಲೇ ಜಯಾ ಅವರ ಅರ್ಜಿಯನ್ನು ನ.22ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು ಎಂದು ಪೀಠ ಹೇಳಿದೆ.

ಜಯಾ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ವಿಕಾಸ್ ಸಿಂಗ್ ಅವರ ವಾದವನ್ನು ಒಪ್ಪಲು ಪೀಠವು ನಿರಾಕರಿಸಿತು. ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಲು ಜನಗಣತಿಯ ದತ್ತಾಂಶದ ಅಗತ್ಯ ಇರುತ್ತದೆ. ಆದರೆ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವಲ್ಲಿ ಜನಗಣತಿಯ ಅಗತ್ಯದ ಪ್ರಶ್ನೆ ಬಂದಿದ್ದಾದರೂ ಹೇಗೆ ಎಂದು ಸಿಂಗ್ ಅವರು ವಾದಿಸಿದ್ದರು.

ಜನಗಣತಿಯ ನಂತರ ಈ ಕಾನೂನನ್ನು ಅನುಷ್ಠಾನಕ್ಕೆ ತರಲಾಗುತ್ತದೆ ಎಂದು ಹೇಳುವ ಭಾಗವನ್ನು ರದ್ದು ಮಾಡಿ ಎಂದು ಸಿಂಗ್ ಕೋರಿದ್ದರು.

'ನಿಮ್ಮ ವಾದವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಜನಗಣತಿಯ ಅಗತ್ಯವಿಲ್ಲ ಎಂದು ನೀವು ಹೇಳುತ್ತಿದ್ದೀರಿ. ಆದರೆ ಇಲ್ಲಿ ಬೇರೆ ಅಂಶಗಳೂ ಇವೆ. ಮೊದಲು ಕ್ಷೇತ್ರಗಳನ್ನು ಮೀಸಲಾಗಿ ಇರಿಸಬೇಕಾಗುತ್ತದೆ ಹಾಗೂ ಇತರ ಕೆಲವು ಅಂಶಗಳಿವೆ...' ಎಂದು ಪೀಠ ಹೇಳಿತು.

ಜಯಾ ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡುತ್ತಿಲ್ಲ. ಹಾಗೆಯೇ ಅರ್ಜಿಗೆ ಸಂಬಂಧಿಸಿದಂತೆ ನೋಟಿಸ್ ನೀಡುತ್ತಲೂ ಇಲ್ಲ. ಈಗಾಗಲೇ ವಿಚಾರಣೆಯ ಹಂತದಲ್ಲಿ ಇರುವ ಅರ್ಜಿಯೊಂದಕ್ಕೆ ಇದನ್ನು ಜೋಡಿಸಲಾಗುತ್ತಿದೆ ಎಂದು ಪೀಠ ತಿಳಿಸಿತು.

'ತಾರೀಖ್ ಪೆ ತಾರೀಖ್ ಕೋರ್ಟ್ ಆಗುವುದು ಇಷ್ಟವಿಲ್ಲ'

ನವದೆಹಲಿ (ಪಿಟಿಐ): ಹೊಸ ಪ್ರಕರಣಗಳಲ್ಲಿ ವಕೀಲರು ವಿಚಾರಣೆಯನ್ನು ಮುಂದೂಡುವಂತೆ ಕೋರಬಾರದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಶುಕ್ರವಾರ ಹೇಳಿದ್ದಾರೆ. ಸುಪ್ರೀಂ ಕೋರ್ಟ್ 'ಒಂದಾದ ನಂತರ ಒಂದರಂತೆ ದಿನಾಂಕ ನಿಗದಿ ಮಾಡುತ್ತಲೇ ಹೋಗುವ' (ತಾರೀಖ್ ಪೆ ತಾರೀಖ್) ನ್ಯಾಯಾಲಯ ಆಗುವುದನ್ನು ತಾವು ಬಯಸುವುದಿಲ್ಲ ಎಂದು ಚಂದ್ರಚೂಡ್ ಅವರು ಹೇಳಿದ್ದಾರೆ.

ಹೊಸ ಪ್ರಕರಣಗಳಲ್ಲಿ ವಕೀಲರು ದಿನಾಂಕವನ್ನು ಮುಂದೂಡುವಂತೆ ಕೋರುವುದರ ಬಗ್ಗೆ ಶುಕ್ರವಾರದ ಕಲಾಪ ಆರಂಭವಾದಾಗ ಪ್ರಸ್ತಾಪಿಸಿದ ಸಿಜೆಐ, ಕಳೆದ ಎರಡು ತಿಂಗಳುಗಳಲ್ಲಿ ವಕೀಲರು 3,688 ಪ್ರಕರಣಗಳಲ್ಲಿ ವಿಚಾರಣೆ ಮುಂದೂಡುವಂತೆ ಕೋರಿದ್ದಾರೆ ಎಂದರು.

'ತೀರಾ ಅಗತ್ಯ ಅಲ್ಲದಿದ್ದರೆ ವಿಚಾರಣೆ ಮುಂದೂಡಲು ಮನವಿ ಮಾಡಬೇಡಿ...' ಎಂದು ಸಿಜೆಐ ಹೇಳಿದರು. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಸಿಜೆಐ ಜೊತೆ ಪೀಠದಲ್ಲಿ ಇದ್ದರು.

ವಕೀಲರ ಸಂಘಗಳ ಸಹಾಯದಿಂದಾಗಿ, ಹೊಸ ಅರ್ಜಿಗಳನ್ನು ಸಲ್ಲಿಸಿದ ನಂತರದಲ್ಲಿ ಅವುಗಳನ್ನು ವಿಚಾರಣೆಗೆ ಪಟ್ಟಿ ಮಾಡಿಕೊಳ್ಳುವುದರವರೆಗಿನ ಅವಧಿಯನ್ನು ಗಣನೀಯವಾಗಿ ತಗ್ಗಿಸಲಾಗಿದೆ ಎಂದು ಸಿಜೆಐ ಹೇಳಿದರು. ಆದರೆ ಪ್ರಕರಣಗಳು ನ್ಯಾಯಾಲಯಗಳ ಮುಂದೆ ವಿಚಾರಣೆಗೆ ನಿಗದಿಯಾದ ನಂತರದಲ್ಲಿ, ವಕೀಲರು ದಿನಾಂಕ ಮುಂದೂಡುವಂತೆ ಕೋರುತ್ತಿರುವುದು ಹೊರಜಗತ್ತಿಗೆ ಬಹಳ ಕೆಟ್ಟ ಸಂದೇಶವನ್ನು ರವಾನಿಸುತ್ತಿದೆ ಎಂದು ಸಿಜೆಐ ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಒಡಲಿಗೆ 'ಸಿ.ಎಂ' ಕಿಚ್ಚು

ಒಂದನೇ ಪುಟದಿಂದ...

'ಎರಡೂವರೆ ವರ್ಷಗಳ ಬಳಿಕ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕು' ಎಂಬ ಕೂಗೆಬ್ಬಿಸಿದ್ದ ಶಿವಕುಮಾರ್ ಆಪ್ತ ಬಣಕ್ಕೆ ತಿರುಗೇಟು ನೀಡುವಂತೆ ಸಿದ್ದರಾಮಯ್ಯ ಹೇಳಿಕೆ ನೀಡಿದ್ದರು. ಆದರೆ, ಆಪ್ತವಲಯ ಮೆತ್ತಗಾದಂತೆ ತೋರುತ್ತಿಲ್ಲ. ಶಿವಕುಮಾರ್ ಸೋದರ, ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್, 'ಈಗ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಈ ಹುದ್ದೆ ಖಾಲಿ ಇಲ್ಲ. ಇಬ್ಬರು ನಾಯಕರೂ ಒಗ್ಗೂಡಿ ರಾಜ್ಯವನ್ನು ಅಭಿವೃದ್ಧಿಯ ಗುರಿಯತ್ತ ಕೊಂಡೊಯ್ಯುವ ಕೆಲಸ ಮಾಡುತ್ತಿದ್ದಾರೆ' ಎಂದು ಹೇಳುವ ಮೂಲಕ, ಈ ವಿಷಯದಲ್ಲಿ ಅಂತರ ಕಾಯ್ದುಕೊಂಡಿದ್ದಾರೆ. ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಮಾತ್ರ, ತಮ್ಮ ನಾಯಕನ ಪರ ಮತ್ತಷ್ಟು ಏರು ಧ್ವನಿಯಲ್ಲಿಯೇ ಮಾತನಾಡಿ, ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು ಎಂದು ಪ್ರತಿಪಾದಿಸಿದ್ದಾರೆ.

ಈ ಬೆಳವಣಿಗೆಗಳ ಮಧ್ಯೆಯೇ, ಶುಕ್ರವಾರ ಗದಗದಲ್ಲಿ ನಡೆದ ಕರ್ನಾಟಕ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಒಂದೇ ವೇದಿಕೆಯಲ್ಲಿ ಅಕ್ಕಪಕ್ಕದಲ್ಲೇ ಕುಳಿತಿದ್ದ ಇಬ್ಬರು ನಾಯಕರು ಪರಸ್ಪರ ಮಾತನಾಡಲಿಲ್ಲ ಎಂದು ಹೇಳಲಾಗಿದೆ.

ಕಾರ್ಯಕ್ರಮದ ಬಳಿಕ, 'ಐದು ವರ್ಷ ನಾನೇ ಮುಖ್ಯಮಂತ್ರಿ' ಎಂದು ಸಿದ್ದರಾಮಯ್ಯ ಹೇಳಿದ್ದಾರಲ್ಲ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, 'ಯಾರು ಏನೇ ಅಂದರೂ ಸಂತೋಷ' ಎಂದಷ್ಟೇ ಪ್ರತಿಕ್ರಿಯಿಸಿದರು.

ತುಮಕೂರಿನಲ್ಲಿ ಮಾತನಾಡಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ, 'ಸಿದ್ದರಾಮಯ್ಯನವರು ತಾವಾಗಿಯೇ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟರೆ, ಪರಮೇಶ್ವರ ಮುಖ್ಯಮಂತ್ರಿಯಾಗಬೇಕು. ಹಿಂದೆ ನಾನು ಹೇಳಿದ್ದೆಲ್ಲವೂ ಸತ್ಯವಾಗಿದೆ. ಪರಮೇಶ್ವರ ಮುಖ್ಯಮಂತ್ರಿಯಾಗಿಯೇ ಆಗುತ್ತಾರೆ' ಎಂದೂ ಹೇಳಿದ್ದಾರೆ. 'ಬೇರೆ ಯಾರಿಗೂ ಸ್ಥಾನ ಕೂಡದು' ಎನ್ನುವ ಮೂಲಕ, ಮುಖ್ಯಮಂತ್ರಿಯಾಗುವ ಹಂಬಲ ಇರುವ ಶಿವಕುಮಾರ್ ಅವರಿಗೆ ಪರೋಕ್ಷ ಸವಾಲನ್ನೂ ಒಡ್ಡಿದ್ದಾರೆ.

ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆಯವರ ಮಗ ಪ್ರಿಯಾಂಕ್ ಖರ್ಗೆ, ತಾವೂ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿ ಎಂದು ಮೊದಲ ಬಾರಿಗೆ ಬಿಂಬಿಸಿಕೊಂಡಿದ್ದಾರೆ. 'ಮುಖ್ಯಮಂತ್ರಿ ಯಾರಾಗಬೇಕು, ಯಾರು ಮುಂದುವರಿಯಬೇಕು ಎಂಬುದು ಹೈಕಮಾಂಡ್ ತೀರ್ಮಾನ' ಎಂದ ಅವರು, 'ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬ ಸಿದ್ದರಾಮಯ್ಯ ಹೇಳಿಕೆ ವೈಯಕ್ತಿಕವಾದದು' ಎನ್ನುವ ಮೂಲಕ, ಬೇರೊಂದು ರೀತಿಯ ಸಂದೇಶ ನೀಡುವ ಕೆಲಸವನ್ನೂ ಮಾಡಿದ್ದಾರೆ.

ಸಂಪುಟ ಪುನಾರಚನೆ, ಮೂವರು ಉಪಮುಖ್ಯಮಂತ್ರಿ ಸೃಷ್ಟಿ, ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕದ ವಿಷಯಗಳು ಬದಿಗೆ ಸರಿದಿದ್ದು, ಮುಖ್ಯಮಂತ್ರಿ ಸ್ಥಾನದ ವಿಚಾರವೇ ಕಾಂಗ್ರೆಸ್‌ನಲ್ಲಿ ಮುನ್ನೆಲೆಗೆ ಬಂದಂತಾಗಿದೆ.

'ಎಲ್ಲರ ಹೇಳಿಕೆಗಳಿಗೆ ಪ್ರತಿಕ್ರಿಯಿಸಲು ಆಗಲ್ಲ'

'ಜಾತಿಗಣತಿ ವರದಿ ಪಡೆಯುವಾಗ ಅಭಿಪ್ರಾಯ ಕೇಳಬೇಕು' ಎಂಬ ನಂಜಾವಧೂತ ಸ್ವಾಮೀಜಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಜಾತಿ ಗಣತಿ ಇನ್ನು ಕೊಟ್ಟಿಲ್ಲ. ಯಾರೋ ಹೇಳಿದರು ಅಂತ ಎಲ್ಲರಿಗೂ ಪ್ರತಿಕ್ರಿಯಿಸಲು ಆಗುವುದಿಲ್ಲ. ವರದಿ ಬಂದ ನಂತರ ಮಾತನಾಡುವೆ. ಇದು ಜಾತಿ ಗಣತಿ ಅಲ್ಲ. ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕೆಬಿಜೆಎನ್‌ಎಲ್ ಎಂ.ಡಿ ಅಮಾನತು

ಒಂದನೇ ಪುಟದಿಂದ...

ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಆರಂಭದಿಂದ 95 ಕಿ.ಮೀ.ವರೆಗಿನ ಆಧುನೀಕರಣ ಪ್ಯಾಕೇಜ್ ಕಾಮಗಾರಿ ಹಾಗೂ ಒಂದರಿಂದ 18ರವರೆಗಿನ ಉಪ/ಸೀಳು ಕಾಲುವೆಗಳ ನಿರ್ಮಾಣ, ವಿಸ್ತರಣೆ ಮತ್ತು ನವೀಕರಣ ಕಾಮಗಾರಿಗಳಲ್ಲಿ ಭಾರಿ ಅಕ್ರಮ ನಡೆಸಿರುವ ಆರೋಪವಿದೆ. ಈ ಕುರಿತು ವಿಧಾನಸಭೆಯ ಅಂದಾಜುಗಳ ಸಮಿತಿಯು ತನಿಖೆ ನಡೆಸುತ್ತಿದೆ.

'ಕಾಮಗಾರಿಗಳನ್ನು ಕೈಗೊಂಡಿರುವುದು, ದರಪಟ್ಟಿ ಸಿದ್ಧಪಡಿಸಿರುವುದು, ಮಾಪನ ಪುಸ್ತಕಗಳನ್ನು ಬರೆದಿರುವುದು, ಮುರುಂ ಸಾಗಾಣಿಕೆ, ಏರಿ ನಿರ್ಮಾಣದಲ್ಲಿ ಭಾರಿ ಅಕ್ರಮ ನಡೆದಿದ್ದು, ಸರ್ಕಾರದ ಬೊಕ್ಕಸಕ್ಕೆ ಅಪಾರ ನಷ್ಟ ಉಂಟಾಗಿದೆ' ಎಂದು ಅಂದಾಜು ಸಮಿತಿ ಹೇಳಿತ್ತು. ಈ ಕುರಿತು ಪರಿಶೀಲಿಸಿ ವರದಿ ನೀಡಲು ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯದರ್ಶಿ ಎಸ್.ಬಿ. ಸಿದ್ದಗಂಗಪ್ಪ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ನೇಮಿಸಿ 2022ರ ಜೂನ್ 10ರಂದು ಆದೇಶ ಹೊರಡಿಸಲಾಗಿತ್ತು.

ಪರಿಶೀಲನಾ ಸಮಿತಿಗೆ ವರದಿ ಸಲ್ಲಿಸಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿತ್ತು. ಸಮಿತಿಯು ವರದಿ ನೀಡುವ ಮೊದಲೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಿರುವುದು ಕಂಡು ಬಂದಿದೆ. ಈ ಪ್ರಕರಣದಲ್ಲಿ ಶಿವಕುಮಾರ್ ಕರ್ತವ್ಯಲೋಪ ಎಸಗಿರುವುದು ಮತ್ತು ಅವ್ಯವಹಾರ ನಡೆಸಿರುವುದು ಕಂಡುಬಂದಿರುವುದರಿಂದ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಜಲ ಸಂಪನ್ಮೂಲ ಇಲಾಖೆಯು ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ.

ಉನ್ನತ ಮಟ್ಟದ ತನಿಖೆಗೆ ಸೂಚನೆ: ವಿರೋಧ ಪಕ್ಷದ ನಾಯಕರಾಗಿದ್ದ ಅವಧಿಯಲ್ಲಿ ತಾವೇ ಸದನದಲ್ಲಿ ಪ್ರಸ್ತಾಪಿಸಿದ್ದ ವಿಚಾರಗಳಿಗೆ ವಿರುದ್ಧವಾಗಿ ಪ್ರಸ್ತಾವ ಸಲ್ಲಿಸಿದ್ದ ಅಧಿಕಾರಿಯ ವಿರುದ್ಧ ಸಿದ್ದರಾಮಯ್ಯ ಕೆಂಡಾಮಂಡಲ ಆಗಿದ್ದರು ಎಂದು ಮೂಲಗಳು ತಿಳಿಸಿವೆ.

ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ವಹಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಒಂದೆರಡು ದಿನಗಳಲ್ಲಿ ಈ ಕುರಿತು ಪ್ರತ್ಯೇಕ ಆದೇಶ ಹೊರಡಿಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ಹೇಳಿವೆ.

ನಾವು ನೋಡಿದ ಸಿನಿಮಾ

ಛಾಯಾಚಿತ್ರದ ಕಥೆಯಲ್ಲಿ ಭಾವದ ಕೊರತೆ

ಭಾವಪೂರ್ಣ

- **ನಿರ್ಮಾಣ:** ಪ್ರಶಾಂತ್ ಅಂಜನಪ್ಪ
- **ನಿರ್ದೇಶನ:** ಚೇತನ್ ಮುಂಡಾಡಿ
- **ತಾರಾಗಣ:** ರಮೇಶ್ ಪಂಡಿತ್, ಮಂಜುನಾಥ್ ಹೆಗಡೆ, ಶೈಲಶ್ರೀ ಧರ್ಮೇಂದ್ರ ಅರಸ್ ಮತ್ತಿತರರು

ತಾಳಗುಪ್ಪ ಹೋಬಳಿಯ ಗ್ರಾಮ ಪಂಚಾಯ್ತಿ ಸಿಬ್ಬಂದಿ ಧರ್ಮಣ್ಣ, ಸಾಯುವುದರೊಳಗೆ ತನ್ನದೊಂದು ಭಾವಚಿತ್ರ ತೆಗೆಸಿಕೊಳ್ಳಬೇಕು ಎಂಬುದು ಆತನ ಆಸೆ. ಅದು ಸಾಧ್ಯವಾಗುತ್ತದೆಯೋ, ಇಲ್ಲವೋ ಎಂಬುದನ್ನೇ ಕಥೆಯಾಗಿಸಿಕೊಂಡ ಚಿತ್ರ 'ಭಾವಪೂರ್ಣ'. ಒಟ್ಟಾರೆ ಕಥೆ ಥಟ್ಟನೆ ಮರಾಠಿಯ 'ಫೋಟೊ ಫ್ರೇಮ್' ಸಿನಿಮಾವನ್ನು ನೆನಪಿಸುತ್ತದೆ. 'ಫೋಟೊ'ದಲ್ಲಿ ಮಾಯಿ ಪಾತ್ರ ಮಾಡಿದ ನೀನಾ ಕುಲಕರ್ಣಿ ಅವರಿಗೆ ಛಾಯಾಚಿತ್ರ ತೆಗೆಸಿಕೊಳ್ಳಲು ನಿಂತುಕೊಳ್ಳುವುದೆಂದರೆ ಒಂದು ರೀತಿ ಮುಜುಗರ. ಇಲ್ಲಿ ಧರ್ಮಣ್ಣನದ್ದು ತದ್ವಿರುದ್ಧದ ಪಾತ್ರ. ರಮೇಶ್ ಪಂಡಿತ್ ಈ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಇದು 20 ವರ್ಷ ಹಿಂದಿನ ಕಾಲಘಟ್ಟದ ಕಥೆ. ಅದಕ್ಕೆ ಬೇಕಾದ ಸನ್ನಿವೇಶಗಳನ್ನು ನಿರ್ದೇಶಕರು ಬಹಳ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಚಿತ್ರೀಕರಣದ ಸ್ಥಳ ಮತ್ತು ಛಾಯಾಗ್ರಾಹಕ ಪ್ರಸನ್ನ ಅವರ ಕ್ಯಾಮರಾ ಕೆಲಸ ಇಡೀ ಚಿತ್ರದ ಹೈಲೆಟ್. ಕಲಾ ನಿರ್ದೇಶಕರೂ ಆಗಿರುವ ಚಿತ್ರದ ನಿರ್ದೇಶಕ ಚೇತನ್ ಮುಂಡಾಡಿ ಚಿತ್ರದ ಪ್ರತಿ ಫ್ರೇಮ್ ಅನ್ನು ವರ್ಣಮಯವಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಈ ವರ್ಣಮಯ ಜಗತ್ತಿನಿಂದಾಗಿಯೇ ಎಷ್ಟೋ ಕಡೆ ಕಥೆ ನಡೆಯುತ್ತಿರುವುದು ಪ್ರಸ್ತುತದಲ್ಲಿ ಎಂಬ ಭಾವ ಮೂಡುತ್ತದೆ. ಸಾಕಷ್ಟು ಕಡೆ ಹಳೆಯ ಕಾಲದ ಕೆಲವಷ್ಟು ವಸ್ತುಗಳನ್ನು ತೋರಿಸಲೆಂದೇ ದೃಶ್ಯ ಹೆಣೆದಂತೆ ಭಾಸವಾಗುತ್ತದೆ. ಇದು ಚಿತ್ರಕಥೆಯ ಉದ್ದೇಶವನ್ನೇನೂ ಈಡೇರಿಸುವುದಿಲ್ಲ.

ಫೋಟೊ ತೆಗೆಸಿಕೊಳ್ಳಲು ಧರ್ಮಣ್ಣ ಪರದಾಡುವುದರ ನಡುವೆ ಶೇಖರಿ, ರಾಧಾಳ ಒಂದು ಪುಟ್ಟ ಪ್ರೇಮಕಥೆಯ ಟ್ರ್ಯಾಕ್ ತೆರೆದುಕೊಳ್ಳುತ್ತದೆ. ಈ ಕಥೆಯಲ್ಲಿ ನಿರ್ದೇಶಕರು ಇಂಪಾದ ಹಾಡುಗಳಿಗೂ ಜಾಗ ನೀಡಿದ್ದಾರೆ. ಆದರೆ, ಚಿತ್ರದ ಮುಖ್ಯವಾದ ಕಥೆಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ; ಸುಮ್ಮನೆ ತುರುಕಿದಂತೆ ಭಾಸವಾಗುತ್ತದೆ.

ರಮೇಶ್ ಪಂಡಿತ್, ಮಂಜುನಾಥ್ ಹೆಗಡೆಯವರಂತಹ ನುರಿತ ಕಲಾವಿದರಿಂದ ಸಹಜ ನಟನೆ ತೆಗೆಸುವಲ್ಲಿ ನಿರ್ದೇಶಕರು ಕೆಲವೆಡೆ ಎಡವಿದಂತಿದೆ. ಸದಾ ಬೈಯುತ್ತಲೇ ಇರುವ ಧರ್ಮಣ್ಣನ ಪತ್ನಿಯ ಪಾತ್ರ, ಅಸಹಜವೆನಿಸುವ ಮಂಜುನಾಥ್ ಹೆಗಡೆಯವರ ಹಾಸ್ಯ ಒಂಚೂರು ಕಿರಿಕಿರಿಯನ್ನೇ ಮೂಡಿಸುತ್ತದೆ. ಕಥೆಯ ಸ್ವರೂಪ, ಕ್ಲೈಮ್ಯಾಕ್ಸ್ ಚೆನ್ನಾಗಿದೆ. ಚಿತ್ರಕಥೆ ಒಂದು 'ಭಾವಪೂರ್ಣ' ಪಯಣ ಮಾಡಿಸುವಷ್ಟು ಗಟ್ಟಿಯಾಗಬೇಕಿತ್ತು.

-ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5490

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಒಪ್ಪವಾಗಿ ಕಾಪಾಡುವವ ಬಂದಿದ್ದಾನೆ (5)
4.ಎಲ್ಲವನ್ನೂ ತಿಳಿದವನು (3)
5.ವರ ಮಾಡಿರುವ ಒತ್ತಾಯ (3)
6.ವೀಣೆಯಲ್ಲಿಯೇ ನೆಟ್ಟಿರುವ ದೃಷ್ಟಿ (3)
7.ನೂಲು ತೆಗೆಯುವ ಸಾಧನ (3)
9.ಹತ್ತಿರದಲ್ಲಿರುವ ಅರಳೆ (2)
10.ಆರ್ಭಟದಲ್ಲಿನ ಕ್ರೀಡೆ ಕಾಣುತ್ತಿದೆಯೇ? (2)
12.ಔಚಿತ್ಯವನ್ನು ಮೀರಿದ ಸ್ನೇಹ (3)
14.ಮಜದಲ್ಲಿರುವ ಮನುಷ್ಯ (3)
15. ಮೋಕ್ಷ ಮಾಡಿಸಿಕೊಂಡಿರುವ ಕನ್ನೆ ಉಲ್ಟಾಆಗಿದೆ (3)
16.ಪ್ರತಿಯಲ್ಲಿರುವ ದೊಡ್ಡವ್ಯಕ್ತಿ (3)
17.ರುಚಿಕಟ್ಟಾದ ಭೋಜನ (5)

ಮೇಲಿಂದ ಕೆಳಕ್ಕೆ

1.ಕೃಷ್ಣನ ಮೊಮ್ಮಗ (4)
2.ಮೃಗದ ನಡುವಳಿಕೆಯಿದು (5)
3.ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ (3)
4.ಎಡಬಿಡದೆ ಎಂದು ಹೀಗನ್ನಿ (3)
8.ಆಟದ ಕೊನೆಗೆ ತೆರೆದ ಬಾಗಿಲು (3)
9.ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ (3)
10.ಸಸ್ಯಗಳು ನೀಡುವ ಪ್ರಾಣವಾಯುವಿದು (5)
11.ಕೊನೆಗೆ ರಾಳವಿದ್ದಾಗಲೇ ನಡುವಣ ವಸ್ತು ಗೋಚರ (4)
13. ಸ್ನೇಹಿತೆ ಇಲ್ಲಿದ್ದಾಳೆ (3)
14.ಮರದೊಳಗಿರುವ ಮೊಸಳೆ (3)

5489ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಬ 4.ಸಂದೇಹ
6.ಲಾಭಬಡುಕ
7.ತಮ 9.ತಡ
10.ಸರ 11.ಗುರಿ
16.ನಯವಂಚಕ
17.ನಡುಕ 18.ವಿಸ್ಮೃತಿ

ಮೇಲಿಂದ ಕೆಳಕ್ಕೆ:
1.ಆಯಸ್ಕಾಂತ 2.ಬಲಾಢ್ಯ
3.ಸಿಂಬಳ 4.ಸಂಕಟ
5.ಹತ್ಯಾಕಾಂಡ 8.ಮಯೂರ
9.ತರಗು
10.ಸಮಾಧಾನ
12.ರಿಯಾಯಿತಿ
13.ಜನಕ 14.ಧಾವಂತ
15.ಕುಕವಿ

ಸುಡೊಕು 5876

	7			2		3		5
3		6	5		8		1	
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

5875 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಸಪ್ತಮಿ ಗಂ. 25-00 ನಕ್ಷತ್ರ: ಪುನರ್ವಸು ಗಂ. 07-57 ಯೋಗ: ಸಾಧ್ಯಾ ಗಂ 13-02 ಕರಣ: ವಿಷ್ಟಿ ಗಂ. 12-00, ತುಲಾ ಮಾಸದ 18 ನೇ ದಿನ, ಮಳೆನಕ್ಷತ್ರ: ಸ್ವಾತಿ 4. ರಾಹುಕಾಲ : ಬೆಳಿಗ್ಗೆ 09-00 - 10-30 ಸೂರ್ಯೋದಯ : 06-29 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 19 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 6, 2

ಮೇಷ: ಲೆಕ್ಕ ಪರಿಶೋಧಕರಿಗೆ ಮತ್ತು ನ್ಯಾಯವಾದಿಗಳಿಗೆ ತೃಪ್ತಿಕರವಾದ ದಿನಗಳು. ಆರ್ಥಿಕ ತಾಪತ್ರಯಗಳು ಯಾರಲ್ಲಿಯೂ ಹೇಳಿಕೊಳ್ಳಲಾಗದಂತಾಗಲಿದೆ. ಸಂಜೆಯ ಸಮಯದಲ್ಲಿ ತಲೆ ನೋವಿನಂಥ ಸಮಸ್ಯೆ ಎದುರಾಗಬಹುದು.

ವೃಷಭ: ಹಾಸ್ಯ ಪ್ರಜ್ಞೆ ಹೆಚ್ಚುವುದು. ಆದರೆ ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು. ಧರ್ಮಕಾರ್ಯಗಳಿಗೆ ಧನ ವ್ಯಯವಾಗಲಿದೆ.

ಮಿಥುನ: ಉದ್ಯೋಗದ ಹುಡುಕಾಟ ನಡೆಸುವವರಿಗೆ ಅಪರಿಚಿತ ವ್ಯಕ್ತಿಯಿಂದ ಸಹಾಯ ಆಗುವುದು. ಹೂಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭವಿದೆ. ಮಹಿಳೆಯರಿಗೆ ಆಡಳಿತ ಅಧಿಕಾರಗಳು ಲಭ್ಯವಾಗಲಿದೆ.

ಕರ್ಕಾಟಕ: ಹೊಸ ಮನೆಯ ಅಥವಾ ನಿವೇಶನದ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ಕಂದಾಯ ಅಧಿಕಾರಿಗಳಿಗೆ ಕೆಲಸದ ಹೊಣೆ ಹೆಚ್ಚುವುದು. ವ್ಯಾಪಾರಗಳು ಸರಾಗವಾಗಿ ನಡೆಯಲಿವೆ.

ಸಿಂಹ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ನಡೆಯುವುದು. ಕಬ್ಬಿಣ ಮುಂತಾದ ಕಟ್ಟಡ ನಿರ್ಮಾಣದ ಸಾಮಗ್ರಿಗಳಿಂದ ಲಾಭವಿದೆ. ಕಾರ್ಖಾನೆ ಕೆಲಸಗಾರರಿಗೆ ಕೆಲಸ ಇರುವುದು.

ಕನ್ಯಾ: ತಾಯಿಯ ಅಥವಾ ಸೋದರ ಮಾವನ ಆರೋಗ್ಯದ ವ್ಯತ್ಯಾಸದಿಂದ ದಿನಚರಿಯಲ್ಲಿ ಬದಲಾವಣೆ ಉಂಟಾಗುತ್ತದೆ. ರಾಜಕೀಯ ವಿಷಯಗಳಲ್ಲಿ ಮೌನ ವಹಿಸುವುದು ಲೇಸು. ಕೋರ್ಟಿನ ವ್ಯವಹಾರಗಳಲ್ಲಿ ಜಯ.

ತುಲಾ: ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ, ಏಕಾಗ್ರತೆಯನ್ನು ಕಾಯ್ದುಕೊಳ್ಳಿ. ಇಂದಿನ ಎಲ್ಲಾ ಬೆಳವಣಿಗೆಗಳಿಗೂ ನಾಯಕತ್ವವನ್ನು ವಹಿಸಲಿದ್ದೀರಿ. ಪ್ರೀತಿ-ಪ್ರೇಮದ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆ.

ವೃಶ್ಚಿಕ: ಉನ್ನತ ಶಿಕ್ಷಣಕ್ಕಾಗಿ ಅದರಲ್ಲೂ ಮುಖ್ಯವಾಗಿ ವೈದ್ಯಕೀಯ ಅಧ್ಯಯನ ನಡೆಸುವವರು ವಿದೇಶ ಪ್ರಯಾಣ ಆಲೋಚನೆ ಮಾಡಬಹುದು. ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವ ಸನ್ನಿವೇಶಗಳು ಎದುರಾಗುವುದು.

ಧನು: ಉದ್ಯಮಿಗಳು ಕೆಲಸಗಾರರಲ್ಲಿ ಯಾವುದೇ ಮನಸ್ತಾಪಗಳನ್ನು ಮಾಡಿಕೊಳ್ಳಬೇಡಿ. ಇದು ಸಾಧನೆಯಲ್ಲಿ ಮೇಲಕ್ಕೆ ಸಾಗಲು ಸಹಕಾರಿಯಾಗಲಿದೆ. ವ್ಯವಹಾರದಲ್ಲಿ ಸಣ್ಣ ಪುಟ್ಟ ನಷ್ಟ ಸಂಭವಿಸುತ್ತದೆ.

ಮಕರ: ವ್ಯವಹಾರ ಸಂಬಂಧಿ ಮಾತುಕತೆಗಳು ಇಂದು ಫಲ ನೀಡಲಿವೆ. ಕೃಷಿ ಕೈಗಾರಿಕೆ ವ್ಯವಹಾರಗಳು ಸಮಾಧಾನಕರ ಆದಾಯ ತರಲಿವೆ. ಕಾನೂನಿಗೆ ವಿರುದ್ಧ ಕೆಲಸವನ್ನು ಮಾಡಬೇಡಿ. ಸಾಲಬಾಧೆ ಕಾಡಲಿದೆ.

ಕುಂಭ: ಔಷಧ ಮಾರಾಟಗಾರರಿಗೆ ಲಾಭವಾಗುತ್ತದೆ. ಇದುವರೆಗೆ ಗುಪ್ತವಾಗಿದ್ದ ಕೌಟುಂಬಿಕ ವಿಷಯಗಳು ತೆರೆಯ ಮೇಲೆ ಬರಲಿವೆ. ಶತ್ರುಗಳ ವಿರುದ್ಧ ಧೈರ್ಯವಾಗಿ ಹೋರಾಡುವ ಪ್ರಯತ್ನವಿರಲಿ.

ಮೀನ: ಮಿತ್ರ ವೃಂದದಲ್ಲಿ ಕಂಡು ಬರುವ ಗೊಂದಲ ಹಾಗೂ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿಕೊಡುವುದರಲ್ಲಿ ಯಶಸ್ವಿಯಾಗುವಿರಿ. ಜಾಹೀರಾತು ಕಂಪನಿಯಲ್ಲಿ ಕೆಲಸ ಮಾಡುವವರಿಗೆ ಲಾಭವಾಗುವುದು.

ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ

‘ಪ್ರಶಸ್ತಿಗೆ ಶ್ರಮ ಪಡುವವರೇ ಹೆಚ್ಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಡಿದ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ನೀಡಿದಾಗ, ಇನ್ನಷ್ಟು ಸಾಧನೆ ಮಾಡಬೇಕೆಂಬ ಸ್ಫೂರ್ತಿ ಬರುತ್ತದೆ. ಆದರೆ, ಪ್ರಶಸ್ತಿಗಾಗಿಯೇ ಪರಿಶ್ರಮ ಪಡುವವರ ಸಂಖ್ಯೆ ಹೆಚ್ಚಾಗಿದೆ. ಅದರಲ್ಲಿ ಸಫಲರೂ ಆಗುತ್ತಿದ್ದಾರೆ ಎಂದು ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ವಿಷಾದ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಶುಕ್ರವಾರ ‘ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿ’ ಸ್ವೀಕರಿಸಿ ಅವರು ಮಾತನಾಡಿದರು.

ತಾನಾಗಿಯೇ ಬಂದ ಪ್ರಶಸ್ತಿಗಳಿಗೆ ಗೌರವ ಹೆಚ್ಚು. ಪ್ರಶಸ್ತಿಯು ಕೊಡುವವರಿಗೆ ಮತ್ತು ಸ್ವೀಕರಿಸುವವರಿಗೆ ಅಭಿಮಾನ ಹುಟ್ಟಿಸುವಂತಿರಬೇಕು. ಪ್ರಶಸ್ತಿಯ ಘನತೆ ಹೆಚ್ಚುವಂತಿರಬೇಕು. ಈಗ ಲಾಬಿ ಮಾಡಿ ಪ್ರಶಸ್ತಿ ಪಡೆಯುವವರೇ ಹೆಚ್ಚು ಎಂದು ಹೇಳಿದರು.

ದೇಶ ಕಂಡ ಸಮರ್ಥ ಆಡಳಿತಗಾರ ಕೆಂಗಲ್ ಹನುಮಂತಯ್ಯ ಅವರು ಕೇಂದ್ರ ರೈಲ್ವೆ ಸಚಿವರಾಗಿ ಅದ್ಭುತ ಕೆಲಸಗಳನ್ನು ಮಾಡಿದ್ದರು. ಮುಖ್ಯಮಂತ್ರಿಯಾಗಿ ಅವರು ಮಾಡಿದ ಕೆಲಸಕ್ಕೆ ಸಾಕ್ಷಿಯಾಗಿ ವಿಧಾನಸೌಧ ಇದೆ. ಅಂತಹ ಕೆಂಗಲ್ ಹನುಮಂತಯ್ಯ ಹೆಸರಲ್ಲಿರುವ ಪ್ರಶಸ್ತಿಯನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿರುವುದು ಹೆಮ್ಮೆಯ ವಿಷಯ. ಒಬ್ಬ ವ್ಯಕ್ತಿ ಒಂದು ಜೀವಿತ ಅವಧಿಯಲ್ಲಿ ಇಷ್ಟೊಂದು ಸಾಧಿಸಲು ಸಾಧ್ಯವೇ ಎಂಬಂಥ ಸಾಧನೆ ಮಾಡಿರುವ ಸಿ.ಎನ್.ಆರ್. ರಾವ್ ಅವರು ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಇನ್ನಷ್ಟು ಘನತೆಯನ್ನು ಹೆಚ್ಚಿಸಿದೆ ಎಂದು ಶ್ಲಾಘಿಸಿದರು.

ವಿಜ್ಞಾನಿ ಸಿ.ಎನ್.ಆರ್. ರಾವ್ ಮಾತನಾಡಿ, ‘ಕನ್ನಡದ ಹಿರಿಮೆಯನ್ನು ಬೆಳಗಿದ ಶಿವರಾಜ ಪಾಟೀಲರಿಗೆ ಕೆಂಗಲ್ ಹನುಮಂತಯ್ಯ ಸಂಸ್ಕೃತಿ ಪ್ರಶಸ್ತಿಯು ಸಂದಿರುವುದು ನಮ್ಮೆಲ್ಲರಿಗೂ ಹೆಮ್ಮೆ ತಂದಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗಶೆಟ್ಟಿ, ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ಇದ್ದರು.

ನಗರದ ಜವಾಹರಲಾಲ್ ನೆಹರು ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರದಲ್ಲಿ ಶುಕ್ರವಾರ ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರಿಗೆ ಕೆಂಗಲ್ ಹನುಮಂತಯ್ಯ ಸಾಂಸ್ಕೃತಿ ಪ್ರಶಸ್ತಿಯನ್ನು ವಿಜ್ಞಾನಿ ಸಿ.ಎನ್.ಆರ್. ರಾವ್ ಪ್ರದಾನ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಹೇಶ ಜೋಶಿ ಇದ್ದಾರೆ —ಪ್ರಜಾವಾಣಿ ಚಿತ್ರ

ಗಂಗಾಧರಯ್ಯ, ಫೌಝಿಯಗೆ ‘ಶಾ. ಬಾಲುರಾವ್ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಎಸ್. ಗಂಗಾಧರಯ್ಯ

ಫೌಝಿಯ ಸಲೀಂ

ಬೆಂಗಳೂರು: ಬಿ.ಎಂ. ಶ್ರೀ. ಪ್ರತಿಷ್ಠಾನ ನೀಡುವ ‘ಶಾ. ಬಾಲೂರಾವ್ ಅನುವಾದ ಪ್ರಶಸ್ತಿ’ಗೆ ಎಸ್. ಗಂಗಾಧರಯ್ಯ ಅವರ ‘ಬುನಿನ್ ಕಥೆಗಳು’ ಕೃತಿ ಹಾಗೂ ‘ಶಾ. ಬಾಲೂರಾವ್ ಯುವ ಬರಹಗಾರ ಪ್ರಶಸ್ತಿ’ಗೆ ಫೌಝಿಯ ಸಲೀಂ ಅವರ ‘33-ಬಾಳ ಪಯಣ’ ಕೃತಿ ಆಯ್ಕೆಯಾಗಿದೆ.

ಈ ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿವೆ. 2022ರಲ್ಲಿ ಮೊದಲ ಮುದ್ರಣಗೊಂಡ ಕೃತಿಗಳನ್ನು ಈ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದೆ. ಅನುವಾದ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಅಗ್ರಹಾರ ಕೃಷ್ಣಮೂರ್ತಿ, ಕೆ.ಪುಟ್ಟಸ್ವಾಮಿ, ಯುವ ಬರಹಗಾರ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ರಾಮಲಿಂಗಪ್ಪ ಟಿ. ಬೇಗೂರು, ಎಚ್.ಎನ್. ಆರತಿ ಇದ್ದರು. ಇದೇ 11ರಂದು ಬಿ.ಎಂ. ಶ್ರೀ. ಪ್ರತಿಷ್ಠಾನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ರಾಜ್ಯೋತ್ಸವ ಟ್ರೋಫಿ

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ರೇಸ್‌ನಲ್ಲಿ ಜಯಿಸಿದ ಇಂಪಿರಿಯಲ್ ಬ್ಲೂ ಕುದುರೆಯ ಟ್ರೇನರ್ ಇರ್ಫಾನ್ ಘಟಾಲ ಅವರಿಗೆ ರಾಜ್ಯ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರು ‘ಕರ್ನಾಟಕ ರಾಜ್ಯೋತ್ಸವ ಟ್ರೋಫಿ’ ಪ್ರದಾನ ಮಾಡಿದರು. ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಸೆಲ್ವಕುಮಾರ್, ಸ್ಟಿವರ್ಡ್ ಎಸ್.ಎಂ. ಅಹಮದ್, ಬಿಟಿಸಿ ಅಧ್ಯಕ್ಷ ಅರವಿಂದ್ ರಾಘವನ್, ಸ್ಟೀವರ್ಡ್ ಶಿವಕುಮಾರ್ ಖೇಣಿ, ಸತೀಶ್ ಎನ್. ಗೌಡ, ಸಮಿತಿ ಸದಸ್ಯ ಡಾ. ಸಿ.ಎ. ಪ್ರಶಾಂತ್ ಇದ್ದಾರೆ.

ಝೀಕಾ; ಗರ್ಭಿಣಿಯರಿಗೆ ಸ್ಕ್ಯಾನಿಂಗ್

ಚಿಕ್ಕಬಳ್ಳಾಪುರ: ಸೊಳ್ಳೆಗಳಲ್ಲಿ ಝೀಕಾ ವೈರಸ್ ಪತ್ತೆಯಾದ ಕಾರಣ ಶಿಡ್ಲಘಟ್ಟ ತಾಲ್ಲೂಕಿನ ತಲಕಾಯಲಬೆಟ್ಟ ಹಾಗೂ ಸುತ್ತಲಿನ ಗ್ರಾಮಗಳ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಆರಂಭಿಸಲಾಗಿದೆ. ಝೀಕಾ ವೈರಸ್ ಗರ್ಭಿಣಿಯರಿಗೆ ತಗುಲಿದರೆ ಮಗುವಿನ ಬೆಳವಣಿಗೆ, ಆರೋಗ್ಯದ ಮೇಲೆ ಅಡ್ಡಪರಿಣಾಮಗಳಾಗುತ್ತವೆ.

ಶಿಡ್ಲಘಟ್ಟ ತಾಲ್ಲೂಕು ಆಸ್ಪತ್ರೆಯಲ್ಲಿ ತಲಕಾಯಲಬೆಟ್ಟ ಗ್ರಾಮದ ಆರು, ಟಿ.ವೆಂಕಟಾಪುರ ಹಾಗೂ ದಿಬ್ಬೂರಹಳ್ಳಿಯ ಗರ್ಭಿಣಿಯರಿಗೆ ಶುಕ್ರವಾರ ಸ್ಕ್ಯಾನಿಂಗ್ ಮಾಡಲಾಯಿತು. 19 ಗರ್ಭಿಣಿಯರಿಗೆ ಶನಿವಾರ ಮತ್ತು ಭಾನುವಾರ ಸ್ಕ್ಯಾನಿಂಗ್ ಮಾಡಲಾಗುತ್ತದೆ. ‘ಶುಕ್ರವಾರ ಸ್ಕ್ಯಾನಿಂಗ್ ಮಾಡಿಸಿದ ಗರ್ಭಿಣಿಯರಲ್ಲಿ ಯಾರಿಗೂ ತೊಂದರೆ ಇಲ್ಲ ಎಂದು ವರದಿ ಬಂದಿದೆ. ಶನಿವಾರ ಸಹ 10 ಗರ್ಭಿಣಿಯರ ಸ್ಕ್ಯಾನಿಂಗ್ ನಡೆಯಲಿದೆ’ ಎಂದು ಶಿಡ್ಲಘಟ್ಟ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ ಮೂರ್ತಿ ತಿಳಿಸಿದ್ದಾರೆ.

ನೈರುತ್ಯ ರೈಲ್ವೆ ಆದಾಯದಲ್ಲಿ ಭಾರಿ ಹೆಚ್ಚಳ

ಬೆಂಗಳೂರು: ನೈರುತ್ಯ ರೈಲ್ವೆ ಆದಾಯದಲ್ಲಿ ಭಾರಿ ಹೆಚ್ಚಳವಾಗಿದೆ. ಈ ವರ್ಷ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ₹ 4,288 ಕೋಟಿ ಆದಾಯ ಬಂದಿದೆ. ಕಳೆದ ವರ್ಷದ ಇದೇ ಅವಧಿಯ ಆದಾಯಕ್ಕೆ ಹೋಲಿಸಿದರೆ ಶೇ 10.44ರಷ್ಟು ಅಧಿಕವಾಗಿದೆ. ಆದಾಯದಲ್ಲಿ ಇದು ಅತ್ಯುತ್ತಮ ಬೆಳವಣಿಗೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಈ ಅವಧಿಯಲ್ಲಿ ಪ್ರಯಾಣಿಕರ ಟಿಕೆಟ್‌ನಿಂದ ಬಂದ ಆದಾಯ ₹1,801 ಕೋಟಿ ಆಗಿದ್ದು, ಕಳೆದ ವರ್ಷದ ಈ ಅವಧಿಗಿಂತ ಶೇ 15.20 ರಷ್ಟು ಹೆಚ್ಚಳವಾಗಿದೆ. ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 27.49 ದಶಲಕ್ಷ ಟನ್ ಸರಕುಗಳನ್ನು ಸಾಗಿಸುವ ಮೂಲಕ ₹ 2,741 ಕೋಟಿ ಆದಾಯ ಗಳಿಸಿದೆ. ಸರಕು ಸಾಗಾಟದಲ್ಲಿ ಶೇ 11.66ರಷ್ಟು ಅಧಿಕ ಆದಾಯ ಬಂದಿದೆ.

ರಾಜ್ಯದ ಹಲವೆಡೆ ಸಾಧಾರಣ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಶನಿವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊಡಗು ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಉತ್ತರ ಒಳನಾಡಿನ ಹಲವೆಡೆ, ದಕ್ಷಿಣ ಒಳನಾಡಿನ ಕೆಲವೆಡೆ ಹಾಗೂ ಕರಾವಳಿಯ ಒಂದೆರಡು ಕಡೆ ಗರಿಷ್ಠ ತಾಪಮಾನ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಮಳೆ ಆಗುವ ಸಂಭವವಿದೆ ಎಂದಿದೆ ಇಲಾಖೆ.

ರಾಷ್ಟ್ರೀಯ ಕ್ರೀಡಾಕೂಟದ ಈಜು ಮಾನವಿ ವರ್ಮಾ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮಾನವಿ ವರ್ಮಾ ಅವರು ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯ ಮಹಿಳೆಯರ 200 ಮೀ. ಮೆಡ್ಲೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ಮಾನವಿ 2 ನಿ. 24.21 ಸೆ.ಗಳಲ್ಲಿ ಗುರಿ ತಲುಪಿದರು. ಮಧ್ಯಪ್ರದೇಶದ ರಿಚಾ ಮಿಶ್ರಾ (2 ನಿ. 25.78 ಸೆ.) ಅವರು 2015 ರಲ್ಲಿ ಸ್ಥಾಪಿಸಿದ್ದ ದಾಖಲೆ ಮುರಿದರು.

ರಾಜ್ಯದ ಹಷಿಕಾ ರಾಮಚಂದ್ರ ಅವರು (2 ನಿ. 28.31 ಸೆ.) ಈ ಸ್ಪರ್ಧೆಯ ಕಂಚು ತಮ್ಮದಾಗಿಸಿಕೊಂಡರು. ಬೆಳ್ಳಿ ಪದಕ ಗೋವಾದ ಶ್ರೃಂಗಿ ರಾಜೇಶ್ ಬಾಂಡೇಕರ್ (2 ನಿ. 26.90 ಸೆ.) ಪಾಲಾಯಿತು.

ಪುರುಷರ ವಿಭಾಗದಲ್ಲಿ ಪದಕ ಬೇಟೆ ಮುಂದುವರಿಸಿದ ಶ್ರೀಹರಿ ನಟರಾಜ್, 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 25.77 ಸೆಕೆಂಡುಗಳೊಂದಿಗೆ ಅಗ್ರಸ್ಥಾನ ಪಡೆದರು.

ರಿಧಿಮಾ ವೀರೇಂದ್ರ ಕುಮಾರ್ ಅವರು ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯನ್ನು 30.21 ಸೆ.ಗಳಲ್ಲಿ ಕ್ರಮಿಸಿ ಚಿನ್ನ ಜಯಿಸಿದರು.

ರಿಲೇ ತಂಡ ಕೂಟ ದಾಖಲೆ: 4X100 ಮೀ. ಮಿಶ್ರ ರಿಲೇ ಸ್ಪರ್ಧೆಯಲ್ಲಿ ಕರ್ನಾಟಕ ತಂಡ ಚಿನ್ನ ಜಯಿಸಿತು. ಅನೀಶ್ ಎಸ್.ಗೌಡ, ಧೀನಿಧಿ ದೇಸಿಂಗು, ನೀನಾ ವೆಂಕಟೇಶ್ ಮತ್ತು ಶ್ರೀಹರಿ ನಟರಾಜ್ ಅವರಿದ್ದ ತಂಡ 3 ನಿ.38.24 ಸೆ.ಗಳಲ್ಲಿ ಗುರಿ ತಲುಪಿ, ತನ್ನದೇ ಹೆಸರಿನಲ್ಲಿದ್ದ ಕೂಟ ದಾಖಲೆ ಉತ್ತಮಪಡಿಸಿಕೊಂಡಿತು. ನೀನಾ ಮತ್ತು ಧೀನಿಧಿ ಅವರಿಗೆ ಇದು ಐದನೇ ಚಿನ್ನದ ಪದಕವಾಗಿದೆ. ಮಹಾರಾಷ್ಟ್ರ ಮತ್ತು ದೆಹಲಿ ತಂಡಗಳು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದವು.

ಪುರುಷರ 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಶಾನ್ ಗಂಗೂಲಿ (2 ನಿ. 5.68 ಸೆ.) ಮತ್ತು ಎಸ್.ಶಿವ (2 ನಿ. 5.96 ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಮ್ಮದಾಗಿಸಿದರು. ಈ ವಿಭಾಗದ ಚಿನ್ನದ ಪದಕವನ್ನು ಕೇರಳದ ಸಜನ್ ಪ್ರಕಾಶ್ (2 ನಿ. 4.57 ಸೆ.) ಕೂಟ ದಾಖಲೆಯೊಂದಿಗೆ ಗೆದ್ದರು.

ಶಿರಿನ್ ಮತ್ತು ಅನೀಶ್ ಎಸ್.ಗೌಡ ಅವರು ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕಂಚು ಜಯಿಸಿದರು.

ಮನುಗೆ ಬೆಳ್ಳಿ: ಸರ್ವಿಸಸ್ ತಂಡವನ್ನು ಪ್ರತಿನಿಧಿಸಿದ ಕರ್ನಾಟಕದ ಡಿ.ಪಿ.ಮನು ಅವರು 80.48 ಮೀ. ಸಾಧನೆಯೊಂದಿಗೆ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರು. ಸರ್ವಿಸಸ್‌ನ ಶಿವಪಾಲ್ ಸಿಂಗ್ (81.17 ಮೀ.) ಚಿನ್ನ ಹಾಗೂ ಒಡಿಶಾದ ಕಿಶೋರ್ ಕುಮಾರ್ ಜೇನಾ (78.47 ಮೀ.) ಕಂಚು ಪಡೆದರು.

ಚೆಸ್: ಅಗ್ರಸ್ಥಾನಕ್ಕೆ ಹೆಚ್ಚಿದ ಪೈಪೋಟಿ

ಐಲ್ ಆಫ್ ಮ್ಯಾನ್ (ಪಿಟಿಐ): ಒಂದು ದಿನ ಹಿಂದಿನವರೆಗೆ ಮುನ್ನಡೆಯಲ್ಲಿದ್ದ ಭಾರತದ ವಿದಿತ್ ಎಸ್. ಗುಜರಾತಿ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯ ಎಂಟನೇ ಸುತ್ತಿನ ಮೊದಲ ಬೋರ್ಡ್‌ನಲ್ಲಿ ಅಮೆರಿಕದ ಹಿಕಾರು ನಕಾಮುರಾ ಜೊತೆ ಬೇಗನೇ ಪಾಯಿಂಟ್ ಹಂಚಿಕೊಂಡರು. ಎಂಟನೇ ಸುತ್ತಿನಲ್ಲಿ ಪೂರ್ಣ ಪಾಯಿಂಟ್ ಪಡೆದ ಮೂರು ಮಂದಿ ಆಟಗಾರರು ತಲಾ ಆರು ಪಾಯಿಂಟ್‌ಗಳೊಡನೆ ಈಗ ವಿದಿತ್ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಇನ್ನು ಮೂರು ಸುತ್ತಿನ ಪಂದ್ಯಗಳು ಉಳಿದಿರುವಂತೆ, ವಿದಿತ್, ಅಮೆರಿಕದ ಫ್ಯಾಬಿಯಾನೊ ಕರುವಾನ, ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಮತ್ತು ಮತ್ತು ಡೇನಿಯಲ್ ಬೊಗ್ಡಾನ್ ಡೇಕ್ ಅವರು ತಲಾ ಆರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ₹3.83 ಕೋಟಿ ಬಹುಮಾನ ಈ ಟೂರ್ನಿಯಲ್ಲಿ ಈಗ ಅಗ್ರಸ್ಥಾನಕ್ಕೆ ಪೈಪೋಟಿ ತೀವ್ರಗೊಂಡಿದೆ.

ವೈಶಾಲಿ

ಬಿ ಳಿ ಕಾಯಿಗಳಲ್ಲಿ ಆಡಿದ ವಿದಿತ್ ಬರೇ 16 ನಡೆಗಳಲ್ಲೇ ಡ್ರಾ ಕೊಡುಗೆ ಒಪ್ಪಿಕೊಂಡರು.

8ನೇ ಸುತ್ತು- ‘ಡ್ರಾ’ಗೆ ತೃಪ್ತಿಪಟ್ಟ ವೈಶಾಲಿ: ಮಹಿಳೆಯರ ವಿಭಾಗದಲ್ಲಿ ಆರ್.ವೈಶಾಲಿ ಎಂಟನೇ ಸುತ್ತಿನಲ್ಲಿ ಫ್ರಾನ್ಸ್‌ನ ಸೋಫಿ ಮಿಲೆಟ್ ವಿರುದ್ಧ ಮೇಲುಗೈ ಸಾಧಿಸಿದರೂ ಅದನ್ನು ಗೆಲುವನ್ನಾಗಿ ಪರಿವರ್ತಿಸಲಾಗದೇ ‘ಡ್ರಾ’ಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಎರಡನೇ ಬೋರ್ಡ್‌ನ ಈ ಪಂದ್ಯ 70 ನಡೆಗಳನ್ನು ಕಂಡಿತು.

ವೈಶಾಲಿ ಇದೀಗ ಆರು ಪಾಯಿಂಟ್ ಹೊಂದಿದ್ದು, ಅಂಟೊನೇಟಾ ಸ್ಟೆಫಾನೊವಾ (ಬಲ್ಗೇರಿಯಾ), ಅನಾ ಮುಝಿಚುಕ್ (ಉಕ್ರೇನ್) ಜೊತೆ ಮುನ್ನಡೆ ಹಂಚಿಕೊಂಡಿದ್ದಾರೆ. ಮೊದಲ ಬೋರ್ಡ್‌ನಲ್ಲಿ ಅಂಟೊನೇಟಾ- ಅನಾ ‘ಡ್ರಾ’ ಮಾಡಿಕೊಂಡರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156-270058

EMail ID: eerdwsd.ckb2@gmail.com

ಸಂಖ್ಯೆ:/ಕಾಅಿ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಸ.ಇಂ-1/2023-24

ದಿನಾಂಕ:30.10.2023

**(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಟೆಂಡರ್ ಪ್ರಕಟಣೆ ಸಂಖ್ಯೆಗಳು: 01 ರಿಂದ 19/ಎರಡನೇ ಕರೆ/2023-24 ದಿನಾಂಕ: 30.10.2023**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2022-23ನೇ JJM ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಚಿಂತಾಮಣಿ, ಶಿಡ್ಲಘಟ್ಟ & ಗುಡಿಬಂಡೆ ತಾಲ್ಲೂಕುಗಳಲ್ಲಿ ಒಟ್ಟು 587 ಗ್ರಾಮಗಳ ಜನ ವಸತಿಗಳಿಗೆ ನಳ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ KW-I, KW-II, KW-III& KW-IV ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (Credit Card/Direct Debit/ NEFT & OTC ಮುಖೇನ) ಅಥವ ಚಾಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in/ ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 06.11.2023 ರಂದು ಸಂಜೆ 5.30 ಗಂಟೆವರೆಗೆ.** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 08.11.2023 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 10.11.2023 ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 13.11.2023 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

**ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿಕ್ಕಬಳ್ಳಾಪುರ**

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:131/ಕೆಎಸ್‌ಎಂಸಿಎ/2023-24

LG

ಯುನಿಲೆಟ್®
ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...

FESTIVE EXCLUSIVE OFFERS

WIN LG DREAM HOME PACKAGE Every Day*

OLED TV • Side-by-Side Refrigerator • Front Load Washing Machine • Water Purifier • Microwave Oven

GRAND PRIZE AUDI Q3*

*Image source: Audi

To participate in these offers, send an SMS <"First Name" "Last Name" GTM Code> to 7835073507

HOME ENTERTAINMENT OFFERS

Up to 26%* CASHBACK Max ₹26000* ON SELECT CREDIT / DEBIT CARDS

OLED CIRCLE An exclusive alliance. Get benefits up to ₹50000*

3 YEAR* WARRANTY (With Select LG TVs)

FREE* LG SMART CAM Worth ₹9990 (Free with : LG 55 & Above UHD*/ UHD-N*, All QNEDs and All OLEDs

1* EMI Free (On Select Models) / 0* Down Payment (Rest in EMIs) (On Select Models)

UP TO 30% OFF ON LG SOUNDBAR* (With Select LG TVs)

FIXED EMI Starting from ₹999*

Care & Delight LG Service | LG 24 x 7 CUSTOMER CARE 08069379999 1800 315 9999 (Toll Free) www.lg.com/in/support | LG WhatsApp No. 9711709999 LG Service India Mobile App Available at Google Play | www.facebook.com/lgindiapage/ www.twitter.com/LGIndia | To know more about LG, visit www.lg.com/in For Corporate/Institutional enquiries, please write to corp.enquiries@lge.com | 24x7 | LG Greencycle

Regd. Office: LG Electronics India Pvt. Ltd., A-24/6, Mohan Cooperative Industrial Estate, Mathura Road, New Delhi-110044 CIN No. U32107DL1997PTC220109
*T&C apply. For more information kindly visit www.lg.com/in

OLED evo C3 | 210cm (83) / 195cm (77) / 164cm (65) / 139cm (55) / 121cm (48) / 106cm (42)

Dolby VISION·ATMOS

1 EMI FREE*

EMI: ₹999*

- OLED evo 4K with Brightness Booster Max
- Self-LIT Pixels / α9 AI Processor 4K Gen6 / 120H
- Dolby Vision & Dolby Atmos
- 2.2 Ch / 40W Sound* with Virtual Surround 9.1.2
- NVIDIA G-Sync / AMD FreeSync / VRR

*2.0 Ch / 20W in 106cm (42)

UHD TV AI ThinQ UR9050 | 190cm (75) / 164cm (65) / 139cm (55) / 127cm (50) / 108cm (43)



1 EMI FREE*

EMI: ₹999*

- 4K Display / α5 AI Processor 4K Gen6
- AI Brightness Control / HLG / HDR10 / 4K Upscaler
- AI Sound Pro with Virtual 5.1.2 Up-mix
- Built-in Alexa / Apple Airplay & HomeKit / Works with Hey Google
- webOS 23 / User Profiles / Quick Cards

UHD TV AI ThinQ UR8040 | 190cm (75) / 177cm (70) / 164cm (65) / 139cm (55) / 127cm (50) / 108cm (43)

- 4K Display / α5 AI Processor 4K Gen6
- AI Brightness Control / HLG / HDR10 / 4K Upscaler
- AI Sound Pro with Virtual 5.1.2 Up-mix
- Built-in Alexa / Apple Airplay & HomeKit / Works with Hey Google
- webOS 23 / User Profiles / Quick Cards

1 EMI FREE*

EMI: ₹999*

UHD TV AI ThinQ UR7790 | 108cm (43)



ULTRA BRIGHT PANEL

35W Woofer Sound

- 4K Display with Ultra Bright Panel
- α5 AI Processor 4K Gen6
- 2.1 Ch / 35W Powerful Sound / Built-in Woofer
- AI Brightness Control / HLG / HDR10 / 4K Upscaler
- Built-in Alexa / Apple Airplay & HomeKit / Works with Hey Google

1 EMI FREE*

EMI: ₹999*

iPhone 15

EMI: ₹3,329*

CASH BACK ₹4,000

BUY APPLE IPHONE 15 SERIES, GET BACKCASE & TEMPER GLASS WORTH ₹2,000 FREE

MATHIKERE: Old Raghu Med. **Ph: 91484 50662. K R PURAM :** Nr. TC Palya signal, **Ph: 76195 55537. BANASHANKARI:** Opp. Big Bazaar, **Ph: 99000 46931. MARATHAHALLI:** Opp. Innovative, **Ph: 91484 50665/64. BOMMANAHALLI:** Next to Shell Petrol , **Ph: 99000 46913. YELAHANKA NEW TOWN:** Opp Yelahanka Central Mall, **Ph: 99000 46918. SAHAKAR NAGAR:** Next to Swati Garden, **Ph: 99000 46937. HEBBAGODI:** Opp SKF, Next to KFC, **Ph: 76195 55541. BASVESHWARA NAGAR:** Modi Hospital Road,**Ph: 99000 46934. R.T NAGAR:** Next to Police Station, **Ph:99000 29308. SANJAY NAGAR:** Next to HDFC Bank, **Ph: 99000 46928. DEVANAHALLI:** Opp. Indian Oil, **Ph: 91481 40111. HOSAKOTE:** Next to Chemmanur, **Ph: 91081 78999. AKSHAY NAGAR:** DLF City, Opp. Hiranandani, **Ph: 99000 46943. HONGASANDRA:** Opp SBI, Begur Road, **Ph: 95915 26018. COX TOWN:** Next to Gymkhana, **Ph: 99000 46930. FRAZER TOWN:** Opp. Canara Bank , **Ph: 99000 12851. GANGA NAGAR:** Opp Vishal Medicals, **Ph: 99000 46949. HANUMANTH NAGAR:** Opp. Canara Bank, **Ph: 99000 46940. HEGGANAHALLI:** Opp Bus Stop, **Ph: 76195 55506. HESARAGHATTA MN RD:** Opp. Karnataka Bank, **Ph: 76195 55543. HRBR LAYOUT:** Near Banaswadi Club, **Ph: 99000 46946. HSR LAYOUT:** Opp NIFT, 27 Main, **Ph: 99000 18126. KOTHANUR:** Next to Empire Hotel, **Ph: 99002 37116. NAGARBHAVI:** Ambedkar Col. Signal, **Ph: 99725 97017. SUNKADAKATTE:** Magadi Road, **Ph: 76195 55509. RR NAGAR:** Opp. BBMP Office, **Ph: 99000 18217. PEENYA T DASARAHALLI :** Next to Honda Showroom, **Ph: 91485 70490 . VIJAYANAGAR:** Opp. Water Tank, **Ph: 99000 12420. KENGERI:** Opp. DS Max, **Ph: 99000 12609. RAMANAGARA:** Near Izoor P Stn., **Ph: 99000 98795. NELAMANGALA:** Opp. Shell Petrol Station, **Ph: 99001 15781. KOLAR:** Opp Honda, **Ph: 99001 09852. TUMKUR:** Opp. SIT, Batwadi, **Ph: 91086 71999. DODDABALLAPUR:** Talulk Office Road, **Ph: 9900046923.**

LG BEST SHOPS: BANGALORE: RAMA MURTHY NAGAR, Ph:99000 46915. BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (NXT TO SWATI GARDEN), Ph: 95133 05559. MYSORE: Kuvempunagar, **91489 99894**

*Terms and conditions apply. On select brands and products. Limited period offers. Images are for representation only, not actual products. Free gift not applicable for samsung. Finance at the sole discretion of the financier. #20% cash back as per the offers by banks and finance companies.

50+ STORES | BENGALURU | MYSORE | TUMKUR | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN | www.uniletstores.com

ನೋ ಅಂದ್ರೆ ನೋ

ನೋ, ಇಲ್ಲ, ಬೇಡ... ಎನ್ನುವ ಸುಲಭ ಮತ್ತು ಸುಸ್ಪಷ್ಟ ಪದಗಳನ್ನು ಹೇಳಲು ಒದ್ದಾಡುವವರೂ; 'ನೋ' ಎನ್ನುವ ಪದವನ್ನು ಕೇಳಿದ ಮೇಲೂ ಅದಕ್ಕೆ ಹೆಚ್ಚಿನ ವಿವರ ಕೇಳುವವರೂ ಒಮ್ಮೆ ಈ ಮಾತನ್ನು ಕೇಳಿಸಿಕೊಳ್ಳಿ...

ಸುಶೀಲಾ ಡೋಣೂರ

'ನೋ' ಅಂದ್ರೆ 'ನೋ'

'No' is not a word, It is a sentence. Complete sentence...

ನೋ ಕಾ ಮತ್ಲಬ್ ಸಿರ್ಫ್ ನೋ ಹೋತಾ ಹೈ

ಪಿಂಕ್ (2016) ಸಿನಿಮಾದಲ್ಲಿ ಅಮಿತಾಬ್ ಬಚ್ಚನ್ ಬಹಳ ಸ್ಪಷ್ಟವಾಗಿ ಮತ್ತು ಅಷ್ಟೇ ದೀರ್ಘವಾಗಿ ವಾದ ಮಂಡಿಸಿದ ತುಂಬಾ ತುಂಬಾ ಸರಳ ಪದವಿದು. ರಾಮಾಯಣ-ಮಹಾಭಾರತದ ಕಾಲದಿಂದ ಹಿಡಿದು ಇವತ್ತಿನವರೆಗೂ ಬಹಳ ಜನರಿಗೆ ಅರ್ಥವಾಗದ ಪದ. ದ್ರೌಪದಿಯೂ 'ನೋ' ಅಂದಳು ಪಾಂಡವರಿಗದು ಅರ್ಥವಾಗಲಿಲ್ಲ. ಗಾಂಧಾರಿಯೂ 'ನೋ' ಅಂದಿದ್ದಳು, ಅದು ಸುಬಲನಿಗೂ ಕೇಳಿಸಲಿಲ್ಲ, ಧೃತರಾಷ್ಟ್ರನಿಗೂ ಕೇಳಿಸಲಿಲ್ಲ. ಇವತ್ತಿಗೂ ಈ ಜಾಣ ಕಿವುಡತನ ಮುಂದುವರೆದೇ ಇದೆ. ಕೆಲವರಿಗೆ ಕೇಳಿಸುವುದಿಲ್ಲ, ಕೆಲವರಿಗೆ ಕೇಳಿಸಿದರೂ ಅರ್ಥವಾಗುವುದಿಲ್ಲ, ಇನ್ನೂ ಕೆಲವರಿಗೆ ಅರ್ಥವಾದರೂ ಜಾಣ ಮಳ್ಳತನ.

ಇದು 'ನೊ' ಎನ್ನುವ ಪದದಲ್ಲಿಯೇ ಇರಬಹುದಾದ ದೋಷವೊ, 'ನೋ' ಎಂದು ಹೇಳುವವರ ದನಿಯಲ್ಲಿ ಇರಬಹುದಾದ ದೋಷವೊ ಅಥವಾ ಅದನ್ನು ಕೇಳಿಸಿಕೊಳ್ಳುವವರಲ್ಲಿ ಇರಬಹುದಾದ ಜಾಣಕಿವುಡುತನವೊ ಗೊತ್ತಿಲ್ಲ.

'ನೋ' ಎನ್ನುವುದು ಒಂದು ಪದವಲ್ಲ, ಅದು ಪೂರ್ತಿ ವಾಕ್ಯ. 'ನೋ' ಎಂದರೆ ಅಲ್ಲಿಗೇ ಅದನ್ನು ನಿಲ್ಲಿಸಬೇಕು ಎಂದೇ ಅರ್ಥ. ಅದಕ್ಕೆ ಪರ್ಯಾಯ ಅರ್ಥವಾಗಲಿ, ಹೆಚ್ಚಿನ ವಿವರಣೆಯನ್ನಾಗಲಿ ಬಯಸುವ ಅಗತ್ಯವಿಲ್ಲ. ಇದು ಅವಳಿಗೂ, ಅವನಿಗೂ ಇಬ್ಬರಿಗೂ ಅನ್ವಯಿಸುವ ಪದವೇ ಆದರೂ ಅವಳಿಗೆ, ಅದರಲ್ಲೂ ದುಡಿಯುವ ಹೆಣ್ಮಕ್ಕಳಿಗೆ ಹೆಚ್ಚು ಅನ್ವಯಿಸುತ್ತದೆ.

ಹಾಗೆಯೇ, ನೋ ಹೇಳುವವಳು ಗೆಳತಿಯಾಗಿರಬಹುದು, ಆಫೀಸಿನಲ್ಲಿ ಕೂಡಿ ಕೆಲಸ ಮಾಡುವ ಸಹೋದ್ಯೋಗಿಯೇ ಆಗಿರಬಹುದು, ಕಾನ್ಫರೆನ್ಸ್‌ನಲ್ಲಿ ಜತೆಯಾಗಿ ಭಾಗವಹಿಸಿದಾಕೆಯೇ ಆಗಿರಬಹುದು, ರಸ್ತೆಯಲ್ಲಿ ನಿಂತ ಸೆಕ್ಸ್ ವರ್ಕರೇ ಆಗಿರಬಹುದು ಅಥವಾ ಕಾಯಾ ವಾಚಾ ಮನಸಾ ಜತೆಯಾದ ಪತ್ನಿ. ಯಾರೇ ಹೇಳಿದರೂ, ಯಾವುದೇ ಸಂದರ್ಭದಲ್ಲಿ ಹೇಳಿದರೂ, ಯಾವುದೇ ಕಾರಣಕ್ಕೆ ಹೇಳಿದರೂ ನೋ ಅಂದ್ರೆ ನೋ. ಇಷ್ಟು ನೇರವಾದ, ಸರಳರೇಖೆಯಂಥ ಒಂದು ಪದ ಅರ್ಥವಾಗದವರಿಗೆ, ಪ್ರೀತಿ-ಪ್ರೇಮ, ಸ್ನೇಹ, ಅನುಬಂಧದಂತಹ ದೊಡ್ಡದೊಡ್ಡ ಪದಗಳು ಮಿದುಳಿಗಿಳಿಯಲು ಸಾಧ್ಯವೇ ಇಲ್ಲ ಎಂದೇ ಅರ್ಥ.

* * *

ಇದು ಬರೀ ಕೇಳಿಸಿಕೊಳ್ಳುವವರ ಸಮಸ್ಯೆಯಲ್ಲ. ಹೇಳುವವರದೂ ಆಗಿದೆ. ನೋ-ಎನ್ನುವ ಇಷ್ಟು ಸುಲಭದ ಪದವನ್ನು ಹೇಳುವುದು ಬಹಳಷ್ಟು ಜನರಿಗೆ ಬಲು ಕಷ್ಟದ ಕೆಲಸ. ಎಷ್ಟೊ ಜನರು ಇದನ್ನು ಪ್ರಕಟಿಸಲು ಬಹಳೇ ಒದ್ದಾಡುವುದಿದೆ, ಮತ್ತು ಅಷ್ಟೇ ಗೊಂದಲಕ್ಕೀಡಾಗುವುದೂ ಇದೆ. ತಮ್ಮದಲ್ಲದ ಕೆಲಸವಾಗಿರಬಹುದು, ತಮಗಲ್ಲದ ಬುಲಾವ್ ಆಗಿರಬಹುದು, ತಮಗೊಪ್ಪದ ಆಫರ್ ಆಗಿರಬಹುದು... ಇಲ್ಲ ಎಂದು ಹೇಳಲು ಕಷ್ಟಪಡುವವರೇ ಹೆಚ್ಚು.

ಒಂದು ಕಪ್ ಕಾಫಿ, ಒಂದು ಲಾಂಗ್ ಡ್ರೈವ್ ಅಥವಾ ಮಧ್ಯಾಹ್ನದ ಮ್ಯಾಟನಿ ಶೋ... ರಾತ್ರಿಯ ಊಟ... ಡೇಟಿಂಗ್... ಯಾವುದೊ ಒಂದು. ಕರೆದವರು ಸ್ನೇಹಿತರೇ ಆಗಿರಲಿ, ಮನೆಯವರು, ಬಂಧುಗಳೇ ಆಗಿರಲಿ ಅಥವಾ ಸಹೋದ್ಯೋಗಿಗಳೇ ಆಗಿರಲಿ... 'ನೋ' ಎಂದು ಹೇಳುವ ಬದಲು ಏನೇನೊ ಸಬೂಬು ಹೇಳಲು ಹೋಗಿ ಪೇಚಾಡುತ್ತಾರೆ. ಮಾತ್ರವಲ್ಲ, ಇದೇ ಕಾರಣಕ್ಕಾಗಿ ಅನೇಕರು ತಮಗೆ ಮನಸ್ಸಿಲ್ಲದಿದ್ದರೂ, ಮನಸಿಗೊಪ್ಪದಿದ್ದರೂ, ಸಮಯವಿಲ್ಲದಿದ್ದರೂ ಇಲ್ಲ ಎಂದು ಹೇಳುವ ಮುಜುಗರದಿಂದ ಪಾರಾಗಲು 'ಆಗಲಿ' ಅಂದುಬಿಡುತ್ತಾರೆ.

'ಇಲ್ಲ' ಎಂದು ಹೇಳುವ ಬದಲು 'ಕೆಲಸ ಇದೆ' ಅಂತಲೊ, 'ತಡವಾಯ್ತು' ಅಂತಲೊ, 'ಇನ್ಯಾರೊ ಕಾಯ್ತಾ ಇದ್ದಾರೆ' ಅಂತಲೋ ಹೇಳಿದರೆ ಅದನ್ನು ನಿಮ್ಮೆದುರಿಗಿನವರು 'ಎಸ್' ಎಂದೇ ಪರಿಭಾವಿಸುವ ಸಾಧ್ಯತೆಯೂ ಇರುತ್ತದೆ. 'ಎಸ್' ಅಂತ ಹೇಳುವಾಗಲಂತೂ 'ನೋ' ಹೇಳುವುದಕ್ಕಿಂತ ಹೆಚ್ಚಿನ ತಪ್ಪುಗ್ರಹಿಕೆಗಳು, ಅಪಾಯಗಳೂ ಇರುತ್ತವೆ. ನೀವು 'ಎಸ್' ಅಂದಿರುವುದು ಅವರೊಂದಿಗೆ ಬರೀ ಕಾಫಿ ಕುಡಿಯುವುದಕ್ಕೊ, ಅವರ ಜೊತೆಗಿನ ಸ್ನೇಹಕ್ಕೊ-ಸಾಂಗತ್ಯಕ್ಕೊ ಎನ್ನುವುದೆಲ್ಲಾ ಬೂದಿ ಮುಚ್ಚಿದ ಕೆಂಡದಂತೆ ಉಳಿದುಕೊಳ್ಳಬಹುದು.

ನೋ ಅಂದ್ರೆ ಇಲ್ಲ, ಬರುವುದಿಲ್ಲ, ಮಾಡುವುದಿಲ್ಲ, ಆಗುವುದಿಲ್ಲ, ಒಪ್ಪಿಕೊಳ್ಳುವುದಿಲ್ಲ, ನಿಲ್ಲುವುದಿಲ್ಲ, ಕಾಯುವುದಿಲ್ಲ... ಎಲ್ಲಕ್ಕೂ 'ಇಲ್ಲ' ಎನ್ನುವ ಒಂದು ಸರಳ ಪದವಿದೆಯಲ್ಲವೆ? ಹಾಗೆಯೇ, ಯಾವುದೊ ಬೇಡಿಕೆಗೆ, ಅಪೇಕ್ಷೆಗೆ, ನಿರೀಕ್ಷೆಗೆ, ಯಾಚನೆಗೆ ಸ್ಪಷ್ಟವಾಗಿ, ಅಷ್ಟೇ ದೃಢವಾಗಿ 'ನೋ' ಎಂದು ಹೇಳಲು ಹಿಂಜರಿಯುವುದೇಕೆ? ಅಷ್ಟಕ್ಕೂ ಆ ಕರೆಗೆ 'ನೋ' ಹೇಳಬೇಕೊ, 'ಎಸ್' ಹೇಳಬೇಕೊ ಎಂದು ನಿರ್ಧರಿಸಬೇಕಾದವರು ನೀವೇ. ನಿಮಗೊಪ್ಪಿಗೆಯಿದ್ದರೆ ಯಾವ ಮುಜುಗುರವೂ ಇಲ್ಲದೆ 'ಎಸ್' ಹೇಳಿ. ಆದರೆ, ನೋ ಹೇಳಲು ಹೋಗಿ ಅಥವಾ ನೋ ಹೇಳಲು ಆಗದೇ 'ಎಸ್' ಹೇಳಬೇಡಿ.

ಸೀರೆಯ 'ಭಾಗ್ಯ'ನಗರ...

ಪ್ರಮೋದ

ಸಿದ್ಧಗೊಂಡ ಭಾಗ್ಯನಗರದ ರೇಷ್ಮೆ ಸೀರೆ

ನಮಸ್ಕಾರ್ರಿ,

ಕೊಪ್ಪಳದ ಭಾಗ್ಯನಗರದ ಓಣಿಗಳಲ್ಲಿ ಒಮ್ಮೆ ಸುತ್ತಾಡಿ ಬಂದರೆ 'ಡಗ್, ಡಗ್, ಡಗ್...' ಎನ್ನುವ ಜೋರಾಗಿ ಬಡಿದುಕೊಳ್ಳುವ ಮಗ್ಗಗಳ ಶಬ್ದವೇ ನನ್ನ ಕುರುಹಿಗೆ ಸಾಕ್ಷಿಯಂತಿವೆ. ನಾನು ಹೀಗೆ ಶಬ್ದ ಮಾಡಲು ಶುರುಮಾಡಿ ನೂರಾರು ವರ್ಷಗಳೇ ಉರುಳಿವೆ.

ಮೊದಮೊದಲು ಹಿರಿಯರು ಹಾಗೂ ಮಧ್ಯಮ ವಯಸ್ಕ ಹೆಣ್ಣುಮಕ್ಕಳು ಹೆಚ್ಚಾಗಿ ಇಷ್ಟಪಡುತ್ತಿದ್ದ ನನ್ನೂರಿನ ಸೀರೆಗಳು ಈಗ ಯುವತಿಯರ ಅಚ್ಚುಮೆಚ್ಚಿನ ಬ್ರ್ಯಾಂಡ್ ಆಗಿ ಬದಲಾಗಿವೆ. ದಡಿಸೀರೆ, ಮೂರ ಗಾಡಿದಡಿ, ನಾಲ್ಕು ಗಾಡಿದಡಿ ಸೀರೆ, ಮಸರಾಯಿ ಸೀರೆ, ಬಾಳೆ ಪಟ್ಟಿಯ ಸೀರೆ, ಕೆಂಪು ಅಂಜುರದ ಸೀರೆ ಹೀಗೆ ಅನೇಕ ವೈವಿಧ್ಯಮಯ ಭಾಗ್ಯನಗರದ ಸೀರೆಗಳನ್ನು ಹಳೆಯ ತಲೆಮಾರಿನ ಹೆಣ್ಣುಮಕ್ಕಳು ಇಷ್ಟಪಡುತ್ತಿದ್ದರು.

ನನ್ನಳಿವು ಹಾಗೂ ಉಳಿವಿನ ಪ್ರಶ್ನೆ ಬಂದಾಗ ನಾನೂ ಬದಲಾಗಬೇಕಾಗಿತ್ತು. ಬದಲಾಗಿದ್ದೇನೆ; ಹೊಸ ತಲೆಮಾರಿನ ಹೆಣ್ಣುಮಕ್ಕಳು ಇಷ್ಟಪಡುವ ರೀತಿಯಲ್ಲಿ ಹೊಸ ವಿನ್ಯಾಸಗಳನ್ನು ರೂಢಿಸಿಕೊಂಡಿದ್ದೇನೆ. ಭಾಗ್ಯನಗರ ಎನ್ನುವ ಬ್ರ್ಯಾಂಡ್ ಉಳಿಸಿಕೊಂಡು ಸಣ್ಣಕಣ್ಣಿನ ಸೀರೆ, ಚಂದರಗಿ ಚಿಕ್ಕಿ ಸೀರೆ, ರಾಸ್ತಾ ಸೀರೆ, ಬಾಂಡ್ ಸೀರೆಗಳು, ರೇಷ್ಮೆ ಸೀರೆ, ಕಾಂಚೀವರಂ ಹೀಗೆ ಅನೇಕ ವಿಶೇಷ ವಿನ್ಯಾಸಗಳು ಮತ್ತು ಈಗಿನ ಕಾಲದ ಜನ ಒಪ್ಪುವ ರೀತಿಯಲ್ಲಿ ನನ್ನೂರಿನಲ್ಲಿ ಸೀರೆಗಳನ್ನು ತಯಾರು ಮಾಡಲಾಗುತ್ತಿದೆ. ಪ್ರಿಂಟೆಡ್ ಪತ್ತಲಗಳು, ನೂಲಿನ ಸೀರೆ, ಫ್ಯಾಷನ್ ಸಲುವಾಗಿಯೇ ಕಸೂತಿ ಹಾಕಿದ ಭಾಗ್ಯನಗರದ ಸೀರೆಗಳನ್ನು ತೊಡುತ್ತಿದ್ದಾರೆ.

ಅನೆ, ಒಂಟೆ, ಎಲೆ, ಕೇದಿಗೆ, ಗಾಡಿ, ಗಾಜಿ, ಗುಂಡು, ಗೊಡ್ಡುಪರಾಸ, ಚಿಕ್ಕಿ ಚಂದ್ರಕಾಳಿ, ನವಿಲು, ಗಿಳಿ ಬಂಗುಡಿ, ಮಾವಿನಕಾಯಿ, ಮುತ್ತು, ಎಲೆಬಳ್ಳಿ, ಹೂವು ಹೀಗೆ ಅನೇಕ ವಿನ್ಯಾಸಗಳಲ್ಲಿ ಸೀರೆಗಳನ್ನು ವಿನ್ಯಾಸ ಮಾಡಲಾಗುತ್ತಿದೆ. ನೂಲು ತೊಡುವುದು, ಕಂಡಿಕೆ ಸುತ್ತುವುದು, ಹಣಗೆ ಹಚ್ಚುವುದು, ಕಚ್ಚಾ ವಸ್ತುಗಳನ್ನು ತಂದು ಮಗ್ಗದ ಮೇಲೆ ಕುಳಿತು ನೇಯ್ಯುವುದು ಸೇರಿದಂತೆ ಅನೇಕ ಕೆಲಸಗಳು ನಡೆಯುತ್ತವೆ. ಮಗ್ಗಗಳಲ್ಲಿ ಕೆಲಸ ಮಾಡುವವರು ಬಹುತೇಕ ಪುರುಷರೇ. ಆದರೂ ಅವರು ಮಹಿಳೆಯರ ಅಭಿರುಚಿಗೆ ತಕ್ಕಂತೆ ಸೀರೆ ತಯಾರು ಮಾಡುತ್ತಾರೆ. ಆಧುನಿಕ ಭರಾಟೆಯಲ್ಲಿ ಕೆಲವರು ಯಂತ್ರಗಳ ಮೊರೆ ಹೋದರೆ ಇನ್ನೂ ಕೆಲವರು ಸಾಂಪ್ರದಾಯಿಕ ಶೈಲಿಯಲ್ಲಿಯೇ ನನ್ನನ್ನು ನೇಯುತ್ತಿದ್ದಾರೆ. ಈ ಮೂಲಕ ಭಾಗ್ಯನಗರ ಶೈಲಿನ ಮೂಲ ಸೊಬಗು ಉಳಿಸಿಕೊಂಡಿದ್ದಾರೆ.

ವಸ್ತ್ರ ವೈಭವ

ನಾರಿ ಮೈಮೇಲೆ ನನ್ನನ್ನು ಹೊದ್ದರೆ ನನ್ನ ಅಂದಕೆ ಯಾರೂ ಸಾಟಿಯಲ್ಲ, ಅಷ್ಟೊಂದು ಸುಂದರ ನಾನು. ಆದರೆ, ನನ್ನೊಳಗೆ ನನಗೇ ಆದ ನೋವುಗಳಿವೆ. ಹೇಳಿಕೊಂಡರೂ ಪರಿಹಾರವಾಗದ ಸಮಸ್ಯೆಗಳಿವೆ. ಕೇಳಿಸಿಕೊಂಡವರು 'ಆಯಿತು' ಎನ್ನುವ ಸಮಾಧಾನದ ಮಾತುಗಳನ್ನಷ್ಟೇ ಆಡಿದ್ದಾರೆ.

ನೂರಾರು ವರ್ಷಗಳಿಂದ ಸಾಕಷ್ಟು ಹೆಣ್ಣುಮಕ್ಕಳಿಗೆ ನಾನು ಅಚ್ಚುಮೆಚ್ಚಾಗಿದ್ದರೂ ಕೆಲಸ ಮಾಡುವ ಕಾರ್ಮಿಕರ ಕೊರತೆ ಮತ್ತು ಆಧುನೀಕರಣದ ಭರಾಟೆಯಲ್ಲಿ ನನ್ನುಳಿವಿನ ಆತಂಕ ನನ್ನನ್ನು ಕಾಡುತ್ತಿದೆ. ಅದರಲ್ಲಿಯೂ ಕೋವಿಡ್ ಬಳಿಕ ನನ್ನ ಪರಿಸ್ಥಿತಿ ಗಂಭೀರವಾಗಿದೆ.

ಸೀರೆ ನೇಯ್ಯುವ ಸಮಯದಲ್ಲಿ ನಿಮಗೆಲ್ಲರಿಗೂ ಕೇಳುವ 'ಡಗ್, ಡಗ್, ಡಗ್...' ಎನ್ನುವ ನನ್ನ ಹೃದಯ ಬಡಿತದ ಸದ್ದು ಮುಂದಿನ ದಿನಗಳಲ್ಲಿ ಕಾಯಂ ಆಗಿ ನಿಂತು ಬಿಡುತ್ತದೆಯೇ? ಎನ್ನುವ ಭಯ ಶುರುವಾಗಿದೆ. ಹಿಂದೆ ನೀವೆಲ್ಲ ಪೊರೆದಂತೆ, ಸೀರೆ ಖರೀದಿಸಿ ಪೋಷಿಸಿದಂತೆ ಈಗಲೂ ಮಗ್ಗದಿಂದ ನೇಯ್ದ ಸೀರೆಗಳನ್ನೇ ಖರೀದಿಸಿ. ನನ್ನಲ್ಲಿನ ಆತಂಕ ದೂರ ಮಾಡಿ. ಒಮ್ಮೆ ನನ್ನೂರು ಭಾಗ್ಯನಗರಕ್ಕೂ ಬನ್ನಿ. ಸೀರೆಯ ಅಂದ ಕಣ್ತುಂಬಿಕೊಳ್ಳಿ. ಪ್ರತಿ ನೇಯ್ಗೆ ಹಾಗೂ ಸೀರೆಯ ಹಿಂದೆ ಒಂದೊಂದು ಕಥೆಯಿದೆ. ಆ ಕಥೆಯ ಕೇಳ ಬನ್ನಿ.

ಬರ್ತೀರಲ್ಲ?

ಇಂತಿ ನಿಮ್ಮ

ಭಾಗ್ಯನಗರದ ಸೀರೆಗಳು.

ಕೊಪ್ಪಳದ ಭಾಗ್ಯನಗರದ ಸೀರೆಗಳು – ಚಿತ್ರಗಳು/ಭರತ್ ಕಂದಕೂರ

ಗರ್ಭನಾಳದಲ್ಲಿ ತಡೆ: ಪರಿಹಾರವೇನು?

1. ಮದುವೆ ಆಗಿ 6 ವರ್ಷ ಆಯ್ತು. ಆದರೆ ಸಂತಾನ ಇಲ್ಲ. ಮೊದಲು ಯಾವುದು ಸಮಸ್ಯೆ ಇರಲಿಲ್ಲ, ಆದ್ರೆ ಈಗ ಎಡಬದಿಯ ಗರ್ಭನಾಳದಲ್ಲಿ ತಡೆ ಇದೆ ಎಂದು ಹೇಳ್ತಾರೆ. ಸಹಜ ಗರ್ಭಧಾರಣೆ ಆಗುವುದಿಲ್ಲವೇ? ನನ್ನ ವಯಸ್ಸು 30.

ಸ್ಪಂದನ

ಡಾ. ವೀಣಾ ಎಸ್. ಭಟ್

ಉತ್ತರ:- ನಿಮಗೀಗಾಗಲೇ 30 ವರ್ಷ, ಮದುವೆಯಾಗಿ ಈಗಾಗಲೇ 6 ವರ್ಷಗಳಾಗಿವೆ. ಆದ್ದರಿಂದ ಬಂಜೆತನಕ್ಕೆ ಕಾರಣ ಹುಡುಕುವ ವೈದ್ಯಕೀಯ ಪರೀಕ್ಷೆಗಳನ್ನ ನೀವು ಈಗಾಗಲೇ ಮಾಡಿಸಿಕೊಂಡಿರಬಹುದು. ಅದರಲ್ಲಿ ಕೇವಲ ಎಡಬದಿಯ ಗರ್ಭನಾಳ ತಡೆ ಉಂಟಾಗಿದೆ ಎಂದು ಪರೀಕ್ಷೆಗಳಿಂದ ವರದಿ ಬಂದಿರಬಹುದಲ್ಲವೇ? ಈ ರೀತಿಯ ಗರ್ಭನಾಳಕ್ಕೆ ತಡೆ ಉಂಟಾಗುವುದು ಕೆಲವೊಮ್ಮೆ ಸೂಕ್ಷ್ಮಾಣು ಜೀವಿಗಳ ಸೋಂಕಿನಿಂದಲೂ ಉಂಟಾಗಬಹುದು. ಸಹಜ ಗರ್ಭಧಾರಣೆಯಾಗಲು ನಿಮಗೆ ಇನ್ನೊಂದು ಗರ್ಭನಾಳ ಸರಿಯಾಗಿದ್ದರೆ, ಗರ್ಭಧಾರಣೆಗೆ ಪೂರಕವಾದ ಇನ್ನಿತರ ಅಂಶಗಳು ಸರಿಯಾಗಿದ್ದರೆ ಖಂಡಿತವಾಗಿಯೂ ನಿಮಗೆ ಸಹಜ ಗರ್ಭಧಾರಣೆ ಆಗುತ್ತದೆ.

ಸಹಜ ಗರ್ಭಧಾರಣೆಯಾಗುವ ಪ್ರಕ್ರಿಯೆ ಹೇಗೆಂದು ಈಗಾಗಲೇ ನಿಮಗೆ ತಿಳಿದಿರಬೇಕಲ್ಲವೇ? ಪ್ರತಿ ಹೆಣ್ಣಿನಲ್ಲಿ ಒಳಸಂತಾನೋತ್ಪತ್ತಿ ಅಂಗಗಳೆಂದರೆ: ಗರ್ಭಕೋಶ, ಎರಡು ಅಂಡಾಶಯ ಹಾಗೂ ಎರಡು ಗರ್ಭನಾಳಗಳು. ಗರ್ಭಕೋಶವು ಗರ್ಭಕೊರಳಿನ ಮೂಲಕ (ಸರ್ವಿಕ್ಸ್) ಯೋನಿಮಾರ್ಗಕ್ಕೆ ತೆರೆದಿರುತ್ತದೆ. ಪ್ರತಿ ತಿಂಗಳು ಸಂತಾನೋತ್ಪತ್ತಿ ವಯಸ್ಸಿನಲ್ಲಿ ಮುಟ್ಟುನಿಲ್ಲುವವರೆಗೂ ಅಂಡಾಶಯದಿಂದ ಒಂದು ಅಂಡಾಣು ಬಿಡುಗಡೆಯಾಗುತ್ತದೆ. ಈ ಅಂಡಾಣು ಗರ್ಭನಾಳದಿಂದ ಸೆಳೆದು, ಗರ್ಭನಾಳದಲ್ಲಿ ವೀರ್ಯಾಣುಗಳ ಸಮಾಗಮವಾಗಬಹುದೆಂದು ಕಾಯುತ್ತಿರುತ್ತದೆ.

ಪ್ರತಿ ತಿಂಗಳು ಮುಟ್ಟಾಗುವವರಲ್ಲಿ ಮುಟ್ಟಿನ ಆರಂಭದ ದಿನಕ್ಕೂ 14ದಿನ ಮೊದಲು ಅಂಡಾಣು ಬಿಡುಗಡೆಯಾಗಿ 48 ಗಂಟೆಗಳ ಕಾಲ ಜೀವಂತವಾಗಿರುತ್ತದೆ. ಈ ಸಂದರ್ಭದಲ್ಲಿ ಗಂಡು ಹೆಣ್ಣಿನ ಲೈಂಗಿಕ ಸಂಪರ್ಕ ಪರಸ್ಪರ ಉಂಟಾದರೆ ಪುರುಷರ ವೀರ್ಯದಲ್ಲಿರುವ ವೀರ್ಯಾಣುಗಳು ಯೋನಿಮಾರ್ಗದಿಂದ ಗರ್ಭಕೊರಳಿನ ಮೂಲಕ ಗರ್ಭನಾಳವನ್ನ ಪ್ರವೇಶಿಸಿ ಅಲ್ಲಿರುವ ಅಂಡಾಣುವಿನ ಜೊತೆ ಫಲಿತಗೊಂಡು ಭ್ರೂಣವಾಗಿ ಅದು ನಿಧಾನವಾಗಿ ಗರ್ಭನಾಳದಿಂದ ಗರ್ಭಕೋಶಕ್ಕೆ ಚಲಿಸಿ ಗರ್ಭಕೋಶದಲ್ಲಿ ನಿರಂತರವಾದ ವಿಭಜನಾಪ್ರಕ್ರಿಯೆಗೊಳಗಾಗಿ, ಒಂಭತ್ತು ತಿಂಗಳಲ್ಲಿ ತಾಯಗರ್ಭದಿಂದ ಹೊರಗೆ ಬಂದಮೇಲೂ ಸಮರ್ಥವಾಗಿ ಜೀವಂತವಾಗಿರಬಲ್ಲ ಅಂಗಾಂಗಗಳನ್ನು ಹೊಂದಿ ಆರೋಗ್ಯವಂತ ಮಗುವಾಗಿ ಜನನವಾಗುತ್ತದೆ.

ಈ ಪ್ರಕ್ರಿಯೆ ಹೇಳಿದಷ್ಟು, ಬರೆದಷ್ಟು ಸರಳವಲ್ಲ. ಇದು ಅತ್ಯಂತ ಸಂಕೀರ್ಣ ಹಾಗೂ ಸೂಕ್ಷ್ಮವಾದ ಪ್ರಕ್ರಿಯೆ. ಇದಕ್ಕೆ ಹಲವು ಹಾರ್ಮೋನುಗಳಾದ ಸಮತೋಲನ ಅಗತ್ಯ, ಸಂತಾನೋತ್ಪತ್ತಿ ಅಂಗಗಳ ರಚನೆ, ಕಾರ್ಯವೈಖರಿ ಎಲ್ಲವೂ ಸರಿಯಾಗಿರಬೇಕು. ಪ್ರತಿತಿಂಗಳು ಒಂದೊಂದು ಅಂಡಾಶಯದಿಂದ ಅಂಡಾಣು ಬಿಡುಗಡೆಯಾಗಿ ವೀರ್ಯಾಣುವಿನ ಜೊತೆಗೆ ಫಲಿತವಾಗದಿದ್ದಲ್ಲಿ ಋತುಚಕ್ರ ಆರಂಭವಾಗಿ ಕೊನೆಗೊಂಡು ಮತ್ತೆ ಈ ಪ್ರಕ್ರಿಯೆ ಆವರ್ತವಾಗಿ ಮುಂದುವರೆಯುತ್ತದೆ. ಪುರುಷರ ವೀರ್ಯಾಣುಗಳ ಗುಣಮಟ್ಟ, ಹೆಣ್ಣಿನ ಅಂಡಾಣುಗಳ ಗುಣಮಟ್ಟ ಎಲ್ಲವು ಸರಿ ಇರಬೇಕು. ನಿಮಗೆ ಕೇವಲ ಒಂದು ಗರ್ಭನಾಳವಷ್ಟೇ ತಡೆಯಾಗಿದ್ದಲ್ಲಿ ಬೇರೆಲ್ಲಾ ಅಂಶಗಳು ಸರಿಯಿದ್ದರೆ ನೀವು ಐ.ವಿ.ಎಫ್.ಚಿಕಿತ್ಸೆಗೆ ಮೊರೆಹೋಗುವ ಅಗತ್ಯವಿಲ್ಲ. ತಜ್ಞವೈದ್ಯರನ್ನು ಕಂಡು ಸೂಕ್ತಸಲಹೆ, ಚಿಕಿತ್ಸೆ ಪಡೆಯಿರಿ. ನಿಮಗೆ ಆದಷ್ಟು ಬೇಗನೆ ಮಗು ಆಗಲಿ ಎಂದು ಹಾರೈಸುತ್ತೇನೆ.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಮಾತಿಗೆ ಮರುಳಾಗಿ ಬೆತ್ತಲಾದರು

ಸಂತೋಷ ಜಿಗಳಿಕೊಪ್ಪ

'ಬೆಂಗಳೂರಿನ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯೊಂದರ ಹಿರಿಯ ಎಂಜಿನಿಯರ್ ನಾನು. ದಿನಕ್ಕೆ 8 ಗಂಟೆ ಕೆಲಸ. ಕೈ ತುಂಬ ಸಂಬಳ. ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಪತ್ನಿ ಹಾಗೂ ಮಕ್ಕಳು ಊರಿಗೆ ಹೋಗಿದ್ದು, ಇದುವರೆಗೂ ಬಂದಿಲ್ಲ. ವಾರದಲ್ಲಿ ಎರಡು ದಿನ ಕಚೇರಿ ಕೆಲಸ ಹಾಗೂ ಮೂರು ದಿನ ಮನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಶನಿವಾರ ಹಾಗೂ ಭಾನುವಾರ ಬಂದರೆ, ಎಲ್ಲಾದರೂ ಸುತ್ತಾಡಬೇಕು ಹಾಗೂ ಯಾರನ್ನಾದರೂ ಭೇಟಿಯಾಗಬೇಕೆಂದು ಅನಿಸುತ್ತದೆ. ಇದರ ನಡುವೆಯೇ, ನನಗೆ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಆ್ಯಪ್ ಎಂದರೆ ಹೆಚ್ಚು ಇಷ್ಟ. ಎರಡೂ ಕಡೆಯೂ ನನ್ನದೇ ಖಾತೆ ತೆರೆದು, ಸಾಫ್ಟ್‌ವೇರ್ ಎಂಜಿನಿಯರ್ ಎಂಬುದಾಗಿ 'ಬಯೋ' ಬರೆದುಕೊಂಡು ಸ್ಟೈಲೀಶ್ ಫೋಟೊ ಅಪ್‌ಲೋಡ್ ಮಾಡಿದ್ದೇನೆ. ದಿನದಲ್ಲಿ ಕನಿಷ್ಠ 1 ಗಂಟೆ ಹಾಗೂ ಗರಿಷ್ಠ 3 ಗಂಟೆ ಫೇಸ್‌ಬುಕ್-ಇನ್‌ಸ್ಟಾಗ್ರಾಂ ಬಳಸುತ್ತೇನೆ. ಪುರುಷರು ಹಾಗೂ ಮಹಿಳೆಯರು, ಇಬ್ಬರೂ ಸ್ನೇಹಿತರಿದ್ದಾರೆ. ಬಹುತೇಕರು ಪರಿಚಿತರು. ಅವರೆಲ್ಲರ ಜೊತೆ ನಿತ್ಯವೂ ಚಾಟಿಂಗ್ ಸಹ ಮಾಡುತ್ತಿರುತ್ತೇನೆ. ಹೊಸ ಸ್ನೇಹಿತರಿಗಾಗಿಯೂ ಹುಡುಕಾಡುತ್ತಿರುತ್ತೇನೆ'

'ಹೀಗೆ, 2023ರ ಮಾರ್ಚ್ ತಿಂಗಳಿನಲ್ಲಿ 'ಕ್ಯೂಟ್ ಸಾಕ್ಷಿ ವರ್ಮಾ' ಹೆಸರಿನಲ್ಲಿ ಫೇಸ್‌ಬುಕ್ ಖಾತೆಗೆ ಫ್ರೆಂಡ್ ರಿಕ್ವೆಸ್ಟ್ ಬಂದಿತ್ತು. ಖಾತೆ ಪರಿಶೀಲಿಸಿದಾಗ, ಯುವತಿಯ ಹಲವು ಫೋಟೊಗಳಿದ್ದವು. ಜೊತೆಗೆ, ಕಾಲೇಜೊಂದರ ವಿದ್ಯಾರ್ಥಿನಿ ಎಂಬುದಾಗಿ ಯುವತಿ ಬರೆದುಕೊಂಡಿದ್ದಳು. ಅದಕ್ಕೆ ಸಂಬಂಧಪಟ್ಟ ಕಾಲೇಜು ಫೋಟೊಗಳನ್ನೂ ಅಪ್‌ಲೋಡ್ ಮಾಡಿದ್ದಳು. ಯುವತಿ ನೋಡಲು ಚೆಂದವಿದ್ದಳು. ಅಪರಿಚಿತರಿದ್ದರೂ ಮುಂದೆ ಪರಿಚಿತರಾಗಬಹುದೆಂದು ತಿಳಿದು, ಫ್ರೆಂಡ್ ರಿಕ್ವೆಸ್ ಸ್ವೀಕರಿಸಿದೆ.'

'ಎರಡು ದಿನ ಬಿಟ್ಟು, ಯುವತಿಯ ಖಾತೆಯಿಂದ 'ಹಾಯ್ ಗುಡ್ ಮಾರ್ನಿಂಗ್' ಎಂಬ ಸಂದೇಶ ಬಂತು. ಚೆಂದದ ಹುಡುಗಿ ಸಂದೇಶ ಕಳುಹಿಸಿದ್ದಾಳೆಂದು ಖುಷಿಯಿಂದ ಪ್ರತಿಕ್ರಿಯಿಸಿದ್ದೆ. ಇದಾದ ನಂತರ, ಪರಸ್ಪರ ಮಾತುಕತೆ ಆರಂಭವಾಯಿತು. ಯುವತಿ ತನ್ನ ಹವ್ಯಾಸ ಹಾಗೂ ತನ್ನ ತಂದೆ-ತಾಯಿ ಬಗ್ಗೆ ಮಾತನಾಡಿದಳು. ನಾನೂ ನನ್ನ ಬಗ್ಗೆ ಹೇಳಿಕೊಂಡೆ. ಹೀಗೆ... ನಾಲ್ಕು ದಿನ ಚಾಟಿಂಗ್ ನಡೆಯಿತು. ಲೈಂಗಿಕವಾಗಿ ಪ್ರಚೋದಿಸುವ ಹಲವು ಎಮೋಜಿಗಳನ್ನು ಯುವತಿ ಕಳುಹಿಸಲಾರಂಭಿಸಿದ್ದಳು. ಯುವತಿ ನನ್ನನ್ನು ಇಷ್ಟಪಡುತ್ತಿರಬಹುದೆಂದು ತಿಳಿದು, ನಾನೂ ಅದೇ ರೀತಿಯ ಎಮೋಜಿ ಕಳುಹಿಸಿದೆ. ಇದಾಗಿ ಒಂದೇ ದಿನದಲ್ಲಿ ಇಬ್ಬರೂ ಪರಸ್ಪರ ಹತ್ತಿರವಾದೆವು. ಪರಸ್ಪರ ಭೇಟಿಯಾಗುವ ಮಾತುಗಳೂ ಆರಂಭವಾದವು. ಆದರೆ, ಸದ್ಯಕ್ಕೆ ಕಾಲೇಜು ಇರುವುದಾಗಿ ಯುವತಿ ಹೇಳಿದ್ದಳು.'

'ಭೇಟಿಯಾಗಿ 6ನೇ ದಿನದಂದು ಸಂದೇಶ ಕಳುಹಿಸಿದ್ದ ಯುವತಿ, 'ನಿಮ್ಮ ಮಾತು ನನಗೆ ಇಷ್ಟವಾಗಿದೆ. ನನಗೂ ಗೆಳೆಯನಿಲ್ಲ. ನಿಮ್ಮೊಂದಿಗೆ ನಾನು ಖಾಸಗಿ ಕ್ಷಣಗಳನ್ನು ಕಳೆಯಬೇಕು. ನಿಮ್ಮನ್ನು ನೇರವಾಗಿ ಭೇಟಿಯಾಗಬೇಕು. ಅಥವಾ ವಿಡಿಯೊ ಕರೆಯನ್ನಾದರೂ ಮಾಡಿ' ಎಂದಿದ್ದಳು. ಆಕೆಯೇ ಆಹ್ವಾನ ನೀಡಿದ್ದರಿಂದ, ಮತ್ತಷ್ಟು ಪ್ರಚೋದನೆಗೊಂಡೆ. ರಾತ್ರಿ 8 ಗಂಟೆ ಸುಮಾರಿಗೆ ಕೊಠಡಿಯಲ್ಲಿ ಏಕಾಂಗಿಯಾಗಿ ಕುಳಿತಿರುವಾಗ, 'ವಿಡಿಯೊ ಕಾಲ್ ಮಾಡು' ಎಂದು ಆಕೆಗೆ ಸಂದೇಶ ಕಳುಹಿಸಿದ್ದೆ. ಇದಾದ ಕೆಲ ನಿಮಿಷಗಳಲ್ಲಿ ಯುವತಿ ಕಡೆಯಿಂದ ವಿಡಿಯೊ ಕರೆ ಬಂತು.'

'ಕರೆ ಸ್ವೀಕರಿಸುತ್ತಿದ್ದಂತೆ, ಯುವತಿ ಕಾಣಿಸಿದಳು. 'ಹಾಯ್' ಎನ್ನುತ್ತಲೇ ಯುವತಿ, ತನ್ನ ಬಟ್ಟೆಗಳನ್ನು ಬಿಚ್ಚಿ ನಗ್ನಳಾದಳು. ನನಗೂ ಬಟ್ಟೆ ಬಿಚ್ಚುವಂತೆ ಹೇಳಿದಳು. ನಾನೂ ನಗ್ನನಾದೆ. ಮೂರು ನಿಮಿಷಗಳಲ್ಲಿ ಕರೆ ಕಡಿತವಾಯಿತು. ಪುನಃ ಕರೆ ಮಾಡಿದರೆ, ಯುವತಿ ಸ್ವೀಕರಿಸಲಿಲ್ಲ.'

'ಮರುದಿನ ಬೆಳಿಗ್ಗೆ ನನ್ನ ಮೊಬೈಲ್ ವಾಟ್ಸ್‌ಆ್ಯಪ್‌ಗೆ ಅಪರಿಚಿತ ನಂಬರ್‌ನಿಂದ ವಿಡಿಯೊ ಬಂದಿತ್ತು. ಅದನ್ನು ತೆರೆದು ನೋಡಿದಾಗ, ನನ್ನದೇ ನಗ್ನ ವಿಡಿಯೊವಾಗಿತ್ತು. 'ನಮ್ಮ ಯುವತಿ ಜೊತೆಗೆ ಸಂಬಂಧವಿಟ್ಟುಕೊಂಡಿದ್ದಿಯಾ. ನಿನ್ನ ನಗ್ನ ವಿಡಿಯೊ ನಮಗೆ ಸಿಕ್ಕಿದೆ. ಇದನ್ನು ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಯುಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡುತ್ತೇವೆ. ನಿನ್ನ ಪತ್ನಿ, ಸಂಬಂಧಿಕರು ಹಾಗೂ ಸ್ನೇಹಿತರಿಗೆ ಕಳುಹಿಸುತ್ತೇವೆ' ಎಂಬ ಸಂದೇಶವೂ ಬಂದಿತ್ತು.'

'ವಿಡಿಯೊ ಹೊರಗೆ ಬಂದರೆ, ಮರ್ಯಾದೆ ಹೋಗುತ್ತದೆಂದು ಭಯವಾಯಿತು. ಅಪರಿಚಿತ ನಂಬರ್‌ಗೆ ಕರೆ ಮಾಡಿ, ವಿಡಿಯೊ ಡಿಲೀಟ್ ಮಾಡಿ ಎಂದೆ. ಹಿಂದಿಯಲ್ಲಿ ಮಾತನಾಡುತ್ತಿದ್ದ ಅಪರಿಚಿತ, 'ನಮಗೆ ₹ 25 ಸಾವಿರ ನೀಡಬೇಕು' ಎಂದಿದ್ದ. ಕೂಡಲೇ ಆತನಿಗೆ ಹಣ ಕಳುಹಿಸಿದ್ದೆ. 'ಯುವತಿಗೆ ಅನ್ಯಾಯ ಮಾಡಿದ್ದಿಯಾ. ವಿಡಿಯೊ ಸಮೇತ ಸಿಬಿಐಗೆ ದೂರು ನೀಡುತ್ತಿದ್ದೇವೆ' ಎಂದು ಅಪರಿಚಿತ ಹೇಳಿದ್ದ. ದೂರು ನೀಡದಿರಲು ಪುನಃ ₹ 50 ಸಾವಿರ ಪಡೆದಿದ್ದ. ಇದಾದ ನಂತರ, ಯುಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿ ಲಿಂಕ್ ಕಳುಹಿಸಿದ್ದ. 'ಈಗಾಗಲೇ ಯುಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಆಗಿದೆ. ಅದನ್ನು ಅಳಿಸಿ ಹಾಕಲು ₹ 25 ಸಾವಿರ ಕೊಡು' ಎಂದಿದ್ದ. ಅವಾಗಲೂ ಹಣ ಕಳುಹಿಸಿದ್ದೆ. ಹೀಗೆ... ಎರಡು ದಿನ ನಾನಾ ರೀತಿಯಲ್ಲಿ ಬ್ಲ್ಯಾಕ್‌ಮೇಲ್ ಮಾಡಿದ್ದ ಅಪರಿಚಿತ, ಒಟ್ಟು ₹ 5.80 ಲಕ್ಷ ಪಡೆದಿದ್ದ. ಪುನಃ ಹಣಕ್ಕೆ ಬೇಡಿಕೆ ಇರಿಸಿದಾಗ, ಸ್ನೇಹಿತರ ಬಳಿ ವಿಷಯ ತಿಳಿಸಿದ್ದೆ. ಅವರ ಸಲಹೆಯಂತೆ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದೇನೆ.'

'ಅಪರಿಚಿತ ಖಾತೆಯಿಂದ ರಿಕ್ವೆಸ್ಟ್ ಬಂದಾಗ, ನಾನು ಎಚ್ಚರಿಕೆ ವಹಿಸಬೇಕಿತ್ತು. ಎಚ್ಚರ ತಪ್ಪಿ, ಬ್ಲ್ಯಾಕ್‌ಮೇಲ್ ಜಾಲದೊಳಗೆ ಸಿಲುಕಿಕೊಂಡೆ. ಅಪರಿಚಿತ ಖಾತೆಯಿಂದ ಬರುವ ರಿಕ್ವೆಸ್ಟ್ ಹಾಗೂ ಕರೆಗಳು, ಸಂದೇಶಗಳ ಬಗ್ಗೆ ಜನರು ಎಚ್ಚರಿಕೆ ವಹಿಸಿ. ನನ್ನಂತೆ ಹಣ ಕಳೆದುಕೊಳ್ಳಬೇಡಿ.'

– ದೂರುದಾರ

'ಬೆತ್ತಲೆಗೊಳಿಸಿ ಬ್ಲ್ಯಾಕ್‌ಮೇಲ್ ಮಾಡುವ ಜಾಲ ಸಕ್ರಿಯ'

ಚೆಂದದ ಯುವತಿಯರ ಫೋಟೊ ಬಳಸಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಖಾತೆ ತೆರೆದು, ಅಮಾಯಕರನ್ನು ಬಲೆಗೆ ಬೀಳಿಸಿ ನಗ್ನಗೊಳಿಸಿ ಬ್ಲ್ಯಾಕ್‌ಮೇಲ್ ಮಾಡಿ ಹಣ ಗಳಿಸುವ ಜಾಲ ಸಕ್ರಿಯವಾಗಿದೆ.

ಕೆಲ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ಕೆಲ ವಕೀಲರು, ಕೆಲ ಪೊಲೀಸರು, ಕೆಲ ವೈದ್ಯರು, ನಿವೃತ್ತ ನೌಕರರು, ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಉದ್ಯಮದಾರರು, ವ್ಯಾಪಾರಿಗಳು, ಖಾಸಗಿ ಕಂಪನಿ ನೌಕರರು ಸೇರಿದಂತೆ ಹಲವರು ಜಾಲದಲ್ಲಿ ಸಿಲುಕಿ ಲಕ್ಷ ಲಕ್ಷ ಕಳೆದುಕೊಂಡಿದ್ದಾರೆ. ಇಂಥ ಜಾಲದ ಬಗ್ಗೆ ಎಲ್ಲರೂ ಎಚ್ಚರಿಕೆ ವಹಿಸಬೇಕು.

ಸೈಬರ್ ಅಪರಾಧಕ್ಕೆ ದೂರು ನೀಡಿ: 112 ಅಥವಾ 1930

ಜಾಲತಾಣ: https://cybercrime.gov.in/

ಎಚ್ಚರ!

ಮಲೆನಾಡಿಗರ ಕಡುಬು

ಕೀರ್ತಿ ಕುಮಾರಿ ಎಂ.

ಮಲೆನಾಡು ಪ್ರದೇಶದಲ್ಲಿ ಬೆಳಗ್ಗಿನ ತಿಂಡಿ ಎಂದರೆ ಅಕ್ಕಿ ಕಡುಬು. ಇಲ್ಲಿ ವಾರದಲ್ಲಿ ಕನಿಷ್ಠ ನಾಲ್ಕೈದು ದಿನ ಕಡುಬಿನದ್ದೇ ಕಾರುಬಾರು. ಪುಂಡಿ, ಉಂಡಿ ಎಂತಲೂ ಕರೆಯಲಾಗುವ ಈ ತಿಂಡಿಯನ್ನು ಚಟ್ನಿ, ತರಕಾರಿ ಸಾಂಬಾರ್, ಪಲ್ಯದ ಜೊತೆಗೂ ಸವಿಯಬಹುದು, ಬಾಡೂಟದ ಜೊತೆಗೂ ಸವಿಯಬಹುದು.

ಸ್ವಲ್ಪವೂ ಅಡುಗೆ ಎಣ್ಣೆ ಬಳಸದೇ ಇದನ್ನು ಮಾಡಬಹುದಾದ್ದರಿಂದ ಆರೋಗ್ಯಕ್ಕೂ ಒಳ್ಳೆಯದು. ಹಾಗಾಗಿ ಮಲೆನಾಡಿಗರ ಶಕ್ತಿ, ಆರೋಗ್ಯದ ಗುಟ್ಟು ಕಡುಬು ಎಂದರೂ ತಪ್ಪಾಗುವುದಿಲ್ಲ.

ರುಚಿಕರವಾದ ಅಕ್ಕಿ ಕಡುಬು ಮಾಡುವ ವಿಧಾನ ಇಲ್ಲಿದೆ.

ಬೇಕಾಗುವ ಪದಾರ್ಥಗಳು:

ಅಕ್ಕಿ – 2 ಕಪ್

ಉಪ್ಪು – ರುಚಿಗೆ ತಕ್ಕಷ್ಟು

ನೀರು – 4 ಕಪ್

ಆಹಾ ಅಡುಗೆ

ಮಾಡುವ ವಿಧಾನ

- ಅಕ್ಕಿಯನ್ನು ಚೆನ್ನಾಗಿ ತೊಳೆದು, ಬಸಿದು, ಬಿಸಿಲಿನಲ್ಲಿ ಒಣಗಿಸಿಟ್ಟುಕೊಳ್ಳಿ.
- ಒಣಗಿದ ಅಕ್ಕಿಯನ್ನು ಮಿಕ್ಸರ್ ಜಾರ್‌ಗೆ ಹಾಕಿ, ತರಿತರಿಯಾಗಿ ಪುಡಿ ಮಾಡಿಕೊಳ್ಳಿ
- ಪಾತ್ರೆಗೆ ನೀರು ಮತ್ತು ರುಚಿಗೆ ತಕ್ಕಷ್ಟು ಉಪ್ಪುಹಾಕಿ ಒಲೆಯ ಮೇಲಿಡಿ.
- ನೀರು ಕುದಿಯಲು ಬಂದಂತೆ ಪುಡಿ ಮಾಡಿದ ಅಕ್ಕಿಯನ್ನು ಸ್ವಲ್ಪ ಸ್ವಲ್ಪವೇ ಹಾಕಿ ಕಲಸಿಕೊಳ್ಳಿ
- ಅಕ್ಕಿ ಬೆಂದು, ಉಂಡೆ ಕಟ್ಟುವ ಹದಕ್ಕೆ ಬಂದ ಮೇಲೆ ಗ್ಯಾಸ್ ಅನ್ನು ಆಫ್ ಮಾಡಿ.
- ಎರಡರಿಂದ ಮೂರು ನಿಮಿಷಗಳ ನಂತರ ಅಗಲವಾದ ತಟ್ಟೆಗೆ ಹಿಟ್ಟನ್ನು ಹಾಕಿಕೊಂಡು ಗಂಟು ಇಲ್ಲದಂತೆ ಮಿಲಿದುಕೊಳ್ಳಿ. ನಂತರ ಕೈಗೆ ನೀರು ತಾಗಿಸಿಕೊಂಡು ನಿಮಗೆ ಬೇಕಾದ ಗಾತ್ರಕ್ಕೆ ಉಂಡೆ ಮಾಡಿಕೊಳ್ಳಿ.
- ಇನ್ನೊಂದು ಕಡೆ ಕಡುಬಿನ ಪಾತ್ರೆಯ ತಳಕ್ಕೆ ನೀರು ಹಾಕಿ ಒಲೆಯ ಮೇಲಿಟ್ಟು ಕಾಯಿಸಿ. (ಮಲೆನಾಡಿನಲ್ಲಿ ಕಡುಬು ಮಾಡಲೆಂದೇ ವಿಶೇಷವಾದ ಪಾತ್ರೆಯಿರುತ್ತದೆ. ಅದಿಲ್ಲದೇ ಹೋದರೆ ಇಡ್ಲಿ ಮಾಡುವ ಪಾತ್ರೆಯಲ್ಲೂ ಕಡುಬನ್ನು ಮಾಡಬಹುದು)
- ಕಡುಬಿನ ಪಾತ್ರೆಯ ನೀರು ಕಾದ ಮೇಲೆ ಅಟ್ಟಣಿಗೆ ಇಟ್ಟು ಉಂಡೆಗಳನ್ನು ಹಾಕಿ, ಮುಚ್ಚಳವನ್ನು ಮುಚ್ಚಿ. 15-20 ನಿಮಿಷ ಬೇಯಿಸಿದರೆ ಕಡುಬು ಸವಿಯಲು ಸಿದ್ಧ.

FINANCE BONANZA
Upto ₹12,500 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
BIGGEST Deepavali SALE
UPTO 70% OFF
ಮಳಿಗೆಗಳು 10AM – 10PM ವರೆಗು ತೆರೆದಿರುತ್ತದೆ
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಉಚಿತ*
FIRE-BOLTT SMART CALLING WATCH WORTH ₹20000
EXCHANGE DHAMAKA
Upto ₹25,000
OFF ON EXCHANGE OF OLD TELEVISION, HOME APPLIANCES, LAPTOP & MOBILES*
FINANCE POWERED BY Groww
0% EMI ₹2,000 Cash Back
MIN PRODUCT VALUE ₹10,000
PAY JUST ₹1 TAKE HOME*
1 EMI FREE*
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
AU SMALL FINANCE BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
YES BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
HDFC BANK FESTIVE TREATS 10% INSTANT DISCOUNT ON CC & DC EMI* MIN SWIPE ₹20,000 MAX CASH BACK UPTO ₹2500
one card 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹7500
DBS BANK 7.5% INSTANT CASHBACK ON CC EMI* MIN SWIPE ₹15000 MAX CASH BACK UPTO ₹3000
5% INSTANT CASHBACK ON FULL SWIPE* MIN SWIPE ₹15000 MAX CASH BACK UPTO ₹1500
LG 77 4K SMART OLED OLED77B3PSA ಇ.ಎಮ್.ಐ ₹4,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 77 OLED 4K SMART TV 77S90C ಇ.ಎಮ್.ಐ ₹6,990 ಉಚಿತ: ₹63,900 ಮೌಲ್ಯದ SAMSUNG SOUNDBAR
SONY 65 4K ULTRA HD SMART OLED 65A80L ಇ.ಎಮ್.ಐ ₹6,500
Panasonic 55 OLED 4K SMART TV ಇ.ಎಮ್.ಐ ₹4,095 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 55 QLED SMART GOOGLE TV WITH FAR-FIELD & LOCAL DIMMING ಇ.ಎಮ್.ಐ ₹2,994 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
vivo V29E 8/128 5G OFFER PRICE ₹22,799* (PRICE AFTER CASH BACK*) ಇ.ಎಮ್.ಐ ₹3,799
Redmi 12 5G 6/128 OFFER PRICE ₹11,500* (PRICE AFTER CASH BACK*) ಇ.ಎಮ್.ಐ ₹1,917
ONEPLUS NORD CE 3 -8/128 OFFER PRICE ₹23,499* (PRICE AFTER CASH BACK*) ಇ.ಎಮ್.ಐ ₹3,916
iPhone 15\15 PRO\ PRO MAX STARTS FROM ₹74,990* (PRICE AFTER CASH BACK*) ಇ.ಎಮ್.ಐ ₹3,125
70% OFF ON DAMAGE PROTECTION
Apple Buds 2 Pro OFFER PRICE ₹22,990* (PRICE AFTER CASH BACK*) ಇ.ಎಮ್.ಐ ₹959
WATCH Ultra 2 OFFER PRICE ₹85,900* (PRICE AFTER CASH BACK*) ಇ.ಎಮ್.ಐ ₹3,579
SAMSUNG Galaxy A54 | A34 5G
ಇ.ಎಮ್.ಐ ₹3,555* Galaxy A54 5G ₹41,999 ₹31,999*
ಇ.ಎಮ್.ಐ ₹2,555* Galaxy A34 5G ₹34,499 ₹22,999*
(PRICE INCLUDING CASH BACK*)
hp 15s N4500 8GB,512GB SSD, 15.6" HD WIN 11 MSO 2021 OFFER PRICE ₹24,500* (PRICE AFTER CASH BACK) ಇ.ಎಮ್.ಐ ₹2,208
PAY RS. 2499 AND GET GOODIES WORTH ₹10999
Lenovo Slim 1 Ryzen 3 7320 8GB, 512GB, 15.6 FHD Win11 MSO 21 OFFER PRICE ₹33,990* (PRICE AFTER CASH BACK) ಇ.ಎಮ್.ಐ ₹2,833
ಉಚಿತ: METAL BT SMART WATCH WORTH ₹7999 5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
HOT DEAL i5-1035G1 8GB, 1TB HDD+ 256 GB SSD, 14" FHD, FINGER PRINT READER, WIN 10 HOME OFFER PRICE ₹34,290* (PRICE AFTER CASH BACK)
ಉಚಿತ: METAL BT SMART WATCH WORTH ₹7999
Lenovo Gaming 3 RYZEN 5 6600 8GB, 512GB SSD NVIDIA RTX 3050 4GB GFX 15.6 FHD WIN 11 MSO 21 OFFER PRICE ₹53,500* (PRICE AFTER CASH BACK) ಇ.ಎಮ್.ಐ ₹4,455
ಉಚಿತ: METAL BT SMART WATCH WORTH ₹7999 5% CASH BACK UPTO ₹5000 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
DELL Inspiron 15 3520 12th Gen i5-1235U, 16GB DDR4 /512GB SSD, 15.6" FHD/Win 11 + MSO 21, WIN 11 MSO 21 OFFER PRICE ₹54,190* (PRICE AFTER CASH BACK) ಇ.ಎಮ್.ಐ ₹4,516
ಉಚಿತ: METAL BT SMART WATCH WORTH ₹7999+UPTO ₹5000 CASHBACK + PAY ₹2499 AND GET GOODIES WORTH ₹12199
LG 635 Ltr SIDE BY SIDE L257CPZX ಇ.ಎಮ್.ಐ ₹4,999 ಉಚಿತ: FIRE-BOLTT SMART CALLING WATCH WORTH ₹20000
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL ಇ.ಎಮ್.ಐ ₹3,990 ಉಚಿತ: SAMSUNG 10 KG TOP LOADING WASHING MACHINE WORTH ₹32500
Godrej 564 Ltr SIDE BY SIDE ಇ.ಎಮ್.ಐ ₹2,525* ಉಚಿತ: FIRE-BOLTT SMART CALLING WATCH WORTH ₹20000
BOSCH 8 KG FRONT LOAD WASHING MACHINE ಇ.ಎಮ್.ಐ ₹3,574 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 KG FRONT LOAD WASHING MACHINE ಇ.ಎಮ್.ಐ ₹3,141 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR OK55 OFFER PRICE ₹21,265 ಇ.ಎಮ್.ಐ ₹1,772 (PRICE AFTER CASH BACK)
LG SOUND BAR SC9S OFFER PRICE ₹27,150 ಇ.ಎಮ್.ಐ ₹2,263 (PRICE AFTER CASH BACK)
LG 14 PLACE DISHWASHER WITH INVERTER DIRECT DRIVE DFB532FP ಇ.ಎಮ್.ಐ ₹2,999
Whirlpool 29Ltrs CONVECTION MICROWAVE OVEN ಇ.ಎಮ್.ಐ ₹1,371
WATER PURIFIERS UPTO 45% OFF
CHIMNEY UPTO 55% OFF
MIXER GRINDER UPTO 50% OFF
WATER HEATER UPTO 43% OFF
GIRIAS THE CONSUMER DURABLE PEOPLE Since 1971
ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್ ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633
STORE LOCATOR
Terms & conditions apply. Finance at the sole discretion of the Finance company. Upto 26000 Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.12,500 Bajaj cash back / vouchers valid only in selected cities & valid only on Selected models & Brands. EMI offers the above products based on 9,12,18,24 & fixed emi schemes. Price after Cash Back is valid on selected Bank CC & DB cards EMI Purchase only. Exchange offer valid on MRP and Product as to be in good working condition. Free smart watch valid on 20000 & above Purchase on select models & brands.
148 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಸಂಕ್ಷಿಪ್ತ ಸುದ್ದಿ

ಎಂಆರ್‌ಎಫ್‌ಗೆ ಲಾಭ

ನವದೆಹಲಿ (ಪಿಟಿಐ): ಎಂಆರ್‌ಎಫ್ ಲಿಮಿಟೆಡ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹587 ಕೋಟಿ ನಿವ್ವಳ ಲಾಭಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ (₹130 ಕೋಟಿ) ಈ ಬಾರಿ ಲಾಭವು 4.5 ಪಟ್ಟು ಹೆಚ್ಚಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ವರಮಾನ ಹೆಚ್ಚಾಗಿರುವುದು ಮತ್ತು ಕಚ್ಚಾ ಸಾಮಗ್ರಿಗಳ ಮೇಲಿನ ವೆಚ್ಚ ತಗ್ಗಿರುವುದರಿಂದ ಈ ಪ್ರಮಾಣದ ಲಾಭ ಸಾಧ್ಯವಾಗಿದೆ ಎಂದು ಹೇಳಿದೆ.

ಕಲ್ಲಿದ್ದಲು ಉತ್ಪಾದನೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಕಲ್ಲಿದ್ದಲು ಉತ್ಪಾದನೆಯು ಅಕ್ಟೋಬರ್‌ನಲ್ಲಿ ಶೇ 18.59ರಷ್ಟು ಹೆಚ್ಚಳ ಕಂಡಿದ್ದು 7.86 ಕೋಟಿ ಟನ್‌ಗೆ ತಲುಪಿದೆ. ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ 6.63 ಕೋಟಿ ಟನ್ ಉತ್ಪಾದನೆ ಆಗಿತ್ತು.

ಕೋಲ್ ಇಂಡಿಯಾ ಲಿಮಿಟೆಡ್‌ನ (ಸಿಐಎಲ್) ಕಲ್ಲಿದ್ದಲು ಉತ್ಪಾದನೆಯು 5.29 ಕೋಟಿ ಟನ್‌ನಿಂದ 6.10 ಕೋಟಿ ಟನ್‌ಗೆ ಶೇ 15ರಷ್ಟು ಹೆಚ್ಚಳ ಆಗಿದೆ ಎಂದು ಕಲ್ಲಿದ್ದಲು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಿದೆ.

ಜೊಮಾಟೊಗೆ ಲಾಭ

ನವದೆಹಲಿ (ಪಿಟಿಐ): ಜೊಮಾಟೊ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ತೆರಿಗೆ ನಂತರದ ಲಾಭ ₹36 ಕೋಟಿ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹251 ಕೋಟಿ ನಷ್ಟ ಅನುಭವಿಸಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,133
ಇಂದಿನ ಅಂತ್ಯ	19,230
▲	97
ದಿನದ ಗರಿಷ್ಠ	19,276

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹910 (910)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹818 (820)

ಹೊಸ ವಹಿವಾಟುಗಳಿಗೆ ಬೇಡಿಕೆ ನಿಧಾನ ಗತಿಯಲ್ಲಿ ಹೆಚ್ಚಳ: ಎಸ್ ಆ್ಯಂಡ್ ಪಿ

ಸೇವಾ ಚಟುವಟಿಕೆ: 7 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಸೇವಾ ವಲಯದ ಚಟುವಟಿಕೆಯು ಅಕ್ಟೋಬರ್‌ನಲ್ಲಿ 7 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ತಿಳಿಸಿದೆ.

ಸೇವೆಗಳಿಗೆ ಬೇಡಿಕೆಯು ನಿಧಾನ ಗತಿಯಲ್ಲಿ ಏರಿಕೆ ಕಂಡಿರುವುದು, ಕಂಪನಿಗಳಿಗೆ ಹೊಸ ವಹಿವಾಟುಗಳು ಕಡಿಮೆ ಪ್ರಮಾಣದಲ್ಲಿ ಸಿಗುತ್ತಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಪಿಎಂಐ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಸೆಪ್ಟೆಂಬರ್‌ನಲ್ಲಿ 61 ಇದ್ದಿದ್ದು ಅಕ್ಟೋಬರ್ ತಿಂಗಳಿನಲ್ಲಿ 58.4ಕ್ಕೆ ಇಳಿಕೆ ಆಗಿದೆ. ಮಾರ್ಚ್ ನಂತರದ ಕನಿಷ್ಠ ಮಟ್ಟದ ಬೆಳವಣಿಗೆ ಇದಾಗಿದೆ.

ಸೇವಾ ವಲಯದ 400 ಕಂಪನಿಗಳಿಂದ ಅಭಿಪ್ರಾಯ ಸಂಗ್ರಹಿಸಿ ಈ ವರದಿಯನ್ನು ಸಂಸ್ಥೆಯು ನೀಡಿದೆ.

ಮುಖ್ಯಾಂಶಗಳು
- ಹಣದುಬ್ಬರ; ಕುಸಿತ ವಹಿವಾಟು ನಡೆಸುವ ವಿಶ್ವಾಸ
- 27ನೇ ತಿಂಗಳಲ್ಲಿಯೂ ಸಕಾರಾತ್ಮಕ ಬೆಳವಣಿಗೆ

ಸೂಚ್ಯಂಕವು 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಮಟ್ಟ ಎಂದೂ 50ಕ್ಕಿಂತ ಹೆಚ್ಚು ಇದ್ದರೆ ಸಕಾರಾತ್ಮಕ ಮಟ್ಟ ಎಂದು ಪರಿಗಣಿಸಲಾಗುತ್ತದೆ.

ಹಲವು ಕಂಪನಿಗಳು ಹೊಸ ವಹಿವಾಟುಗಳನ್ನು ಪಡೆದುಕೊಂಡಿವೆ. ಆದರೆ, ಕೆಲವು ಕಂಪನಿಗಳಿಗೆ ನಿರೀಕ್ಷಿತ ಮಟ್ಟದಲ್ಲಿ ಬೇಡಿಕೆ ಬಂದಿಲ್ಲ. ಪೈಪೋಟಿ ಇರುವುದು ಸಹ ಒಟ್ಟು ಬೆಳವಣಿಗೆ ಮೇಲೆ ಪರಿಣಾಮ ಬೀರಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ

ಸಹಾಯಕ ನಿರ್ದೇಶಕ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

ಸೇವೆಗಳ ರಫ್ತು ಅಕ್ಟೋಬರ್‌ನಲ್ಲಿ ಎರಡನೇ ವೇಗದ ಬೆಳವಣಿಗೆ ಕಂಡಿದೆ. 2014ರ ಸೆಪ್ಟೆಂಬರ್‌ನಿಂದ ಸೇವಾ ವಲಯದ ಬೆಳವಣಿಗೆ ದಾಖಲಿಸುವುದು ಆರಂಭ ಆಯಿತು. ಏಷ್ಯಾ, ಯುರೋಪ್ ಮತ್ತು ಅಮೆರಿಕದಿಂದ ಬೇಡಿಕೆ ಹೆಚ್ಚಾಗುತ್ತಿದೆ ಎಂದು ಸಂಸ್ಥೆಯು ತಿಳಿಸಿದೆ.

ವೆಚ್ಚ ಹೆಚ್ಚಳ: ಆಹಾರ, ಇಂಧನ ಮತ್ತು ಸಿಬ್ಬಂದಿ ವೆಚ್ಚದಲ್ಲಿ ಏರಿಕೆ ಕಂಡಿರುವುದರಿಂದ ಅಕ್ಟೋಬರ್‌ನಲ್ಲಿ ಭಾರತದ ಕಂಪನಿಗಳ ವೆಚ್ಚದಲ್ಲಿ ಏರಿಕೆ ಕಂಡುಬಂದಿದೆ. ಕಂಪನಿಗಳು ಇದನ್ನು ತಮ್ಮ ಗ್ರಾಹಕರಿಗೆ ವರ್ಗಾವಣೆ ಮಾಡಿರುವುದು ಸಹ ಬೇಡಿಕೆ ಮೇಲೆ ಪರಿಣಾಮ ಬೀರುವಂತಾಗಿದೆ. ಹಣದುಬ್ಬರ ಹೆಚ್ಚಾಗುವ ಸಾಧ್ಯತೆಯು ವಹಿವಾಟು ನಡೆಸುವ ವಿಶ್ವಾಸವನ್ನು ಕುಗ್ಗಿಸಿದೆ ಎಂದು ಲಿಮಾ ಹೇಳಿದ್ದಾರೆ.

ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟಾರೆ ಬೆಳವಣಿಗೆಯನ್ನು ತಿಳಿಸುವ 'ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್' ಸೆಪ್ಟೆಂಬರ್‌ನಲ್ಲಿ 61 ಇದ್ದಿದ್ದು ಅಕ್ಟೋಬರ್‌ನಲ್ಲಿ 58.4ಕ್ಕೆ ಇಳಿಕೆ ಕಂಡಿದೆ. ತಯಾರಿಕೆ, ಸೇವಾ ಚಟುವಟಿಕೆಗಳು ಅಕ್ಟೋಬರ್‌ನಲ್ಲಿ ಬೆಳವಣಿಗೆಯ ವೇಗ ಕಳೆದುಕೊಂಡಿವೆ. ಸರಕು ಮತ್ತು ಸೇವೆಗಳ ಮೇಲಿನ ದರವು ಏರಿಕೆ ಕಂಡಿರುವುದರಿಂದ ಹೀಗಾಗಿದೆ ಎಂದು ಸಂಸ್ಥೆಯು ಹೇಳಿದೆ.

‘ರೇಮಂಡ್ ಸಮೂಹಕ್ಕೆ ಮೈನಿ ಪ್ರಿಸಿಷನ್‌ನ ಶೇ 59 ಷೇರು ’

ನವದೆಹಲಿ (ಪಿಟಿಐ): ಮೈನಿ ಪ್ರಿಸಿಷನ್ ಪ್ರಾಡಕ್ಟ್ಸ್ ಲಿಮಿಟೆಡ್‌ನಲ್ಲಿ (ಎಂಪಿಪಿಎಲ್) ಶೇ 59.25ರಷ್ಟು ಷೇರುಗಳನ್ನು ₹682 ಕೋಟಿಗೆ ಖರೀದಿ ಮಾಡುವುದಾಗಿ ರೇಮಂಡ್ ಸಮೂಹವು ಶುಕ್ರವಾರ ಹೇಳಿದೆ. ತನ್ನ ಎಂಜಿನಿಯರಿಂಗ್ ವಹಿವಾಟನ್ನು ಇನ್ನಷ್ಟು ಬಲಪಡಿಸಿಕೊಳ್ಳುವ ಉದ್ದೇಶದಿಂದ ಈ ಸ್ವಾಧೀನಕ್ಕೆ ಮುಂದಾಗಿರುವುದಾಗಿ ತಿಳಿಸಿದೆ.

ವಿದ್ಯುತ್ ಚಾಲಿತ ವಾಹನ, ರಕ್ಷಣೆ ಮತ್ತು ಅಂತರಿಕ್ಷ ಕ್ಷೇತ್ರದಲ್ಲಿ ಮೈನಿ ಪ್ರಿಸಿಷನ್ ಕಂಪನಿಯು ವಹಿವಾಟು ನಡೆಸುತ್ತಿದೆ.

ಈ ಸ್ವಾಧೀನ ಪ್ರಕ್ರಿಯೆಯ ಬಳಿಕ ಜೆಕೆ ಫೈಲ್ಸ್, ಆರ್‌ಪಿಎಎಲ್ ಮತ್ತು ಎಂಪಿಪಿಎಲ್ ವಹಿವಾಟುಗಳನ್ನು ಒಂದುಗೂಡಿಸಿ ಹೊಸ ಕಂಪನಿಯನ್ನು ರಚಿಸಲಾಗುವುದು. ಹೊಸ ಕಂಪನಿಯಲ್ಲಿ ರೇಮಂಡ್ ಲಿಮಿಟೆಡ್ ಶೇ 66.3ರಷ್ಟು ಷೇರುಪಾಲನ್ನು ಹೊಂದಲಿದೆ ಎಂದು ತಿಳಿಸಿದೆ. ಮೈನಿ ಪ್ರಿಸಿಷನ್‌ನ ಸ್ಥಾಪಕ ಗೌತಮ್ ಮೈನಿ ಅವರು ಎಂಜಿನಿಯರಿಂಗ್ ವಹಿವಾಟನ್ನು ಮುನ್ನಡೆಸಲಿದ್ದಾರೆ.

‘ರಿಲಯನ್ಸ್ ರಿಟೇಲ್ ತೆಕ್ಕೆಗೆ ಅರವಿಂದ್ ಬ್ಯೂಟಿ ಬ್ರ್ಯಾಂಡ್ಸ್’

ನವದೆಹಲಿ (ಪಿಟಿಐ): ರಿಲಯನ್ಸ್ ರಿಟೇಲ್ ಕಂಪನಿಯು ಅರವಿಂದ್ ಫ್ಯಾಷನ್ ಒಡೆತನದ ಅರವಿಂದ್ ಬ್ಯೂಟಿ ಬ್ರ್ಯಾಂಡ್ಸ್ ರಿಟೇಲ್ ವಹಿವಾಟನ್ನು ಖರೀದಿಸಲಿದೆ. ಸಮೂಹದ ಬಳಿ ಇರುವ ಫ್ರಾನ್ಸ್‌ನ ಸೆಫೋರಾ ಬ್ರ್ಯಾಂಡ್‌ನ ಭಾರತದ 28 ಮಳಿಗೆಗಳು ಸಹ ರಿಲಯನ್ಸ್ ನಿಯಂತ್ರಣಕ್ಕೆ ಬರಲಿದೆ.

ಅರವಿಂದ್ ಬ್ಯೂಟಿ ಬ್ರ್ಯಾಂಡ್‌ನಲ್ಲಿ ಹೊಂದಿರುವ ಅಷ್ಟೂ ಷೇರುಗಳನ್ನು ರಿಲಯನ್ಸ್ ಬ್ಯೂಟಿ ಆ್ಯಂಡ್ ಪರ್ಸನಲ್ ಕೇರ್ ಲಿಮಿಟೆಡ್‌ಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಅರವಿಂದ್ ಫ್ಯಾಷನ್ ಶುಕ್ರವಾರ ತಿಳಿಸಿದೆ. ಪೂರ್ಣ ಪ್ರಮಾಣದ ಷೇರನ್ನು ₹99.02ಕೋಟಿಗೆಖರೀದಿಸುವಒಪ್ಪಂದ ಮಾಡಿಕೊಂಡಿದೆ. ಷೇರು ಖರೀದಿ ಮೊತ್ತ ಸಾಲ ಮರುಪಾವತಿ ಮೊತ್ತವನ್ನೂ ಒಳಗೊಂಡು ಒಟ್ಟು ₹216 ಕೋಟಿ ಆಗಲಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ಅರವಿಂದ್ ಬ್ಯೂಟಿ ಬ್ರ್ಯಾಂಡ್ಸ್ 2022–23ನೇ ಹಣಕಾಸು ವರ್ಷದಲ್ಲಿ ₹336.70 ಕೋಟಿ ಮೌಲ್ಯದ ವಹಿವಾಟು ನಡೆಸಿದೆ. ಈ ಮೂಲಕ ಅರವಿಂದ್ ಫ್ಯಾಷನ್ಸ್‌ನ ಒಟ್ಟು ವರಮಾನದಲ್ಲಿ ಶೇ 7.60ರಷ್ಟು ಪಾಲು ಹೊಂದಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹10800
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ಮುಂಬೈ ಧಾರಣೆ

ಶೇಂಗಾ

03-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	875 (870)
ಪಾಮ್ ವಾರದ ಡೆಲಿವರಿ	820 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,000 (60,750)
ಬೆಳ್ಳಿ ಕೆ.ಜಿ 71,500 (71,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹311-509
ದ್ವಿತಳಿ (ಬಿ.ವಿ) ₹366-613

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹142.50
ಗುಡ್ ಲಾಟ್	₹131.50

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-48500
ಭದ್ರಾವತಿ	
ರಾಶಿ	38199-47019
ಹೊನ್ನಾವರ	
ಹಳೆಚಾಲಿ	37000-39000
ಹೊಸಚಾಲಿ	25000-34000
ಹೊಸನಗರ	
ಚಾಲಿ	26699-34599
ಕೆಂಪುಗೋಟು	33400-35309
ರಾಶಿ	44509-48679
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	30009-34899
ಕೋಕ	19089-32009
ಫ್ಯಾಕ್ಟರಿ	10169-26111
ಹಳೆಚಾಲಿ	39399-40399
ಹೊಸಚಾಲಿ	37299-40009
ಪುತ್ತೂರು	
ಹೊಸತು	34000-43500
ಶಿವಮೊಗ್ಗ	
ಬೆಟ್ಟೆ	46000-53382
ಗೊರಬಲು	17809-39069
ಹೊಸತು	44499-47001
ರಾಶಿ	38109-48199
ಸರಕು	47000-84600
ಸಿದ್ದಾಪುರ	
ಬಿಳಿಗೋಟು	31899-34599
ಚಾಲಿ	37869-40599
ಕೋಕ	30689-33888
ಕೆಂಪುಗೋಟು	28609-33609
ರಾಶಿ	43409-46309
ತಟ್ಟಿಬೆಟ್ಟೆ	39209-42109
ಶಿರಸಿ	
ಬೆಟ್ಟೆ	39518-45339
ಬಿಳಿಗೋಟು	29099-36809
ಚಾಲಿ	37399-41388
ಕೆಂಪುಗೋಟು	32629-34299
ರಾಶಿ	45099-47999
ಯಲ್ಲಾಪುರ	
ಅಪಿ	55879-66222
ಬಿಳಿಗೋಟು	26969-36299
ಚಾಲಿ	37519-41099
ಕೋಕ	18201-33869
ಕೆಂಪುಗೋಟು	26009-34805
ರಾಶಿ	46000-54599
ತಟ್ಟಿಬೆಟ್ಟೆ	37599-45800

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು–570005
ದೂರವಾಣಿ ಸಂಖ್ಯೆ : 0821–2526347
ಸಂಖ್ಯೆ:ಡಿಆರ್‌ಡಿಎ(2)/NRLM/ಹೊ.ಗು.ನೇ/23/22–23/23–24
ದಿನಾಂಕ: 27.10.2023

ಇ–ಟೆಂಡರ್ ಆಹ್ವಾನ

ಜಿಲ್ಲಾ ಪಂಚಾಯತ್ ಮೈಸೂರು ಸಂಜೀವಿನಿ–NRLM ಯೋಜನೆಯಡಿ ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಮಾನವ ಸಂಪನ್ಮೂಲ ಸಂಸ್ಥೆಯನ್ನು ಆಯ್ಕೆ ಮಾಡಲು ಇ–ಟೆಂಡರ್ ಆಹ್ವಾನ
ಟೆಂಡರ್ ಮೊತ್ತ ರೂ.80.88 ಲಕ್ಷಗಳು. ಇ.ಎಂ.ಡಿ ಮೊತ್ತ ರೂ.1,61,760/– (ಒಂದು ಲಕ್ಷದ ಅರವತ್ತೊಂದು ಸಾವಿರದ ಏಳು ನೂರ ಅರವತ್ತು ರೂ.ಗಳು ಮಾತ್ರ). ಟೆಂಡರ್ ಸಲ್ಲಿಸಲು ಕೊನೆಯ ದಿ: 07.11.2023 ಅಪರಾಹ್ನ 5.00 ಘಂಟೆ.ತಾಂತ್ರಿಕ ಬಿಡ್ ತೆರೆಯುವ ದಿ: 15.11.2023 ಬೆಳಗ್ಗೆ 11.30 ಘಂಟೆ.ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್ – https://eproc.karnataka.gov.in
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು
DIPR/DDMYS/KSMCA/579/2023-24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.
ಟೆಂಡರ್ ಸಂಖ್ಯೆ:– ಟೆಂಡರ್ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿ.ಇಂ./ಟೆಂಡರ್/2023–24/849 Date:31.10.2023

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ ಭದ್ರಾವತಿ ತಾಲ್ಲೂಕು ಕೃಷಿ ಮಾರುಕಟ್ಟೆ, ಸಮಗ್ರ ಕೆರೆ, ಗಿರಿಜನ ಯೋಜನೆ, ವಿವೇಕ ಶಾಲೆ, ಅನುಮೋದಿತ ಕಾಮಗಾರಿಗಳ ಟೆಂಡರ್ ಒಟ್ಟು ಮೊತ್ತ ರೂ.6357682.00 ಲಕ್ಷ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in/ ಈ ವೆಬ್‌ಸೈಟ್‌ನಲ್ಲಿ ದಿ: 31/10/2023 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 10/11/2023 ಸಂಜೆ 16.00 ರವರೆಗೆ ನಿಗದಿ ಪಡಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/12/11/23–24/705

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಬೆಂಗಳೂರು–560001
Tel:080-29565353, 29566556, 29604556, e-mail:splocaima21@gmail.com

SPLOCA/Ahana/01/2023-24 Dated:03.11.2023

ಸಾರ್ವಜನಿಕ ಪ್ರಕಟಣೆ

‘M/s. Ahana Souharda Credit Co-Operative Society., ದೂಷಿತ ಸಂಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ,2004 ರ ಕಲಂ 7(2) ರ ಅನ್ವಯ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕೆ.ಪಿ.ಐ.ಡಿ.ಎಫ್.ಇ ಕಾಯ್ದೆ 2004 ರ ಕಲಂ 5(1) ರ ಅನ್ವಯ ಸಹಾಯಕ ಆಯುಕ್ತರು–2, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಇವರನ್ನು ‘M/s. Ahana Souharda Credit Co-Operative Society., ದೂಷಿತ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು ಉಪವಿಭಾಗಾಧಿಕಾರಿಗಳು, ಹೊಸಪೇಟೆ ಉಪವಿಭಾಗ, ವಿಜಯನಗರ ಜಿಲ್ಲೆ ಇವರ ಕಛೇರಿಯಲ್ಲಿ ವಿತರಿಸಲಾಗುವುದು ಹಾಗೂ ಠೇವಣಿದಾರರು/ಅಧಿಕೃತ ಪ್ರತಿನಿಧಿ/ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: 07.11.2023 (ಮಂಗಳವಾರ) ದಿಂದ ಒಂದು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಸದರಿ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ: 06.12.2023 (ಬುಧವಾರ) ಸಂಜೆ 05:30 ರೊಳಗಾಗಿ ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ

ಕ್ರ. ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು (Depositor)	ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು (Nominee)	1. ಠೇವಣಿದಾರರ ಮರಣ ಪ್ರಮಾಣಪತ್ರ 2. ವಂಶವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು
3	ವಾರಸುದಾರರು (Legal heirs)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟನಾಮಿ (Nominee)ರವರ ಮರಣ ಪ್ರಮಾಣ ಪತ್ರ 4. ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ 5. ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6. ಉಳಿದ ವಾರಸುದಾರರ ಒಪ್ಪಿಗೆ (Consent from other legal heirs)
4	PoA – Power of Attorney	1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು.(ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2. ಹೊರದೇಶದಲ್ಲಿ ವಾಸಿಸುತ್ತಿರುವವರು Apostilled copy citizen card+Passport 3. ಮೇಲಿನ ಕ್ರ. ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney certificate ಸಲ್ಲಿಸತಕ್ಕದ್ದು. 4. PoA. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1. ಠೇವಣಿದಾರರ ಮರಣ ಪತ್ರ 2. ಗಾರ್ಡಿಯನ್ ನೇಮಕದ ದಾಖಲೆ 3. ಸ್ವಯಂ ದೃಢೀಕೃತ ದಾಖಲೆ

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಸಹಕಾರಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಕ್ರ. ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಉಳಿತಾಯ ಠೇವಣಿ (Savings Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ಉಳಿತಾಯ ಠೇವಣಿ ಪಾಸ್ ಪುಸ್ತಕ 3. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿಶ್ಚಿತ ಠೇವಣಿ (Fixed Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ಸಂಚಿತಠೇವಣಿ (Cumulative Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ಸಂಚಿತ ಠೇವಣಿ ಪ್ರಮಾಣ ಪತ್ರ 3. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
